
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಸೆಪ್ಟೆಂಬರ್ 05, 2012 ಪುಟ 20 ರೂ. 14/-

ಬರಗೂರು ಕಾವ್ಯ ಎಡಪಂಥೀಯ ನೆಲೆ






ಕಮ್ಮರಡಿ ಹನೀಫನ ದುಬೈ ಲಿಂಕ್?

ಬೆಮೆಲ್ ಕೃಷ್ಣಪ್ಪ ಕೊಲೆ

ರಗಾಲದ ಗಾಯಕ್ಕೆ ಪೊಲಿಟಿಕಲ್ ಪಿಕ್‌ನಿಕ್ ಬರೆ



ಶೋಕ್‌ಗೆ ಸಂಕಟ ತಂದಿಟ್ಟ ಮೇಯರ್ ವೆಂಕಟ

ಮೈಸೂರು : ಚಾಮುಂಡಿ ತಪ್ಪಲು ಭೂಗಳ್ಳರೇ ಒಕ್ಕಲು



ಹರಕೆಯ ಕುರಿಯಂತೆ ಹೆಣವಾದ ಮೆಂಟಲ್ ಸೀನಾ!



ಚಾರ್ವಾಕ




• ಶಿವಸುಂದರ

ಓಟು ಹಾಕುವುದು ಮತ್ತು ಹಾಕದಿರುವುದು

ಎರಡೂ ಅರ್ಥ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ...

ಈ ದೇಶದ ಮೇಲ್‌ಮಧ್ಯಮ ವರ್ಗದವರು ಮತ್ತು ಶ್ರೀಮಂತ ವರ್ಗದವರು ಓಟು ಹಾಕದಿರುವುದು ಹೊಸ ವಿದ್ಯಮಾನವೇನಲ್ಲ. ಚುನಾವಣೆ ಪ್ರಜಾತಂತ್ರವನ್ನು ಸೋಲಿಸುತ್ತಿರುವುದು ಅವರು ಓಟು ಹಾಕದೇ ಇರುವ ಕಾರಣದಿಂದಲ್ಲ. ಓಟು ಹಾಕಬಲ್ಲ ಜನಸಂಖ್ಯೆಯಲ್ಲಿ ಕೊಬ್ಬಿನ ಕಾರಣದಿಂದ ಓಟು ಹಾಕದ ಇಂಥವರ ಸಂಖ್ಯೆ ಶೇ.15ನ್ನೂ ದಾಟುವುದಿಲ್ಲ. ಆದರೆ ಸರಾಸರಿ ಪ್ರತಿ ಚುನಾವಣೆಯಲ್ಲಿ ಶೇ.50ರಷ್ಟು ಜನ ಓಟು ಹಾಕುತ್ತಿಲ್ಲ. ಹೀಗಾಗಿ ಪ್ರಶ್ನೆ ಈ ಸರ್ಕಾರಗಳಿಂದ ತಮ್ಮ ಬದುಕು ಸುಧಾರಿಸಬೇಕೆಂದು ಆಸೆ ಇಟ್ಟುಕೊಂಡು ಭ್ರಮನಿರಸನರಾದ ಉಳಿದ ಶೇ.35 ಜನರ ಬಗ್ಗೆ. ಅವರ ಹಾಕದಿರುವ ಓಟು ಏನನ್ನು ಸೂಚಿಸುತ್ತದೆ? ಮತ್ತು ಒಂದು ಪ್ರಜಾತಂತ್ರ ನಿಜಕ್ಕೂ ಪ್ರಾತಿನಿಧಿಕವಾಗಬೇಕೆಂದರೆ ಜನರ ಈ ಅಭಿಪ್ರಾಯವನ್ನೂ ಗಣನೆಗೆ ತೆಗೆದುಕೊಳ್ಳಬೇಕಲ್ಲವೇ? ಸಮಾಜವಾದಿ ರಾಷ್ಟ್ರಗಳಲ್ಲಿರಲಿ, ಇತ್ತೀಚೆಗೆ ಸಾಫ್ಟ್ ಕ್ಯಾಪಿಟಲಿಸ್ಟ್ ದೇಶಗಳಾದ ನಾರ್ವೆ, ಸ್ವೀಡನ್‌ಗಳಲ್ಲೂ ಇಂಥ ನಕಾರಾತ್ಮಕ ಓಟುಗಳನ್ನು ಗಣನೆಗೆ ತೆಗೆದುಕೊಳ್ಳುವ ಪ್ರಯತ್ನ ನಡೆದಿವೆ.

ಈ ದೇಶದ 60 ವರ್ಷದ ಪ್ರಜಾತಂತ್ರ ಓಟಿನ 'ಪಾವಿತ್ರ್ಯ'ವನ್ನಾಗಲೀ, ಮೌಲ್ಯವನ್ನಾಗಲೀ, ನಿರೀಕ್ಷೆಗಳನ್ನಾಗಲೀ ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಆದ್ದರಿಂದಲೇ ಓಟುಹಾಕಿದ ಜನಕ್ಕೆ ಈ ದೇಶದ ಚುನಾವಣಾ ವ್ಯವಸ್ಥೆಯ ಬಗ್ಗೆಯಾಗಲೀ ಅಥವಾ ಇಂದು ಭಾರತದಲ್ಲಿ ಆಚರಣೆಯಲ್ಲಿರುವ ರೀತಿಯ ಪ್ರಜಾತಂತ್ರದ ಬಗ್ಗೆಯಾಗಲೀ ಅಭಿಮಾನ ಅಥವಾ ನಿರೀಕ್ಷೆಗಳಿವೆ ಎಂದು ಅರ್ಥ ಮಾಡಿ ಕೊಳ್ಳುವುದು ತಪ್ಪಾಗುತ್ತದೆ. ಓಟಿನಲ್ಲಿ ಪಾಲ್ಗೊಳ್ಳುತ್ತಿರುವ ಬಹುಪಾಲು ಬಡಜನರು ಇಂದು ಚುನಾವಣೆಯನ್ನು ಕೇವಲ ಆ ಕ್ಷಣದ ವ್ಯಾವಹಾರಿಕ ದೃಷ್ಟಿಯಿಂದಷ್ಟೇ ನೋಡುತ್ತಿದ್ದಾರೆ ಅಥವಾ ತತ್‌ಕ್ಷಣದ ಕೆಲವು ಆರ್ಥಿಕ ಲಾಭಗಳ ದೃಷ್ಟಿಯಿಂದ ಮಾತ್ರ ಅತ್ಯಂತ ವ್ಯಾವಹಾರಿಕವಾಗಿ ಓಟು ಹಾಕುತ್ತಿದ್ದಾರೆ. ಇದೇ ವಾಸ್ತವ.



ಜನರಿಗೆ ಓಟನ್ನು ಮಾರಿಕೊಳ್ಳಬೇಡಿ ಎಂಬ ಕೂಗು ಅಸಂಬದ್ಧವಾಗಿ ಕಾಣಲು ಮುಖ್ಯ ಕಾರಣ ಅವರ ಓಟಿಗೆ ಕಳೆದ ಅರವತ್ತು ವರ್ಷಗಳಲ್ಲಿ ಬೇರೇ ಯಾವುದೇ ಕಿಮ್ಮತ್ತನ್ನು ಈ ಪ್ರಜಾತಂತ್ರ ಕೊಡದಿರುವುದೇ ಅಲ್ಲವೇ? ದಕ್ಷರು ಮತ್ತು ಜನಪರರು ಅಧಿಕಾರಕ್ಕೆ ಬರುವುದಾಗಲಿ, ತಮ್ಮ ಓಟಿನಿಂದ ಗೆದ್ದು ಬಂದವರು ತಮ್ಮ ಪರವಾಗಿ ಇಲ್ಲದಿರುವುದೂ ಮತ್ತು ತಮ್ಮಂಥವರು ಎಂದಿಗೂ ಅಧಿಕಾರದ ನೆರಳಿನ ಸಮೀಪವೂ ಹೋಗದಂತೆ ಆಗಿರುವುದರಿಂದಲೇ ತಮ್ಮ ಓಟಿಗೆ ಕಿಮ್ಮತ್ತು ಚುನಾವಣೆಯ ಸಮಯದಲ್ಲಿ ಮಾತ್ರ ದಕ್ಕುವುದೆಂದು ಜನರು ಅರ್ಥಮಾಡಿಕೊಳ್ಳುವಂತಾಗಿದೆ.

ಇದಕ್ಕೆ ಮತ್ತೆ "ದುಡ್ಡು ಮತ್ತು ಹೆಂಡಕ್ಕೆ ಓಟು ಮಾರಿಕೊಳ್ಳುವ ಜನರ"ನ್ನೇ ದೂರುವುದು ಹಸಿವಿನ ಸಾವಿಗೆ ಬಡತನವನ್ನು ದೂರಿದಂತಾಗುತ್ತದೆ. ಅಷ್ಟೆ. ವಾಸ್ತವವಾಗಿ 60 ವರ್ಷಗಳಾದರೂ ಈ ಚುನಾವಣೆಗಳು ಪ್ರಜೆಗಳನ್ನು ನಿಜವಾದ ಪ್ರಭುಗಳನ್ನಾಗಿ ಮಾಡಲಿಲ್ಲ. ಬದಲಿಗೆ ಅವರನ್ನು ಶಾಶ್ವತ ದೈನೇಸಿ ಸ್ಥಿತಿಯಲ್ಲಿಡಲಾಗಿದೆ. ಆದ್ದರಿಂದಲೇ ಚುನಾವಣಾ ಸಂದರ್ಭದಲ್ಲಿ ಪ್ರಜಾತಂತ್ರದ ಶೀಲವೇ ದುರಾಟವಾಗುತ್ತದೆ. ಈ ಪರಿಸ್ಥಿತಿ ಪ್ರಜಾತಂತ್ರದ ವೈಫಲ್ಯವಲ್ಲವೇ? ಪ್ರಜಾತಂತ್ರದ ಯಾವ "ಲಯ" ನಮ್ಮ ದೇಶದ ಪ್ರಜಾತಂತ್ರವನ್ನು ಇಷ್ಟು ಹೀನಾಯ ಸ್ಥಿತಿಗೆ ತಂದಿಳಿಸಿತು ಎಂದು ಅರ್ಥಮಾಡಿಕೊಂಡು ಅದನ್ನು ಬದಲಿಸಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡದೆ ಅದು ತನ್ನಂತೆ ತಾನೇ ಬದಲಾಗುವುದೇ?

ನಮ್ಮ ದೇಶದ ರಾಜಕೀಯ ಗಣಿತ ಮಾತ್ರವಲ್ಲ. ಅದು ಪ್ರಬಲರ, ಕುಲೀನರ ತಂತ್ರಕುತಂತ್ರಗಳ ರಣರಂಗ. ಪ್ರಜಾತಂತ್ರ ನೀಡಿರುವ ಈ ಅವಕಾಶವನ್ನೇ ಬಳಸಿಕೊಂಡು ಸಬಲರು ತಾವು ಬಹುಮತ ಪಡೆಯಲಾಗದ ಸಂದರ್ಭದಲ್ಲಿ ಒಂದೇ ಕ್ಷೇತ್ರದಲ್ಲಿ ಬೇಕೆಂದೇ ಜಾತಿ, ಭಾಷೆಯ ಹೆಸರಲ್ಲಿ ಹಲವರನ್ನು ನಿಲ್ಲಿಸಿ, ಮತಗಳು ಒಡೆಯುವಂತೆ ಮಾಡಿ ಬಹುಜನರಿಗೆ ಸಲ್ಲದ ವ್ಯಕ್ತಿಯೇ ಗೆಲ್ಲುವಂಥಾ ಚುನಾವಣಾ ತಂತ್ರವನ್ನು ಬಲಾಢ್ಯರು ರಚಿಸುತ್ತಿಲ್ಲವೇ? ಈ ಚುನಾವಣಾ ತಂತ್ರ ನೈಜ ಪ್ರಜಾತಂತ್ರವನ್ನು ಸೋಲಿಸುತ್ತಿಲ್ಲವೇ?

ಅಸಲಿ ಪ್ರಶ್ನೆ ಈ ಬಹುಮುಖಿ ಸ್ಪರ್ಧೆ ಅಥವಾ ಧ್ರುವೀಕೃತ ಸ್ಪರ್ಧೆ ಸಾಮಾನ್ಯ ಜನರನ್ನು ಕೂಡಾ ಪ್ರಭುಗಳನ್ನಾಗಿ ಮಾಡುವಂತಿದೆಯೇ ಎಂಬುದು? ಮೂಲಭೂತ ಪ್ರಶ್ನೆ ಕಣದಲ್ಲಿ ಇರುವ ಮುಖಗಳು "ಬಹುಮುಖಗಳೇ"? ಜನಸಾಮಾನ್ಯರ ಮುಖಗಳೇ? ಗೆದ್ದ ನಂತರ ಈ "ಮುಖಗಳು" ಏನಾದವು? ಗೆದ್ದವರನ್ನು ಜನರ ಸೇವಕರನ್ನಾಗಿಯೇ ಉಳಿಸಿಕೊಳ್ಳುವಷ್ಟು ಜನರನ್ನು ರಾಜಕೀಯವಾಗಿ ಸಬಲೀಕರಿಸಲು ನಮ್ಮ ಪ್ರಜಾತಂತ್ರ ಏಕೆ ಸಫಲವಾಗಿಲ್ಲ? ವ್ಯವಸ್ಥೆಯಲ್ಲಿ ಅಂಥಾ ಯಾವುದೇ ಸಾಂಸ್ಥಿಕ ರಚನೆಗಳೇಕಿಲ್ಲ? ಚುನಾವಣೆಗಳು ಅಂಥ ಸಬಲೀಕರಣದ ಮಾರ್ಗಗಳಾಗುವ ಬದಲು 'ಉಳ್ಳವರ ಕಣ್ಣ ಸನ್ನೆಗೆ ಅವರ ಕಾವಲು ನಾಯಿ'ಗಳಾಗುತ್ತಿರುವುದೇಕೆ?

ಪ್ರಜಾತಂತ್ರವಾದಿಗಳಿಗೆ ಈ ಪ್ರಶ್ನೆಗಳೇ ಬರುವುದಿಲ್ಲವೇಕೆ?

ಜನರನ್ನು ನೈಜ ಪ್ರಭುಗಳನ್ನಾಗಿ ಮಾಡುವಲ್ಲಿ ಪ್ರಜಾತಂತ್ರ ಎಂಬುದು 19ನೇ ಶತಮಾನದ ಒಂದು ಆವಿಷ್ಕಾರ. ಸಾಮಾನ್ಯ ಜನರ, ದುಡಿಯುವ ಜನರ ಮತ್ತು ರೈತ ಹೋರಾಟಗಳ ರಕ್ತಸಿಕ್ತ ಕ್ರಾಂತಿಯ ಫಲವಾಗಿಯೇ ಪ್ರಜಾಪ್ರಭುತ್ವವೆಂಬ ಆಡಳಿತ ವ್ಯವಸ್ಥೆ ಸೃಷ್ಟಿಯಾಯಿತು. ಆದರ ಸೃಷ್ಟಿಯಲ್ಲೇ ಜನರ ಪಾತ್ರವನ್ನು ನೆಪ ಮಾತ್ರಗೊಳಿಸುವ ಹುನ್ನಾರಗಳಿದ್ದೇ ಇತ್ತು. ಹೀಗಾಗಿಯೇ ಅದು ಸಾಮಾನ್ಯ ಜನರ ಸತತ ಹೋರಾಟಗಳಿಂದಾಗಿ ಅನಿವಾರ್ಯತೆಯಿಂದ ನೈಜ ಪ್ರಜಾಪ್ರಭುತ್ವವಾಗುವ ದಿಕ್ಕಿನಲ್ಲಿ ನಡೆದಿದೆಯೇ ಹೊರತು ಅದರ "ಸಹಜ ಲಯದಿಂದ" ತಾನೇತಾನಾಗಿ ಬದಲಾಗಿಲ್ಲ.

ಇಂದು ನಮ್ಮ ದೇಶದಲ್ಲಿ ಅನುಸರಿಸುತ್ತಿರುವ ಇಂಗ್ಲೆಂಡಿನ ವೆಸ್ಟ್‌ಮಿನಿಸ್ಟರ್ ಮಾದರಿ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಪ್ರಜಾತಂತ್ರದ ಅತ್ಯುತ್ತಮ ಮಾದರಿಯೆಂದು ಐರೋಪ್ಯ ದೇಶಗಳೇ ಒಪ್ಪಿಕೊಳ್ಳುವುದಿಲ್ಲ. ಹಲವಾರು ಐರೋಪ್ಯ ದೇಶಗಳಲ್ಲಿ "ಚಲಾಯಿಸಿದ ಮತಗಳಲ್ಲಿ ಹೆಚ್ಚು ಬಹುಮತ ಪಡೆದವರು -ಫಸ್ಟ್ ಪಾಸ್ಟ್ ದ ಪೋಸ್ಟ್ ಸಿಸ್ಟಂ- ಗೆಲ್ಲುತ್ತಾರೆ" ಎಂಬ ಪದ್ಧತಿಯನ್ನು ಅನುಸರಿಸುವುದಿಲ್ಲ. ಬದಲಿಗೆ ಒಂದು ಪಕ್ಷಕ್ಕೆ ದೇಶಾದ್ಯಂತ ಒಟ್ಟು ಎಷ್ಟು ಮತಗಳು ದಕ್ಕುತ್ತದೆಯೋ ಅದನ್ನು ಆಧರಿಸಿ ಸದನದಲ್ಲಿ ಅವರ ಪ್ರಾತಿನಿಧ್ಯದ ಪ್ರಮಾಣ ನಿಗದಿಯಾಗುತ್ತದೆ. ಇದು ಚಲಾಯಿಸಿದ ಮತಗಳ ಅಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ಪ್ರತಿನಿಧಿಸುವ ಒಂದು ವ್ಯವಸ್ಥೆಯಲ್ಲವೇ? ಪಕ್ಕದ ಶ್ರೀಲಂಕಾ ಹಾಗು ನೇಪಾಳದಲ್ಲಿ ಸಹ ಇದೇ ವ್ಯವಸ್ಥೆ ಇದೆ. ನೇಪಾಳ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮತಗಳನುಸಾರ ಪಕ್ಷದ ಪ್ರಾತಿನಿಧ್ಯಕ್ಕೆ ಮಾತ್ರ ಸೀಮಿತವಾಗದೆ ಪಕ್ಷವು ಸದನಕ್ಕೆ ಮಾಡುವ ನೇಮಕಾತಿಯಲ್ಲಿ ಜಾತಿ, ಲಿಂಗ, ವರ್ಗ, ಪ್ರದೇಶಗಳ ಪ್ರಮಾಣಾತ್ಮಕ ಪ್ರಾತಿನಿಧ್ಯವನ್ನು ಖಾತರಿಗೊಳಿಸಬೇಕೆಂದು ಸಂವಿಧಾನಾತ್ಮಕವಾಗಿ ಶಾಸನ ಮಾಡಿದೆ. ಭಾರತದ ಪ್ರಜಾತಂತ್ರದಲಯ ಪ್ರಜಾತಂತ್ರದ ಹಿನ್ನೆಲೆಯೇ ಇಲ್ಲದ ನೇಪಾಳಕ್ಕಿಂತಲೂ ಹೀನಾಯವಾಗಿದೆಯೇ? ಅದೇರೀತಿ ಇರಾನ್‌ನಲ್ಲಿ ಅಧ್ಯಕ್ಷ ಚುನಾವಣೆಯಲ್ಲಿ ಇಬ್ಬರಿಗಿಂತ ಜಾಸ್ತಿ ಪ್ರತಿನಿಧಿಗಳಿದ್ದೂ ಯಾರಿಗೂ ಶೇ.50ಕ್ಕಿಂತ ಜಾಸ್ತಿ ಮತದಾನ ಆಗದಿದ್ದರೆ, ಮೊದಲೆರಡು ಸ್ಥಾನ ಪಡೆದ ಅಭ್ಯರ್ಥಿಗಳ ನಡುವೆ ಮತ್ತೆ ಚುನಾವಣೆ ಏರ್ಪಡಿಸಿ ಅವರಲ್ಲಿ ಯಾರಿಗೆ ಶೇ.50ಕ್ಕಿಂತ ಹೆಚ್ಚಿನ ಮತಗಳು ಸಿಗುತ್ತವೆಯೋ ಅವರನ್ನು ಗೆದ್ದ ಅಭ್ಯರ್ಥಿಯೆಂದು ಘೋಷಿಸಲಾಗುತ್ತದೆ. ಭಾರತದ ಪ್ರಜಾತಂತ್ರದ ಲಯ ಇರಾನ್‌ಗಿಂತಲೂ ಹಿಂದಿದೆಯೇ? ಅವೆಲ್ಲಾ ಇರಲಿ. ಸಂವಿಧಾನ ತಿದ್ದುಪಡಿಗೆ ರಚಿಸಲಾಗಿದ್ದ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ನೇತೃತ್ವದ ಕರಡು ಸಮಿತಿಯೇ 2002ರಲ್ಲಿ ನೀಡಿದ ಶಿಫಾರಸ್ಸು ಗಳಲ್ಲಿ ನಮ್ಮ ಶಾಸನ ಸಭೆಗಳ ಪ್ರಾತಿನಿಧಿಕತ್ವ ಕುಸಿಯುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಇರಾನ್ ರೀತಿ ಮೊದಲೆರಡು ಸ್ಥಾನಗಳನ್ನು ಪಡೆದ ಅಭ್ಯರ್ಥಿಗಳ ನಡುವೆ ಮತ್ತೆ ಸ್ಪರ್ಧೆಯನ್ನು ಏರ್ಪಡಿಸಿ ಅವರಲ್ಲಿ ಶೇ.51ರಷ್ಟು ಮತ ಪಡೆದವರನ್ನು ಮಾತ್ರ ಗೆದ್ದವರೆಂದು ಘೋಷಿಸಬೇಕೆಂದು ಸಲಹೆ ಮಾಡಿತ್ತು!

ಅಷ್ಟು ಮಾತ್ರವಲ್ಲ, ನಕಾರಾತ್ಮಕ ಓಟಿನ ಹಕ್ಕಿನ ಬಗ್ಗೆ ಸಂಸದೀಯ ಪ್ರಜಾತಂತ್ರದ ತಾಯ್ನೆಲದಲ್ಲೇ ಅಂಥಾ ಮತಗಳಿಗೆ ಇನ್ನೂ ಹೆಚ್ಚು ಮಾನ್ಯತೆ ನೀಡುವ ಪ್ರಕ್ರಿಯೆ ಚಲಾವಣೆಯಲ್ಲಿದೆ. ಕಣದಲ್ಲಿರುವ ಯಾವ ಅಭ್ಯರ್ಥಿಯೂ ತನ್ನ ಆಯ್ಕೆಯಲ್ಲ - None Of The Abo[...] NOTA- ಎಂಬ ಆಯ್ಕೆಯನ್ನು ಎಲೆಕ್ಟ್ರಾನಿಕ್ ಓಟ[...] ಮೆಷೀನ್‌ನಲ್ಲೇ ಸೇರಿಸಬೇಕೆಂದು ಚುನಾವ[...] ಆಯೋಗವೂ ಸಲಹೆ ಮಾಡಿದೆ. ನಾರ್ವೆಯಲ್ಲಿ [...] NOTA- ಓಟುಗಳು ಅರ್ಧಕ್ಕಿಂತ ಜಾಸ್ತಿಯಾ[...] ಅಂಥ ಕ್ಷೇತ್ರಗಳಲ್ಲಿ ಚುನಾವಣೆಯನ್ನೇ ರದ್ದುಗೊಳಿ[...] ಪ್ರಸ್ತಾಪವಿದೆ. ಹಾಗೆಯೇ ಹೊಸದಾಗಿ ನಡೆಯ[...] ಚುನಾವಣೆಯಲ್ಲಿ ಹಳೆಯ ಅಭ್ಯರ್ಥಿಗಳು ಸ್ಪರ್ಧಿ[...] ನಿಷೇಧ ಹೇರಲಾಗುತ್ತಿದೆ. ಇವೆಲ್ಲವೂ ಜನರ ಸಕಾರ[...] ಓಟರಲಿ ನಕಾರಾತ್ಮಕ ಓಟಿಗೆ ಇನ್ನೂ ಹೆಚ್ಚಿನ ಕಿಮ್ಮ[...] ವ್ಯವಸ್ಥಿತವಾಗಿ ಒದಗಿಸುವ ಪ್ರಯತ್ನವಲ್ಲವೇ? ಇದ[...] ಆ ದೇಶಗಳಲ್ಲಿ ನಿಜಕ್ಕೂ ವ್ಯವಸ್ಥೆ ಶ್ರೀಸಾಮಾ[...] ಪರವಾಗಿದೆ ಎಂದಲ್ಲ. ಆದರೂ ಜನರ ಹೋ[...] ಗಳಿಂದಾಗಿ ಆ ದೇಶಗಳಲ್ಲಿ ಜನರ ಓಟಿಗೆ ನ[...] ದೇಶಕ್ಕಿಂತ ಹೆಚ್ಚಿನ ಕಿಮ್ಮತ್ತನಂತೂ ಸಾಧಿಸಿಕೊಳ್ಳಲಾ[...] ವ್ಯವಸ್ಥೆಯನ್ನು ಇರುವ ಚೌಕಟ್ಟಿನಲ್ಲೇ ಇನ್ನಷ್ಟು ಜ[...] ಗೊಳಿಸಬಹುದಾದ ಸಾಧ್ಯತೆಯನ್ನು ಸಹ ನಮ್ಮ ದೇಶ[...] ಪರಿಶೀಲಿಸಲಾಗಿಲ್ಲ.

ಇಂದು ನಮ್ಮ ಲೋಕಸಭೆ ಮತ್ತು ವಿಧಾನಸಭೆ[...] ಕೋಟ್ಯಾಧೀಶರ ಅಸೆಂಬ್ಲಿಯಾಗಿದೆಯೇ [...] ಶ್ರೀಸಾಮಾನ್ಯರ ಪ್ರತಿನಿಧಿಯಾಗುಳಿದಿಲ್ಲ. ಪ್ರಸ್ತುತ [...] ಅನುಸರಿಸುತ್ತಿರುವ ಚುನಾವಣಾ ಮತ್ತು ಪ್ರಜಾತ[...] ಮಾದರಿಗಳೇ ಜನಸಾಮಾನ್ಯರನ್ನು ಅಧಿಕಾರದಿಂದ ಇ[...] ಮತ್ತಷ್ಟು ದೂರಗೊಳಿಸುತ್ತಿದೆ. ಈ ಲಯದಲ್ಲೇ [...] ದೇಶದ ಪ್ರಜಾತಂತ್ರ ಮುಂದುವರೆದಲ್ಲಿ ಈಗಿ[...] ಅಲ್ಪಸ್ವಲ್ಪ ಪ್ರಜಾತಂತ್ರವೂ ಮಾಯವಾಗಿಬಿ[...] ಅಪಾಯವಿಲ್ಲವೇ?

ಉದಾರವಾದಿ ಪ್ರಜಾಪ್ರಭುತ್ವವನ್ನು ಅಂಬೇ[...] ಅವರೇ ಪ್ರತಿಪಾದಿಸಿದ್ದು ನಿಜ. ಆದರೆ ಅ[...] ಅಪಾಯಗಳ ಬಗ್ಗೆ ಅವರಿಗಿದ್ದಷ್ಟು ಸ್ಪಷ್ಟವಾದ ಅ[...] ಈಗಿನ ಬುದ್ಧಿಜೀವಿಗಳಿಗೂ ಇಲ್ಲ. ಉದಾರವಾ[...] ರೀತಿ ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃ[...] ಸಮಾನ ಹರಿಕಾರರಾಗಿ ಕಂಡರೂ "ಸಮಾನ[...] ತಳಹದಿಯಿಲ್ಲದ ಸ್ವಾತಂತ್ರ್ಯ ಉಳ್ಳವರಿಗೆ ಮಾತ್ರ [...] ಕೂಲ ಮಾಡಿಕೊಡುತ್ತದೆ" ಎಂದು ಸ್ಪಷ್ಟವಾಗಿ ಘೋ[...] ದ್ದರು. ಅದೇರೀತಿ ಅವರೇ ನೀಡಿದ ಈ ಉದಾರ[...] ಸಂವಿಧಾನ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ[...] ಸಾಗುವಂತಾಗದಿದ್ದರೆ "ಜನರೇ ಈ ಸಂವಿಧಾನಕ್ಕೆ [...] ಹಚ್ಚುತ್ತಾರೆ" ಎಂದೂ ಭವಿಷ್ಯ ನುಡಿದಿದ್ದರು. ಅ[...] ಸಾರಾಂಶದಲ್ಲಿ ಅವರ ಕನಸಿನ ಪ್ರಜಾಪ್ರಭುತ್ವ ಕೆ[...] ಐರೋಪ್ಯ ಮಾದರಿ ಉದಾರವಾದಿ ನೆಲೆಯಲ್ಲಿ ವ[...] ಇರಲಿಲ್ಲ.ಆದ್ದರಿಂದಲೇ ನೈಜ ಪ್ರಜಾಪ್ರಭುತ್ವವಾದಿ[...] ಕೇಳ ಬೇಕಾದ ಪ್ರಶ್ನೆ ಪ್ರಜಾತಂತ್ರದ ಸಿಪ್ಪೆಯ ಬಗ್ಗೆ[...] ಕೊಳೆಯುತ್ತಿರುವ ಅದರ ಹೂರಣದ ಬಗ್ಗೆ. ಸಮ[...] ವಾದಿ ಆಶಯವನ್ನು ಹೇಗೆ ಶಾಶ್ವತ ಗೆಲುವಿ[...] ಕೊಂಡೊಯ್ಯ ಬಹುದೆಂಬುದೇ ನಿಜವಾದ ಸಮಾಜ[...] ಗಳೆಲ್ಲರ ಮುಂದಿನ ಪ್ರಶ್ನೆ. ಇದು ಒಂದು ಐತಿಹಾ[...] ವಿದ್ಯಮಾನದ ಪ್ರಶ್ನೆ ಮತ್ತು ಇಡೀ ಜಗತ್ತಿನ [...] ಬಗೆಯ ಸಮಾಜವಾದಿಗಳು ಎದುರಿಸುತ್ತಿರುವ ಸಮಾಜವಾದದ ಭವಿಷ್ಯದ ಪ್ರಶ್ನೆ.

ನೋ ಕಾಮೆಂಟ್ಸ್

"25,000 ರೂಪಾಯಿವರೆಗಿನ ಬೆಳೆಸಾಲ ಮನ್ನಾ ಮಾಡಲಾಗುವುದು ಎಂದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಘೋಷಿಸಿದ್ದಾರೆ. ಆದರೆ ಈ ಕುರಿತು ಆದೇಶ ಹೊರಡಿಸಿಲ್ಲ. 25,000 ರೂ.ಗಿಂತ ಹೆಚ್ಚಿನ ಸಾಲ ಮನ್ನಾ ಆಗುವುದಿಲ್ಲ. ಆದರೆ ಅದಕ್ಕೆ ಯಾವ ಪ್ರಮಾಣದ ಬಡ್ಡಿ ವಿಧಿಸಬೇಕು ಎಂಬ ಕುರಿತು ಸ್ಪಷ್ಟನೆ ಇಲ್ಲ. ಕೃಷಿ ಸಹಕಾರ ಸಂಘಗಳು ರೈತರಿಗೆ ಸಾಲ ನೀಡಲು ವಿವಿಧ ಬ್ಯಾಂಕುಗಳಿಂದ ಸಾಲ ಪಡೆದಿರುತ್ತವೆ. ರೈತರು ಸಾಲ ಪಾವತಿ ಮಾಡದಿದ್ದರೂ, ಸಂಘಗಳು ತಮಗೆ ಸಾಲ ನೀಡಿದ ಬ್ಯಾಂಕುಗಳಿಗೆ ನಿಗದಿತ ಅವಧಿಯಲ್ಲಿ ಮರುಪಾವತಿ ಮಾಡಬೇಕಾಗುತ್ತದೆ. ಸಹಕಾರಿ ಸಂಘಗಳು ನಡೆಯುವುದೇ ಸಾಲ ಪಡೆದುಕೊಂಡವರು ನೀಡುವ ಬಡ್ಡಿಯ ಹಣದಲ್ಲಿ. ನಾವು ಬ್ಯಾಂಕುಗಳಿಂದ ಪಡೆದುಕೊಂಡ ಸಾಲವನ್ನು ನಿಗದಿತ ಅವಧಿಯಲ್ಲಿ ಬಡ್ಡಿ ಸಮೇತ ಹಿಂತಿರುಗಿಸಲೇ ಬೇಕು. ಸಾಲಮನ್ನಾ ಆದೇಶ ಮತ್ತು ಹಣವನ್ನು ತಕ್ಷಣ ಸಹಕಾರ ಸಂಘಗಳಿಗೆ ಒದಗಿಸದಿದ್ದರೆ ಸಿಬ್ಬಂದಿಗೆ ವೇತನ ನೀಡಲೂ ಸಾಧ್ಯವಾಗದ ಪರಿಸ್ಥಿತಿ ಎದುರಾಗುತ್ತದೆ."

-ಕೆ. ಮಹಾಂತಪ್ಪ, ಅಧ್ಯಕ್ಷ, ರಾಜ್ಯ ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಬ್ಯಾಂಕ್‌ಗಳ ಕ್ಷೇಮಾಭಿವೃದ್ಧಿ ಮಹಾಮಂಡಳ

"ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ನಡೆದ ಹಿಂಸಾಚಾರದ ಕುರಿತು ಸಿಬಿಐ ವಿಚಾರಣೆ ಏಕಾಗಬಾರದು? ಅದರಿಂದ ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬರುತ್ತದೆ ಎಂಬ ವಿಷಯ. ಅದರ ಬಗ್ಗೆ ನೀವು ತಲೆ ಕೆಡಿಸಿಕೊಳ್ಳಬೇಡಿ. ತನಿಖೆ ಇಲ್ಲವೇ ವಿಚಾರಣೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯಯುತ ನಡವಳಿಕೆ ಮುಖ್ಯ. ಖಾಸಗಿಯವರಿಗೆ ಯಾಕೆ ತನಿಖೆ ಒಪ್ಪಿಸುತ್ತೀರಿ? ಹಾಗೆಯೇ ನಿವೃತ್ತ ಅಧಿಕಾರಿಗಳನ್ನೂ ತರಬೇಡಿ. ಸಿಬಿಐ ತನಿಖೆಯಲ್ಲೂ ಸ್ಥಳೀಯ ಸಿಬ್ಬಂದಿ ಬೇಡ. ದಿಲ್ಲಿಯಿಂದ ಕರೆಸಿಕೊಳ್ಳಿ."

-ಸುಪ್ರೀಂಕೋರ್ಟ್

"ಸಣ್ಣಪುಟ್ಟ ಉಲ್ಲಂಘನೆಗಳನ್ನು ನಡೆಸಿರುವ ಯಾವ 16 ಗಣಿಕಂಪನಿಗಳ ಪುನರಾರಂಭಕ್ಕೆ ಅವಕಾಶ ನೀಡಲು ಸುಪ್ರೀಂಕೋರ್ಟ್ ನೇಮಿಸಿರುವ ಉನ್ನತಾಧಿಕಾರ ಸಮಿತಿ ಶಿಫಾರಸ್ಸು ಮಾಡಿದೆಯೋ ಆ ಕಂಪನಿಗಳಿಂದ ಸಂಡೂರು ತಾಲ್ಲೂಕಿನ ವಾಯು ಮಾಲಿನ್ಯ, ಸ್ಥಳೀಯ ಕೃಷಿ ಉತ್ಪಾದನೆ ಮತ್ತು ಹೈನುಗಾರಿಕೆಯ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಈ ಪ್ರದೇಶದ ಮುಖ್ಯ ಬೆಳೆಯಾದ ಮುಸುಕಿನ ಜೋಳದ ಫಸಲು ಹತ್ತು ವರ್ಷದ ಹಿಂದಿನ ಸ್ಥಿತಿಗೆ ಹೋಲಿಸಿದರೆ ಮೂರನೆಯ ಒಂದು ಪ್ರಮಾಣಕ್ಕೆ ಕುಸಿದಿದೆ."

-ಸಮಾಜ ಪರಿವರ್ತನಾ ಸಮುದಾಯ

"ಬಿಜೆಪಿ ಹಿರಿಯ ಮುಖಂಡ ಯಡಿಯೂರಪ್ಪನವರು ಆರಂಭಿಸಿರುವ ಬರ ಅಧ್ಯಯನ ಪ್ರವಾಸ ರಾಜಕೀಯ ಪ್ರೇರಿತ ಮಹಾ ನಾಟಕ. ಸಾಮಾನ್ಯ ಶಾಸಕರಾದ ಯಡಿಯೂರಪ್ಪನವರಿಗೆ ವಿಶೇಷ ಅಧಿಕಾರವಿಲ್ಲ. ಅವರು ಬರಪರಿಸ್ಥಿತಿ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವ ಅಗತ್ಯವೇನಿದೆ? ಕಂದಾಯ, ಗ್ರಾಮೀಣಾಭಿವೃದ್ಧಿ, ಕೃಷಿ, ತೋಟಗಾರಿಕೆ, ಇಂಧನ ಇಲಾಖೆ ಸಚಿವರನ್ನು ಒಳಗೊಂಡ ಸಂಪುಟ ಉಪಸಮಿತಿ ಬರ ಅಧ್ಯಯನ ಕೈಗೊಳ[...] ನಾಡಿನ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹ[...] ಪ್ರಕಟಿಸಲಿ."

- ಸಿದ್ದರಾಮ[...]

"ರಾಜ್ಯದ ರಸ್ತೆಗಳ ಜಾಲ ದಕ್ಷಿಣ ಭಾರತದಲ್ಲೇ ಅತ್ಯುತ್ತಮವಾದುದ[...] ಆದರೆ ಆ ರಸ್ತೆಗಳ ಸಮರ್ಪಕ ನಿರ್ವಹಣೆ ಆಗುತ್ತಿಲ್ಲ. ಕಳೆದ ಎರ[...] ವರ್ಷಗಳಲ್ಲಿ ಹೊಸ ಯೋಜನೆಗಳು ಅನುಷ್ಠಾನಕ್ಕೆ ಬಂದಿಲ್ಲ ಎಂಬು[...] ನಿಜ. ಆದರೆ ಈಗಿರುವ ರಸ್ತೆಗಳನ್ನೂ ಸಮರ್ಪಕವಾಗಿ ನಿರ್ವಹ[...] ಮಾಡುವುದೂ ಮುಖ್ಯ. ಆದರೆ ನಮ್ಮ ರಾಜಕಾರಣಿಗಳು ರಸ್ತೆ[...] ನಿರ್ವಹಣೆಗಿಂತ ಹೊಸ ರಸ್ತೆಗಳ ನಿರ್ಮಾಣಕ್ಕೆ ಆಸಕ್ತಿ ವಹಿಸುತ್ತಾರೆ[...]"

-ಬಿ.ಹೆಚ್. ಅನಿಲ್ ಕುಮಾರ್, ರಸ್ತೆ ನಿರ್ಮಾಣ ನಿಗಮದ ಎ[...]


ನಂಬಿದ್ರೆನಂಬಿ ಬಿಟ್ರೆಬಿಡಿ

"ಪ್ರತಿವರ್ಷ ಕಸದ ವಿಲೇವಾರಿಗೆ 350 ಕೋಟಿ ರೂಪಾ[...] ವೆಚ್ಚವಾಗುತ್ತಿದೆ. ಆದರೆ ಕೇವಲ 60 ಕೋಟಿ ರೂಪಾಯಿಯನ್ನು ಮ[...] ಕಸದ ಸೆಸ್ ಆಗಿ ಸಂಗ್ರಹಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಸದ [...] ಹೆಚ್ಚಳ ಅನಿವಾರ್ಯ. ಆದರೆ ಎಷ್ಟು ಹೆಚ್ಚಳ ಮಾಡಬೇಕೆಂಬುದ[...] ಚರ್ಚಿಸಿ ತೀರ್ಮಾನಿಸಲಾಗುವುದು."

- ಶಂಕರಲಿಂಗೇಗೌಡ, ಬಿಬಿಎಂಪಿ ಆಯ[...]

ಭಾವನೆಗಳು ಮತ್ತು ಆದ್ಯತೆಗಳ ತರ್ಕ


ಕಂಡಹಾಗೆ



• ಗೌರಿ ಲಂಕೇಶ್

...ಅಸ್ಸಾಂ ರಾಜ್ಯ ಮತ್ತು ಮ್ಯಾನ್ಮಾರ್ ದೇಶದಲ್ಲಿ ...ಸಲ್ಮಾನರ ಹತ್ಯೆಯಾಗುತ್ತಿದೆ, ಅದನ್ನು ಪ್ರತಿಭಟಿಸಬೇಕು ...ಮು ಇತ್ತೀಚೆಗೆ ಮುಂಬೈ ನಗರದಲ್ಲಿ ಕರೆದಿದ್ದ ಬೃಹತ್ ...ಯು ಹಿಂಸೆಗೆ ತಿರುಗಿ ಇಬ್ಬರ ಸಾವು, ಹತ್ತಾರು ಜನರಿಗೆ ... ಮತ್ತು ಅಪಾರ ಪ್ರಮಾಣದ ಆಸ್ತಿಪಾಸ್ತಿಗೆ ...ವನ್ನುಂಟುಮಾಡಿತು. ಇಂತಹ ಪ್ರತಿಭಟನೆಗಳು ಬೇಕೆ? ...ಗಳನ್ನು ನಿಯಂತ್ರಿಸುವುದು ಹೇಗೆ ಎಂದೆಲ್ಲ ಎಲ್ಲೆಡೆ ...ಯಾಗುತ್ತಿದೆ. ಈ ಸಂದರ್ಭದಲ್ಲಿ 'ಅದ್ನಾನ್' ಎಂಬು ...ಸಲ್ಮಾನ್ ಬರಹಗಾರ ತಮ್ಮ ಬ್ಲಾಗ್‌ನಲ್ಲಿ ಭಾರತೀಯ ...ಸಲ್ಮಾನರ ಆದ್ಯತೆಗಳನ್ನು ಕುರಿತು 'ನಮ್ಮ ಹೃದಯ ...ರಿಗೂ ಮಿಡಿಯಬೇಕು... ಕೇವಲ ಮುಸ್ಲಿಮರಿಗಲ್ಲ' ...ಬ ಲೇಖನವನ್ನು ಬರೆದಿದ್ದಾರೆ. ಅದು ...ಯೋಚಿತವಾಗಿರುವುದರಿಂದ ಅದರ ಅನುವಾದವನ್ನು ... ನೀಡುತ್ತಿದ್ದೇನೆ.

"ಇತ್ತೀಚಿನ ಎರಡು ಘಟನೆಗಳು - ದೆಹಲಿಯಲ್ಲಿ ...ಬಾದಿ ಮಸೀದಿಯ ಸುತ್ತ ನಡೆದ ವಿವಾದ ಮತ್ತು ...ಂಬೈನ ಆಜಾದ್ ಮೈದಾನದಲ್ಲಿ ಅಸ್ಸಾಂ ಮತ್ತು ...ನ್ಮಾರ್‌ನಲ್ಲಿ ಮುಸಲ್ಮಾನರ ಮೇಲಾಗುತ್ತಿರುವ ದಾಳಿಗಳನ್ನು



...ಭಟಿಸಲು ಕರೆದಿದ್ದ ಸಾರ್ವಜನಿಕ ಸಭೆಯಲ್ಲಿ ನಡೆದ ...ಸಾಚಾರ-ಎಲ್ಲಾ ಭಾರತೀಯ ಮುಸಲ್ಮಾನರಿಗೆ ...ಚ್ಚರಿಕೆಯ ಗಂಟೆ ಆಗಬೇಕಿದೆ.

... ಆ ಎರಡು ಪ್ರಕರಣಗಳ ಬಗ್ಗೆ ಚರ್ಚಿಸುವ ಮುನ್ನ ...ದು ನೆನಪನ್ನು ಹಂಚಿಕೊಳ್ಳಬೇಕಿದೆ. ನನಗಿನ್ನೂ ಚೆನ್ನಾಗಿ ...ಪಿರುವಂತೆ 70ರ ದಶಕದ ಅಂತ್ಯದಲ್ಲಿ ಮತ್ತು 80ರ ...ಶಕದ ಆರಂಭದಲ್ಲಿ ನಿದಾ-ಎ-ಮಿಲ್ಲತ್ ಮತ್ತು ಸಲೇಮಾನ್ ...ಬ ಎರಡು ಉರ್ದು ಪತ್ರಿಕೆಗಳು ಪ್ಯಾಲೆಸ್ಟೇನಿಯರ ...ಡಿನ ಬಗ್ಗೆ ಲೇಖನಗಳನ್ನು ಪ್ರಕಟಿಸಲು ಗ್ಯಾಲಾನುಗಟ್ಟಲೆ ...ಯನ್ನು ವರ್ಷವಿಡೀ ಸುರಿಯುತ್ತಿದ್ದವು.

... ಅದು ಆ ಪತ್ರಿಕೆಗಳಿಗೆ ಕೇವಲ ಆಸಕ್ತಿ ಆಗಿರದೆ ...ದು ಗೀಳಾಗಿತ್ತು, 80ರ ದಶಕದ ಎರಡನೆ ಭಾಗದಲ್ಲಿ ...ರ್ದು ಪತ್ರಿಕೆಗಳು ಇಳಿಮುಖವಾಗಿದ್ದರಿಂದ ದೂರದ ...ದೇಶದ ಆಗುಹೋಗುಗಳ ಬಗ್ಗೆ ಭಾರತೀಯ ...ಸಲ್ಮಾನರ ಆಸಕ್ತಿ ಸ್ವಲ್ಪಮಟ್ಟಿಗೆ ಕಡಿಮೆ ಆಯಿತು.

... ಅದೇ ಹೊತ್ತಿಗೆ ಇಲ್ಲಿ ಅಯೋಧ್ಯ ಆಂದೋಲನ ...ರಂಭವಾಗಿದ್ದು ಅದರ ಬಿಸಿ ಇಲ್ಲಿನ ಮುಸಲ್ಮಾನರನ್ನು ...ಗಲಾರಂಭಿಸಿತು. ಆದರೆ ಬಾಬ್ರಿಮಸೀದಿಯನ್ನು ...ವಿದಾಗ, ಆನಂತರ ಕೋಮುಗಲಭೆಗಳು ಸಂಭವಿಸಿದಾಗ ಬೇರೆ ಇಸ್ಲಾಮಿಕ್ ದೇಶಗಳಾಗಲಿ, ಇತರೆ ದೇಶಗಳ ಪ್ರಜೆಗಳಾಗಲಿ ಭಾರತೀಯ ಮುಸಲ್ಮಾನರಿಗೆ ಕಣ್ಣೀರು ಹಾಕಿದ್ದಲ್ಲ, ಇಲ್ಲಿನ ಮುಸಲ್ಮಾನರ ಪರ ಖಂಡನಾ ಹೇಳಿಕೆಗಳನ್ನು ಕೊಟ್ಟಿದ್ದಾಗಲಿ ಇಲ್ಲವೇ ಇಲ್ಲ, ಅಷ್ಟೇ ಯಾಕೆ, ಗುಜರಾತಿನಲ್ಲಿ ನಡೆದದ್ದು ಯಾವ ಪರದೇಶ ಗಟ್ಟಿದನಿಯಲ್ಲಿ ವಿರೋಧಿಸಿತ್ತು?

ವಾಸ್ತವವಾಗಿ, ನಮ್ಮ ಪರವಾಗಿ ಪರ ದೇಶದವರು ದನಿ ಎತ್ತುವ ಅಗತ್ಯವಿಲ್ಲ, ನಮ್ಮದು ಪ್ರಜಾತಂತ್ರ ದೇಶ. ಇತರೆ ದೇಶಗಳಂತೆ, ಸಮುದಾಯಗಳಂತೆ, ನಮ್ಮಲ್ಲೂ ಸಮಸ್ಯೆಗಳಿವೆ ಮತ್ತು ಅವುಗಳನ್ನು ನಾವು ನಮ್ಮ ನಡುವೆಯೇ ಬಗೆಹರಿಸಿಕೊಳ್ಳುತ್ತೇವೆ. ಹೊರಗಿನವರ ಹಸ್ತಕ್ಷೇಪ ಬೇಡ. ಅದರಲ್ಲೂ ಇಲ್ಲಿನ ಅಲ್ಪಸಂಖ್ಯಾತರಿಗೆ ನ್ಯಾಯ ಒದಗಿಸಲು ಹೆಚ್ಚಾಗಿ ನಮ್ಮ ಹಿಂದೂ ಸಹೋದರರೇ ಹೋರಾಡುತ್ತಿರುವಾಗ.

ಇಷ್ಟಾಗಿಯೂ ಯಾವುದೋ ದೂರದ ದೇಶದಲ್ಲಿ ಎಂತಹದ್ದೋ ಸಂಭವಿಸಿದರೆ ಭಾರತದ ಮುಸಲ್ಮಾನರು ಮೊದಲು ಬೀದಿಗೆ ಇಳಿಯುತ್ತಾರೆ. ಆದರೆ, ಯಾವುದೋ ಆಫ್ರಿಕಾ ದೇಶದಲ್ಲಿ ಮುಸಲ್ಮಾನರೇ ಮುಸಲ್ಮಾನರನ್ನು ಕೊಂದಾಗ ಅಥವಾ 'ಮುಸ್ಲಿಮ್ ರಾಷ್ಟ್ರ'ಗಳಲ್ಲಿ ಅಹಮದಿಯ್ಯಾಗಳೋ, ಶಿಯಾಗಳೋ ಬಾಂಬ್ ದಾಳಿಗಳಲ್ಲಿ ಚಿಂದಿಯಾದಾಗ ಅವರು ಹೀಗೆ ಬೀದಿಗೆ ಬಂದು ಪ್ರತಿಭಟಿಸುವುದಿಲ್ಲ.

ಸೌದಿ ಅರೇಬಿಯಾ ಮತ್ತು ಇತರೆ ಗಲ್ಫ್ ದೇಶಗಳು ರಾಜಪ್ರಭುತ್ವಗಳಾಗಿದ್ದರೂ, ಅಲ್ಲಿನ ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ ಮತ್ತು ಇತರೆ ದೇಶಗಳಿಂದ ವಲಸೆ ಬಂದಿರುವ ಮುಸಲ್ಮಾನರಿಗೆ ಸಮಾನಹಕ್ಕುಗಳು ಇಲ್ಲದಿದ್ದರೂ, ಅವರನ್ನೆಲ್ಲ ಕೆಟ್ಟದಾಗಿ ನೋಡಿಕೊಳ್ಳುತ್ತಿದ್ದರೂ, ಅವರಿಗೆ ಪೌರತ್ವವನ್ನು ನಿರಾಕರಿಸಿದ್ದರೂ ದುರದೃಷ್ಟವಶಾತ್ ನಮ್ಮಲ್ಲಿ ಕೆಲವರು ಆ ದೇಶಗಳನ್ನು ಮಾದರಿ ರಾಷ್ಟ್ರಗಳೆಂದು ಪರಿಗಣಿಸುತ್ತಾರೆ.

ನೀವು ಎಂದಾದರೂ ಮ್ಯಾನ್ಮಾರ್ ಮುಸಲ್ಮಾನರ ಕೊಲೆಗಳನ್ನು ಅರಬ್‌ನ ಶೇಖ್‌ಗಳು ಪ್ರತಿಭಟಿಸುವುದನ್ನು ಕಂಡಿದ್ದೀರಾ? ಈಜಿಪ್ಟ್‌ನಿಂದ ಲೆಬನಾನ್‌ವರೆಗೆ, ಇರಾನ್‌ನಿಂದ ಟರ್ಕಿವರೆಗೆ, ಕಜಕಿಸ್ತಾನದಿಂದ ಬಾಸ್ನಿಯಾವರೆಗೆ ಯಾವ ಇಸ್ಲಾಮಿಕ್ ದೇಶದಲ್ಲಿ ಈ ಹತ್ಯಾಕಾಂಡದ ವಿರುದ್ಧ ಸಾವಿರಾರು ಸಂಖ್ಯೆಯಲ್ಲಿ ಜನ ಬೀದಿಗಿಳಿದು ಪ್ರತಿಭಟಿಸಿದರು?

ನಮಗೆ ಪ್ರತಿಭಟಿಸುವ ಹಕ್ಕಿದೆ ನಿಜ, ಆದರೆ ಆ ಹಕ್ಕನ್ನು ನಾನು ಪ್ರಾಯಶಃ ದುರ್ಬಳಕೆ ಮಾಡಿಕೊಳ್ಳುತ್ತಿದ್ದೇವೆ. ಯಾಕೆಂದರೆ ಭಾರತದಲ್ಲಿರುವ ಬೇರೆ ಸಮುದಾಯಗಳು ತಮಗಾದ ಅನ್ಯಾಯವನ್ನು ಪ್ರತಿಭಟಿಸಿದಾಗ ನಾವು ಆ ಸಮುದಾಯಗಳೊಂದಿಗೆ ದನಿಗೂಡಿಸುವುದಿಲ್ಲ, ಆದರೆ ಎಲ್ಲೋ ಮುಸಲ್ಮಾನರ ಮೇಲಾದ ದಾಳಿಗಳ ಬಗ್ಗೆ ಕೇಳಿದಾಗ ಅಥವಾ ಅಂತಹ ದೃಶ್ಯಗಳನ್ನು ನೋಡಿದಾಗ ನಮ್ಮ ರಕ್ತ ಕುದಿಯಲಾರಂಭಿಸುತ್ತದೆ.

ನಮ್ಮ ಈ ಪ್ರವೃತ್ತಿಯು ಮುಸಲ್ಮಾನರು ಬರೀ ತಮ್ಮ ಸಮುದಾಯದ ಬಗ್ಗೆ ಯೋಚಿಸುತ್ತಾರೆಯೇ ಹೊರತು ಅವರು ಇತರರ ಬಗ್ಗೆ ಯೋಚಿಸುವುದಿಲ್ಲ ಎಂಬಂತೆ ಜಗತ್ತಿಗೆ ಕಾಣಿಸುತ್ತದೆ ಎಂಬ ಅರಿವಾದರೂ ನಮಗಿದೆಯೇ? ನಮ್ಮ ಹೃದಯ ಅನ್ಯಾಯಕ್ಕೆ ಗುರಿಯಾಗಿರುವ ಎಲ್ಲರ ಪರವಾಗಿ ಮಿಡಿಯಬೇಕೆ ಹೊರತು ಬರೀ ಮುಸಲ್ಮಾನರ ಪರವಾಗಿಯಲ್ಲ.

ಹೋಗಲಿ, ಮುಸಲ್ಮಾನರೇ ಬಹುಸಂಖ್ಯೆಯಲ್ಲಿರುವ ಬಾಂಗ್ಲಾದೇಶ ಏನು ಮಾಡುತ್ತಿದೆ? ಅದು ತನ್ನ ಗಡಿಯನ್ನು ಭದ್ರಗೊಳಿಸಿ ಮ್ಯಾನ್ಮಾರಿನ ರೊಹಿಂಗ್ಯ ಮುಸಲ್ಮಾನರನ್ನು ಬಲವಂತವಾಗಿ ಮ್ಯಾನ್ಮಾರಿಗೆ ವಾಪಸು ಕಳುಹಿಸುತ್ತಿದೆ ಮಾತ್ರವಲ್ಲ ಬಾಂಗ್ಲಾ ದೇಶದ ಸರ್ಕಾರ ಈ ಸಮಸ್ಯೆಯನ್ನು ಕುರಿತು ಮ್ಯಾನ್ಮಾರ್ ದೇಶದ ಆಡಳಿತದೊಂದಿಗೆ ಗಂಭೀರ ಚರ್ಚೆಯನ್ನೂ ನಡೆಸಿಲ್ಲ. ಬಿಹಾರ ರಾಜ್ಯದಿಂದ ವಲಸೆಹೋಗಿದ್ದ ಉರ್ದು ಭಾಷಿಕರನ್ನೂ ಈ ಹಿಂದೆ ಹಲವಾರು ದಶಕಗಳ ಕಾಲ ಹೀಗೆ ನಿರ್ಲಕ್ಷಿಸಲಾಗಿತ್ತು. ಅವರ ಜವಾಬ್ದಾರಿಯನ್ನು ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಸರ್ಕಾರಗಳು ಹೊರಲು ಸಿದ್ಧರಿಲ್ಲದಿದ್ದ ಕಾರಣ ಅವರೆಲ್ಲ ನಿರಾಶ್ರಿತರ ಶಿಬಿರಗಳಲ್ಲಿ ಬಂಧಿಗಳಾಗಿದ್ದರು. ಇತ್ತೀಚೆಗೆ ಮಾತ್ರ ಬಾಂಗ್ಲಾದೇಶ ಅವರಿಗೆಲ್ಲ ಪೌರತ್ವವನ್ನು ನೀಡಿದೆ.

ಗಲ್ಫ್ ದೇಶಗಳ ಮಾತು ಬದಿಗಿರಲಿ, ಮ್ಯಾನ್ಮಾರ್ ಪಕ್ಕದಲ್ಲೇ ಇರುವ, ಮುಸಲ್ಮಾನರೇ ಬಹುಸಂಖ್ಯಾತರಾಗಿರುವ ಮಲೇಷಿಯಾ ದೇಶ ಈ ಕುರಿತು ಏನನ್ನು ಮಾಡುತ್ತಿದೆ? ಭಾರತದಿಂದ ಮ್ಯಾನ್ಮಾರ್‌ಗಿಂತ ಕೊಂಚ ದೂರ ಇರುವ ಮಲೇಷಿಯಾ ಕೂಡ ಇವತ್ತು ಒಂದು ಮುಖ್ಯ ಆರ್ಥಿಕಶಕ್ತಿಯಾಗಿ ಬೆಳೆದಿದೆ. ಆ ದೇಶಗಳ ಸರ್ಕಾರ ಮ್ಯಾನ್ಮಾರ್ ದೇಶದಲ್ಲಿ ಮುಸಲ್ಮಾನರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಏನು ಕ್ರಮ ತಗೆದುಕೊಂಡಿದೆ? ಮ್ಯಾನ್ಮಾರ್ ದೇಶದ ರೊಹಿಂಗ್ಯಾ ಮುಸಲ್ಮಾನರಿಗಾಗುತ್ತಿರುವ ಅನ್ಯಾಯವು ಭಾರತೀಯ ಮುಸಲ್ಮಾನರಿಗೆ ನೋವು ಉಂಟುಮಾಡಿದ್ದರೆ ಅದು ಸಹಜ. ಆದರೆ ಹಿಂಸಾ ಕೃತ್ಯಗಳಿಗೆ ಆಸ್ಪದ ನೀಡುವಂತಹ ಬೃಹತ್ ಪ್ರತಿಭಟನಾ ಸಭೆಗಳಲ್ಲಿ ಆಯೋಜಿಸುವ ಮೂಲಕ ನಾವು ಇತರರಿಗೆ ಯಾವ ಸಂದೇಶವನ್ನು ಕೊಡುತ್ತಿದ್ದೇವೆ?

ಮ್ಯಾನ್ಮಾರ್ ದೇಶದಲ್ಲಾಗುತ್ತಿರುವ ಜನಾಂಗೀಯ ಹತ್ಯೆ ವಿರುದ್ಧ ಭಾರತದಲ್ಲಿ ಕಳೆದ ಹಲವು ತಿಂಗಳುಗಳಿಂದ ರಾಜಧಾನಿಗಳಲ್ಲಿ ಮಾತ್ರವಲ್ಲ, ಜಿಲ್ಲಾ ಕೇಂದ್ರ, ಚಿಕ್ಕಪುಟ್ಟ ನಗರಗಳಲ್ಲೂ ಪ್ರತಿಭಟನಾ ಸಭೆಗಳು ಜರುಗಿವೆ. ಯಾಕೆ? ಅಲ್ಪಸಂಖ್ಯಾತರೇ ಹೆಚ್ಚಾಗಿರುವ ಬಡಾವಣೆಯ ಶಾಲೆಗೆ ಮಾನ್ಯತೆ ಕೊಡುವಲ್ಲಿ ವಿಳಂಬವಾಗುತ್ತಿದೆ ಎಂಬ ಸಾಮಾಜಿಕ ಕಾಳಜಿಯ ಪ್ರತಿಭಟನೆಗೆ ಇವತ್ತು ನಗರಗಳಲ್ಲಿ ಇಪ್ಪತ್ತು ಜನರನ್ನು ಸೇರಿಸುವುದೇ ಕಷ್ಟಕರವಾಗಿದೆ. ಅಂತಹುದರಲ್ಲಿ ಮ್ಯಾನ್ಮಾರ್‌ನಲ್ಲಾಗುತ್ತಿರುವುದಕ್ಕೆ ಸಂಬಂಧಿಸಿದಂತೆ 2,000 ಜನ ಸೇರುತ್ತಾರೆಂದರೆ ಅಚ್ಚರಿ ಆಗದೆ ಇರುತ್ತದೆಯೇ?

ಭಾರತೀಯ ಮುಸಲ್ಮಾನರಲ್ಲಿ ಅತಿಯಾಗಿರುವ ಭಾವನಾಶಕ್ತಿಯನ್ನು ಇದು ಸೂಚಿಸುತ್ತದೆ. ಈ ಭಾವನಾ ಶಕ್ತಿಯನ್ನು ಇತರೆ ದಿಕ್ಕಿನತ್ತ ಉಪಯೋಗಿಸಿಕೊಳ್ಳುವುದು ಉತ್ತಮ. ಅಕ್ಬರಾಲಿ ಮಸೀದಿಗೆ ಸಂಬಂಧಪಟ್ಟಂತೆ ಶಾಸಕನೊಬ್ಬನ ಪ್ರಚೋದನೆಗೆ ಒಳಗಾಗುವುದಾಗಲಿ, ಮ್ಯಾನ್ಮಾರ್ ವಿದ್ಯಮಾನಗಳನ್ನು ಕುರಿತಾಗಲಿ ಪ್ರತಿಭಟಿಸುವುದಾಗಲಿ ನಮ್ಮ ಆದ್ಯತೆಗಳನ್ನು ನಾವು ತಪ್ಪಾಗಿ ಗ್ರಹಿಸಿದ್ದೇವೆ ಎಂದು ತೋರಿಸುತ್ತವೆ.

ಪತ್ರಿಕೆಗಳಲ್ಲೂ ಪ್ರತಿಭಟನೆಗೆ ಕರೆನೀಡುವ ಜಾಹೀರಾತುಗಳಿಗೆ ಹಣ ವ್ಯಯಮಾಡುವ ಬದಲಾಗಿ ಅಸ್ಸಾಮಿನ ಗಲಭೆಯಲ್ಲಿ ನೊಂದಿರುವ ಬೋಡೋಗಳು ಮತ್ತು ಮುಸಲ್ಮಾನರು-ಎರಡೂ ಸಮುದಾಯದವರಿಗೆ ನೆರವು ನೀಡಲು ಹಣ ಸಂಗ್ರಹಿಸುವುದು ಅರ್ಥಪೂರ್ಣ ಕ್ರಿಯೆಯಾಗುವುದಿಲ್ಲವೆ? ಅಕ್ಬರಾಲಿ ಮಸೀದಿ ವಿವಾದವನ್ನು ಅದೆಷ್ಟು ತಪ್ಪಾಗಿ ನಿರ್ವಹಿಸಲಾಗಿದೆ ಎಂದರೆ ಅದರಿಂದ ಇಡೀ ಸಮುದಾಯ ಮುಜುಗರ ಅನುಭವಿಸುವಂತಾಗಿದೆ.

ಕೆಲದಶಕಗಳ ಹಿಂದೆ ಓರ್ವ ಬಡಪಾಯಿ ಮಹಿಳೆಗೆ ನೆರವು ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಎದ್ದ ಪ್ರಜ್ಞಾಹೀನ ಮತ್ತು ಭಾವನಾತ್ಮಕ ಆಂದೋಲನದಿಂದಾಗಿ ಈ ದೇಶದ ಮುಸಲ್ಮಾನರು ಇತರರ ಕಣ್ಣಲ್ಲಿ ವಿಲನ್‌ಗಳಂತೆ ಕಂಡಿದ್ದರು. ಶಾ ಬಾನೋ ಕೇಸು ಇಲ್ಲಿನ ಬಲಪಂಥೀಯ ಗುಂಪುಗಳನ್ನು ಬಲಿಷ್ಠಗೊಳಿಸಿತು, ಬಿಜೆಪಿಯನ್ನು ಅಧಿಕಾರಕ್ಕೆ ತಂದಿತು, ಬಾಬ್ರಿ ಮಸೀದಿಯ ನಾಶವಾಯಿತು ಮತ್ತು ಭಾರತೀಯ ರಾಜಕೀಯ ಶಬ್ದಕೋಶದಲ್ಲಿ 'ಅಪೀಸ್‌ಮಂಟ್' (ಅಲ್ಪಸಂಖ್ಯಾತರ ಓಲೈಕೆ) ಎಂಬ ಪದ ಸೇರ್ಪಡೆಯಾಯಿತು.

ಇಷ್ಟೆಲ್ಲ ಆಗಿದ್ದರೂ ಮುಸಲ್ಮಾನರ ನಾಯಕರು ಯಾವ ಪಾಠವನ್ನೂ ಕಲಿತಿಲ್ಲ. ಆದ್ದರಿಂದ 'ಹೋಶ್' (ಎಚ್ಚರ) ಬದಲಾಗಿ ನಮ್ಮನ್ನು ಇನ್ನಷ್ಟು ಅಪಾಯಕ್ಕೆ ದೂಡುವ 'ಜೋಶ್' (ಬಿಸಿರಕ್ತ) ತರಹದ ತಪ್ಪು ಆದ್ಯತೆಗಳೇ ರಾರಾಜಿಸುತ್ತಿವೆ."


ಪತ್ರಿಕೆ ಬಯಲಿಗೆಳೆದ ಅಕ್ಕಿ ಖರೀದಿ ಹಗರಣ

ಮುಗ್ಗಲು ಅಕ್ಕಿಯ ವಿರುದ್ಧ ರೊಚ್ಚಿಗೆದ್ದ ಜನತೆ

ಲಂಕೇಶ್ ಇಂಪಾಕ್ಟ್

... ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ...ಂತ್ರಿ ಜೀವರಾಜ್ ಕಾಲಿಟ್ಟ ಗಳಿಗೆಯೇ ಸರಿಯಿಲ್ಲವೇನೋ, ... ಖರೀದಿ ಹಗರಣಕ್ಕೆ ಸಂಬಂಧಪಟ್ಟಂತೆ ಕಳೆದ ...ಚಿಕೆಯಲ್ಲಿ ಪತ್ರಿಕೆ ಬಯಲಿಗೆಳೆದ ...ರ್ಮಕಾಂಡದ ನೆತ್ತಿಗೆ ಹೊಡೆದಂತೆ ...ಂಗಳೂರಿನಲ್ಲಿ ಜನ ಪಡಿತರ ...ಷ್ಟಾಚಾರದ ವಿರುದ್ಧ ಬೀದಿಗಿಳಿದಿದ್ದಾರೆ. ...ದೇ ಆಗಸ್ಟ್ 22ರ ಬುಧವಾರ ...ಯಬೆಲೆ ಅಂಗಡಿಗಳ ಮುಂದೆ ...ಗಾಗಿ ಸಾಲುಗಟ್ಟಿ ನಿಂತಿದ್ದ ಜನ ...ರಿಸಿದ ಮುಗ್ಗಲು ಅಕ್ಕಿಯನ್ನು ರಸ್ತೆಗೆ ...ರಿದು ಪ್ರತಿಭಟಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು ...ಕ್ಕೂರಿನ ನ್ಯಾಯಬೆಲೆ ಅಂಗಡಿಯ ...ಂದೆ ಅಕ್ಕಪಕ್ಕದ ರಾಗಿಹಳ್ಳಿ, ...ಹಳ್ಳಿ, ಗುಂಡುತೋಪು ಇತ್ಯಾದಿ ಏರಿಯಾಗಳ ...ರಿಕನ್ನು ಅಧಿಕ ಮಂದಿ ಸಾಲುಗಟ್ಟಿ ನಿಂತಿದ್ದರು. ...ಕೆಲ ಅದು ಆಹಾರ ಮತ್ತು ನಾಗರಿಕ ಸರಬರಾಜು ...ಲಾಖೆಯೇ ನಡೆಸುವ ನ್ಯಾಯಬೆಲೆ ಅಂಗಡಿ. ವಿತರಿಸಿದ ಅಕ್ಕಿ ಗಬ್ಬುನಾತ ಬೀರುತ್ತಿತ್ತು, ಸಾಲದ್ದಕ್ಕೆ ಅಕ್ಕಿಯಲ್ಲಿ ಇಲಿ ಹಿಕ್ಕೆ, ಕಸ, ಕಲ್ಲು-ಮಣ್ಣು ತುಂಬಿತ್ತು. ಮೊದಲೇ ಮುಗ್ಗಲು ಅಕ್ಕಿ ಜೊತೆಗೆ ಕಲ್ಲು ಕಸ ಬೇರೆ!



ಜೀವರಾಜ್




ರೊಚ್ಚಿಗೆದ್ದ ಜನ ಏಕಾಏಕಿ ನ್ಯಾಯಬೆಲೆ ಅಂಗಡಿಗೆ ನುಗ್ಗಿದ್ದೇ ಮೂಟೆಗಟ್ಟಲೇ ಅಕ್ಕಿಯನ್ನೆಲ್ಲ ತಂದು ರಸ್ತೆಗೆ ಸುರಿದಿದ್ದಾರೆ. ಚೆಲ್ಲಿದ ಅಕ್ಕಿಯ ರಾಶಿಯ ತುಂಬ ಹುಳು-ಹುಪ್ಪಟೆಗಳೇ ತುಂಬಿದ್ದವು. ಯಾವತ್ತು ಜನ ರೊಚ್ಚಿಗೆದ್ದದ್ದು ಗೊತ್ತಾಯಿತೋ ವಿತರಣೆಗೆ ನಿಂತಿದ್ದ ಪಡಿತರ ಅಧಿಕಾರಿಗಳೇ ಪರಾರಿಯಾದರು. ಇದು ಕೇವಲ ಒಂದು ನ್ಯಾಯಬೆಲೆ ಅಂಗಡಿಯ ಬೇಗುದಿಯಲ್ಲ.

ಶಿವಮೊಗ್ಗದ ಅಕ್ಕಿ ಸ್ಮಗ್ಲರ್ ಸುರಕ್ಷಾ ನಾಗರಾಜ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಜನರಲ್ ಮ್ಯಾನೇಜರ್ ಕುಮಾರ ಮತ್ತು ನಿಗಮದ ಅಧ್ಯಕ್ಷ ಚನ್ನಪಟ್ಟಣದ ಮಾಜಿ ಶಾಸಕ ಎಂ.ಸಿ.ಅಶ್ವತ್ಥ ಸೇರಿಕೊಂಡು ಎಸಗಿದ ಪಾಪದ ಫಲವಾಗಿ ಲಕ್ಷಗಟ್ಟಲೇ ಕ್ವಿಂಟಾಲುಗಳಷ್ಟು ಕಳಪೆ ಅಕ್ಕಿ ಶಿವಮೊಗ್ಗದಿಂದ ಬೆಂಗಳೂರಿನ ವಿವಿಧ ಗೋಡೌನುಗಳಿಗೆ ರವಾನೆಯಾಗಿತ್ತು.


ನ್ಯಾಯಬೆಲೆ ಅಂಗಡಿಗಳಲ್ಲಿ ಅನ್ಯಾಯ

ರೊಚ್ಚಿಗೆದ್ದ ಜನ

ಬಂದ ಕಳಪೆ ಅಕ್ಕಿಯನ್ನು ಯಶವಂತಪುರ ಗೋಡೌನಿನ ಸಿಬ್ಬಂದಿ, ಬೆಂಗಳೂರು ದಕ್ಷಿಣ ಡೆಪ್ಯೂಟಿ ಡೈರೆಕ್ಟರ್ ಹೊಂಬಾಳೇಗೌಡ ಮುಂತಾದವರೇ ತಿರಸ್ಕರಿಸಿದರೆ ಜನರಲ್ ಮ್ಯಾನೇಜರ್ ಕುಮಾರ್ ದಬಾಯಿಸಿ ಹಾಕಿಸಿದ್ದ. ಈಗ ಕಳಪೆ ಅಕ್ಕಿ ವಿರುದ್ಧ ಜನ ಬೀದಿಗಿಳಿದಿದ್ದಾರೆ. ನಿಗಮದ ಅಧ್ಯಕ್ಷ ಅಶ್ವತ್ಥನ ಪಾಪಕ್ಕೆ ಮಂತ್ರಿ ಜೀವರಾಜ್ ತಲೆ ಕೊಡಬೇಕಾಗಿದೆ. ಇನ್ನೆರಡು ದಿನಗಳಲ್ಲಿ ಕಳಪೆ ಅಕ್ಕಿ ವಿರುದ್ಧ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜನ ಬೀದಿಗಿಳಿದರೆ ಅಚ್ಚರಿಯಿಲ್ಲ. ಗಣಿ ನುಂಗಿ, ನೆಲ ನುಂಗಿ ಕೊನೆಕೊನೆಗೆ ನೆರೆಸಂತ್ರಸ್ತರ ಬದುಕನ್ನೂ ದೋಚಿದ ಬಿಜೆಪಿಯ ಭ್ರಷ್ಟಾಚಾರ ಈಗ ನಾಡಿನ ಅಸಂಖ್ಯಾತ ಬಡಬಗ್ಗರ ಅನ್ನದ ತಟ್ಟೆಯ ತನಕ ಬಂದು ನಿಂತಿದೆ. ಹಗರಣವನ್ನು ಬಯಲಿಗೆಳೆದ ಪತ್ರಿಕೆಯ ಕಳಕಳಿ ಈಗ ನ್ಯಾಯಬೆಲೆ ಅಂಗಡಿಗಳ ಮುಂದೆ ರೊಚ್ಚಿಗೆದ್ದ ಜನಾಕ್ರೋಶದ ಮೂಲಕ ವ್ಯಕ್ತವಾಗುತ್ತಿದೆ.






ಮಂಗಳೂರು–ದಕ್ಷಿಣ ಟಿಕೆಟಿಗಾಗಿ ಲಾಬಿ–ಲಾಗ ಶುರು!!


"ಮಂಗಳೂರು" ಎಂದಾಕ್ಷಣ ಹಿಂದೂ ತಾಲಿಬಾನಿಗಳ ತಾಂಡವ ನೃತ್ಯ ನೆನಪಾಗಿ ಜೀವ ಥರಗುಟ್ಟುತ್ತದಲ್ಲವಾ?! ಅದರಲ್ಲೂ ಮಂಗಳೂರಿನ ಕೇಂದ್ರದಂತಿರುವ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರವಂತೂ ಬಜೆಪಿ-ಭಜರಂಗಿಗಳ ಅಡಂಬೋಲದಂತಾಗಿ ಹೋಗಿದೆ! ಆದರೆ ಈ ಕಾವಿ ಕಿರಾತಕರ ಸಂತಾನದ ಆರ್ಭಟ ಅದೆಷ್ಟೇ ಇದ್ದರೂ ಕಾಂಗ್ರೆಸ್ಸಿನವರು ಒಗ್ಗಟ್ಟಾಗಿದ್ದರೆ ಜನದ್ರೋಹಿ ಬಿಜೆಪಿಯನ್ನು ಬಗ್ಗುಬಡಿಯುವುದು ಅಂಥ ಕಷ್ಟವೇನಲ್ಲ. ಕ್ರಿಶ್ಚಿಯನ್ನರೇ ಹೆಚ್ಚಿರುವ ಈ ಕ್ಷೇತ್ರದಲ್ಲಿ ಬಿಜೆಪಿಯ ಹೋಪ್‌ಲೆಸ್ ಯೋಗೀಶ್ ಭಟ್ಟ ಸತತ ನಾಲ್ಕು ಬಾರಿ ಶಾಸಕನಾಗಿದ್ದರೆ, ಅದಕ್ಕೆ ಕಾಂಗ್ರೆಸ್‌ನ ದೊಡ್ಡವರ ಸಣ್ಣತನಗಳೇ ಕಾರಣ!

ಕಾಲೆಳೆದಾಡುವ ಕಸರತ್ತುದಾರರೇ ತುಂಬಿಕೊಂಡಿರುವ ಮಂಗಳೂರು ಕಾಂಗ್ರೆಸ್ ಪಡಸಾಲೆಯಲ್ಲೀಗ ಇದ್ದಕ್ಕಿದ್ದಂತೆ ಚುನಾವಣೆ ಮೂಡು ಒಡಮೂಡಿದೆ. ಮೊಯ್ಲಿ, ಆಸ್ಕರ್, ಪೂಜಾರಿಗಳಂಥ ದಿಗ್ಗಜರೇ ಟವಲು ಕೊಡವಿ ಓಡಾಡಲಾರಂಭಿಸಿದ್ದಾರೆ. ತಂತಮ್ಮ ಬೆಂ-ಬಾಲಕರಿಗೆ ಟಿಕೆಟ್ ಕೊಡಿಸಲು ತಂತ್ರ-ತರಲೆ ಶುರು ಹಚ್ಚಿಕೊಂಡಿದ್ದಾರೆ. ಒಂಥರಾ ಕಾಸ್ಮಾಪಾಲಿಟನ್ ಕ್ಷೇತ್ರವಾದ ಈ ಮಂಗಳೂರು ದಕ್ಷಿಣದಲ್ಲಿ ಕಾಂಗ್ರೆಸ್ ಲಾಗಾಯ್ತಿನಿಂದ ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗೇ ಅಭ್ಯರ್ಥಿ ಆಗಿಸುತ್ತಿದೆ. ಬಿಜೆಪಿಯ ಧರ್ಮಕಾರಣ ಮಿತಿ ಮೀರಿರುವ ಸಂದರ್ಭದಲ್ಲೂ ಈ ಕಾಂಗ್ರೆಸ್ ಯಜಮಾನರು ಹಳೆ ಸೂತ್ರ ಬದಲಿಸಿಕೊಂಡಿಲ್ಲ, ಬಿಜೆಪಿ ಹಿಂದೂ ಅಭ್ಯರ್ಥಿಯನ್ನು ನಿಲ್ಲಿಸಿ ಕಮ್ಯುನಲ್ ರಾಜಕಾರಣ ಮಾಡುತ್ತಿರುವಾಗ ತಾವೂ ಹಿಂದೂ ಒಬ್ಬನಿಗೆ ಟಿಕೆಟ್ ಕೊಟ್ಟು ಅಲ್ಪಸಂಖ್ಯಾತರ ಓಟು ಪಡೆದು ಗೆಲ್ಲಬೇಕೆಂಬ ಸರಳ ಸಮೀಕರಣವೂ ಕಾಂಗ್ರೆಸ್‌ನ ಮಂಕುದಿಣ್ಣೆಗಳಿಗೆ ಹೊಳೆಯುತ್ತಿಲ್ಲ.

ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಯ ಕೊಂಕಣಿ ಬ್ರಾಹ್ಮಣ ಯೋಗೀಶ್ ಭಟ್ ಎದುರು ಕಾಂಗ್ರೆಸ್‌ನ ಐವಾನ್ ಡಿಸೋಜಾ ಬರೋಬ್ಬರಿ 9 ಸಾವಿರ ಮತದಂತರದಿಂದ ಲಗಾಟೆ ಹೊಡೆದಿದ್ದರು. ಈ ಗಂಡಾಗುಂಡಿ ಪುಢಾರಿಗೆ ಆತನ ಪಕ್ಷದವರೇ ಬತ್ತಿ ಇಟ್ಟಿದ್ದರು. ಉಡುಪಿ ಜಿಲ್ಲೆಯ ಕಾಪು ಮೂಲದ ಈ ಐವಾನ್ ಡಿಸೋಜಾನನ್ನು ಸ್ಥಳೀಯ ಕ್ರಿಶ್ಚಿಯನ್ನರೂ ತಮ್ಮವನೆಂದು ಅಭಿಮಾನ-ನಂಬಿಕೆ ತೋರಿಸಲಿಲ್ಲ. ಇದಕ್ಕೆ ಐವಾನ್‌ನ ಐಲು-ಪೈಲುಗಳೇ ಕಾರಣವಾಗಿತ್ತು. ಆತ ಕಾಂಗ್ರೆಸ್ ಟಿಕೆಟ್ ತಂದಿದ್ದೇ ಕ್ಯಾಥೋಲಿಕ್ ಫಾದರ್-ಬಿಷಪ್‌ಗಳ ವಶೀಲಿಬಾಜಿ ಯಿಂದಾಗಿತ್ತು. ಬಿಷಪ್-ಫಾದರ್‌ಗಳ ಪ್ರಭಾವಕ್ಕೆ ಪಕ್ಕಾದ ಎಐಸಿಸಿ ಮಾಂಡಲೀಕ ಆಸ್ಕರ್ ಫರ್ನಾಂಡಿಸ್ ಯಾರಿಗೂ ಬೇಡದ ಐವಾನ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದರು. ಇದು ನಾಲಾಯಕ್ ಯೋಗೀಶ್ ಭಟ್ಟನನ್ನು ನಿರಾಯಾಸವಾಗಿ ನಾಲ್ಕನೇ ಬಾರಿ ಅಸೆಂಬ್ಲಿ ಪ್ರವೇಶಕ್ಕೆ ದಾರಿ ಮಾಡಿ ಕೊಟ್ಟಿತ್ತು. ಈ ಬಾರಿ ಐವಾನ್‌ಗೆ ನಿಷ್ಠಾವಂತ ಕಾಂಗ್ರೆಸಿಗರಿಂದ ಸಿಕ್ಕಾಪಟ್ಟೆ ವಿರೋಧ ವ್ಯಕ್ತವಾಗುತ್ತಿದೆ.




ಆನಂತರ ನಡೆದ ಪಾರ್ಲಿಮೆಂಟ್ ಚುನಾವಣೆ ಹೊತ್ತಲ್ಲಿ ಹಿಂದುತ್ವದ ಬಿರುಗಾಳಿಯೇ ಬೀಸಿತ್ತು. ಆದರೂ ಈ ಮಂಗಳೂರು ದಕ್ಷಿಣದಲ್ಲಿ ಮಾತ್ರ ಕಾಂಗ್ರೆಸ್‌ನ ಜನಾರ್ದನ ಪೂಜಾರಿ ಬಿಜೆಪಿಯಿಂದ ಗೆದ್ದ ನಳಿನ್‌ಕುಮಾರ್ ಕಟೀಲ್‌ಗಿಂತಲೂ 6 ಸಾವಿರ ಓಟು ಹೆಚ್ಚು ಪಡೆದಿದ್ದರು. ಅಂದರೆ ಅಸೆಂಬ್ಲಿ ಎಲೆಕ್ಷನ್ ಡಾಟಾಕ್ಕೆ ಹೋಲಿಸಿದರೆ ಕಾಂಗ್ರೆಸ್ ಈ ಬಾರಿ ಸರಿಸುಮಾರು 15 ಸಾವಿರ ಮತ




ರಾಜೇಂದ್ರ ಕುಮಾರ್



ರೋಹನ್




ಸುರೇಶ್ ಬಲ್ಲಾಳ



ಯೋಗೀಶ್ ಭಟ್



ಐವಾನ್



ಪಿ.ವಿ.ಮೋಹನ್

ಸದ್ರಿ ಕಾನ್ಸ್ಟ್ಯುಯೆನ್ಸಿಯಲ್ಲಿ ಹೆಚ್ಚುವರಿಯಾಗಿ ದಕ್ಕಿಸಿಕೊಂಡಿತ್ತು. ಇದರರ್ಥ ಇಷ್ಟೇ. ಮಂಗಳೂರು ದಕ್ಷಿಣದಲ್ಲಿ ಎದುರಾಳಿ ಕಾಂಗ್ರೆಸ್ ಮುಸ್ಲಿಮ್-ಕ್ರಿಶ್ಚಿಯನ್ನರ ನಂಬಿಕೆಗೆ ಪಾತ್ರನಾಗಬಲ್ಲ ಸೆಕ್ಯೂಲರ್ ಹಿಂದೂ ಒಬ್ಬನನ್ನು ನಿಲ್ಲಿಸಿದರೆ ಆಗ ಬಿಜೆಪಿಯ ಮತಾಂಧ ಮಸಲತ್ತು ಫುಸ್ ಆಗುತ್ತದೆ.

ಇಂಥದೊಂದು ನಿದರ್ಶನ ಕಣ್ಮುಂದಿದ್ದರೂ ಟಿಕೆಟ್ ಹಂಚಿಕೆಯಲ್ಲಿ ನಿರ್ಣಾಯಕ ಪಾತ್ರವಾಡುವ ಆಸ್ಕರ್ ಫರ್ನಾಂಡಿಸ್, ವೀರಪ್ಪ ಮೊಯ್ಲಿಗಳು ಪಾಠ ಕಲಿತಿಲ್ಲ. ಈ ಬಾರಿಯೂ ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗೇ ಅವಕಾಶ ಕೊಡಲು ಈ ಲೀಡರ್‌ಗಳು ಚಿಂತನ-ಮಂಥನ ನಡೆಸಿದ್ದಾರೆ. ಮತ್ತೊಮ್ಮೆ ಟಿಕೆಟ್ ಪಡೆಯಲು ವೇಸ್ಟ್‌ಬಾಡಿ ಐವಾನ್ ಡಿಸೋಜಾ ತನ್ನ ಕ್ರಿಶ್ಚಿಯನ್ ಧರ್ಮಕಾರಣ ಪ್ರಯೋಗಿಸುತ್ತಿದ್ದರೆ, ಅತ್ತ ಆಸ್ಕರಣ್ಣಾ ತನ್ನ ಚೇಲಾ ಜೆ.ಆರ್. ಲೋಬೋ ಎಂಬ ಮಾಜಿ ಸರ್ಕಾರಿ ಅಧಿಕಾರಿಯನ್ನು ಅಖಾಡಕ್ಕೆ ಇಳಿಸಲು ಕಟಿಪಿಟಿ ಆರಂಭಿಸಿದ್ದಾರೆ. ಅದಕ್ಕೆಂದೇ ಮೊನ್ನೆ ಜುಲೈ 28 ರಂದು ಒಂದು "ಅದ್ದೂರಿ" ಗೊಂದಲ-ಗಲಾಟೆಯ ಸಮಾರಂಭದಲ್ಲಿ ಲೋಬೋ ಸಾಹೇಬರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲಾಗಿದೆ.

ಈ ಬ್ಯೂರೋಕ್ರೇಟ್ ಬುದ್ಧಿಯ ಲೋಬೋರನ್ನು ಕಾಂಗ್ರೆಸ್‌ಗೆ ಎಳೆದು ತಂದಿರುವುದು ಅದರ ಒಡೆಯರಾದ ಆಸ್ಕರ್-ಪೂಜಾರಿ-ಮೊಯ್ಲಿ-ರಮಾನಾಥ ರೈ.... ಇತ್ಯಾದಿ ಧೀರರ ದಿವಾಳಿಕೋರ ರಾಜಕಾರಣಕ್ಕೆ ಸಾಕ್ಷಿಯಂತಿದೆ. ಮಂಗಳೂರಿನವರೇ ಆದ ಲೋಬೋ ಸ್ಥಳೀಯ ರೋಮನ್ ಕ್ಯಾಥೋಲಿಕ್ ಪಂಗಡದವರು. ಮಂಗಳೂರಲ್ಲೇ ಹಲವು ವರ್ಷ ಆಯಕಟ್ಟಿನ ಸರ್ಕಾರಿ ಪೀಠದಲ್ಲಿದ್ದವರು. ಮಂಗಳೂರು ಮಹಾನಗರ ಪಾಲಿಕೆ ಕಮೀಷನರ್, ಜಿಲ್ಲಾಧಿಕಾರಿ ಕಚೇರಿಯ ಕೇಂದ್ರ ಸ್ಥಾನಿಕ ಸಹಾಯಕ (ಎಚ್‌ಕ್ಯೂಎ), ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಅರ್ಬನ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅಧಿಕಾರಿಯಾಗಿ ಕೆಲಸ ಮಾಡಿದ್ದ ಲೋಬೋ ಜನಸಂಪರ್ಕ-ಪುಢಾರಿಗಳ ಒಡನಾಟದಲ್ಲಿ ಇದ್ದವರು; ಪಿಲಿಕುಳ ನಿಸರ್ಗಧಾಮದ ಹಿಂದಿನ ಬ್ರೈನ್ ಎನ್ನಲಾದ ಲೋಬೋ ಪಿಲಿಕುಳ ವಿಜ್ಞಾನ ಕೇಂದ್ರದ ಡೈರೆಕ್ಟರರೂ ಹೌದು. ಹಾಗಾಗಿ ಈ ಲೋಬೋ ಸೊರಗಿರುವ ಕಾಂಗ್ರೆಸ್‌ಗೆ ಗೆಲ್ಲುವ ಕುದುರೆ ಆಗುತ್ತಾರೆಂಬುದು ಆಸ್ಕರ್ ತರ್ಕ!

ಕೇಂದ್ರ ಮಂತ್ರಿ ವೀರಪ್ಪ ಮೊಯ್ಲಿಗೂ ಈ ಲೋಬೋ ಎಂದರೆ ಅದೇನೋ ಅಟ್ಯಾಚ್‌ಮೆಂಟ್. ಹೀಗಾಗಿ ಕಾಂಗ್ರೆಸ್ ಟಿಕೆಟ್ ಹಂಚಿಕೆಯ ಹೊತ್ತಲ್ಲಿ ಮೊಯ್ಲಿಯೂ ಲೋಬೋ ಪರ ನಿಲ್ಲುವುದು ಗ್ಯಾರಂಟಿ. ಕಾಂಗ್ರೆಸ್‌ನ ಕಾಸ್ಟ್ ಕ್ಯಾಲ್ಕ್ಯುಲೇಷನ್‌ನಲ್ಲಿ ಕ್ಯಾಥೋಲಿಕ್‌ಗೆ ಟಿಕೆಟ್ ಎಂದಾದರೆ ಮೊಯ್ಲಿ ಮಹಾತ್ಮ ಲೋಬೋ ಪರವೇ ನಿಲ್ಲುತ್ತಾರೆ. ಹಾಗೊಮ್ಮೆ ನಾನ್ ಕ್ಯಾಥೋಲಿಕ್‌ಗೆ ಟಿಕೆಟ್ ಕೊಡುವ ನಿರ್ಧಾರವಾದರೆ ಮೊಯ್ಲಿ ಕ್ಯಾಂಡಿಡೇಟ್- ಆತನ ಅನಾದಿಕಾಲದ ಆಪ್ತ ಬಿಲ್ಲವ-ಮಾಜಿ ಮೂಡಾ ಅಧ್ಯಕ್ಷ ತೇಜೋಮಯ. ಈ ಕ್ಷೇತ್ರದಲ್ಲಿ ಬಿಲ್ಲವರು ಮತ್ತು ತೀಯಾಸ್ (ಮಲೆಯಾಳಿ ಬಿಲ್ಲವರು) ಅಪಾರವಾಗಿರುವುದರಿಂದ ತೇಜೋಮಯರಿಗೆ ಛಾನ್ಸ್ ಕೊಡಬೇಕೆಂಬುದು ಮೊಯ್ಲಿ ಮಹಾತ್ಮರ ಹಳೇ ಆಸೆ.



ಶ್ರೀಕರ ಪ್ರಭು



ಜೆ.ಆರ್.ಲೋಬೋ

ಹಾಗೆ ನೋಡಿದರೆ ಕಾಂಗ್ರೆಸ್‌ನ ಟಿಕೆಟ್ ಆಕಾಂಕ್ಷಿಗಳಲ್ಲಿ ಸೆಕ್ಯುಲರ್ ಸಾಮರ್ಥ್ಯ ಮತ್ತು ಶಾಸಕನಾಗುವ ಜನಪರ ನೀತಿಯಿರುವವರು ಇಬ್ಬರು. ಒಬ್ಬರು ಮಾಜಿ ಮೂಡಾ ಅಧ್ಯಕ್ಷ ಸುರೇಶ್ ಬಲ್ಲಾಳ್. ಮತ್ತೊಬ್ಬರು ಎಐಸಿಸಿ ಸದಸ್ಯ ಪಿ.ವಿ. ಮೋಹನ್. ಕಾಂಗ್ರೆಸ್‌ನ ಕೊಳಕು ಕಸರತ್ತಿನಲ್ಲಿ ಒಂಚೂರು ನೇಪಥ್ಯಕ್ಕೆ ಸರಿದಂತಿರುವ ಸುರೇಶ್ ಬಲ್ಲಾಳ್ ಜನ ಬಳಕೆಯ ರಾಜಕಾರಣಿ. ಹಾರ್ಟ್ ಟ್ರಬಲ್ ಕೂಡ ಆತನಿಗೆ ರಾಜಕೀಯವಾಗಿ ಹಿನ್ನಡೆ ಮಾಡಿದೆ. ಹಾಗೆಯೇ ಆತ ಅತೀ ಅಲ್ಪಸಂಖ್ಯಾತ ಜೈನ್ ಪಂಗಡದವರು. ಆ ಸಮುದಾಯದ ಮತಗಳು ಕೆಲವೇ ನೂರರಷ್ಟಿದೆ. ಎಮ್ಮೆಲ್ಲೆ ಟಿಕೆಟ್ ಸಿಗುವ ಆಸೆಯಿಂದಲೇ ತುಂಬ ಹಿಂದೆಯೇ ಜನತಾದಳ ಬಿಟ್ಟು ಕಾಂಗ್ರೆಸ್ ದೀಕ್ಷೆ ಪಡೆದ ಬಲ್ಲಾಳ್‌ಗೆ ಜಾತಿ ಲೆಕ್ಕಾಚಾರವೇ ಕೈ ಕೊಡುತ್ತಿದೆ. ಕಾಂಗ್ರೆಸ್‌ನ ಸ್ಥಳೀಯ ಹೈಕಮಾಂಡ್ ಎನ್ನಲಾದ ತ್ರಿಮೂರ್ತಿಗಳೂ ಬಲ್ಲಾಳ್ ಪರ ಪ್ರಬಲ ವಕಾಲತ್ತು ಮಾಡದಿದ್ದರೂ ವಿರೋಧಿಗಳೇನಲ್ಲ. ಆದರೆ ಮೂಡಬಿದಿರೆಯಲ್ಲಿ ಇದೇ ಜೈನ್ ಸಮುದಾಯದ ಶಾಸಕ ಅಭಯಚಂದ್ರ ಜೈನ್‌ಗೆ ಟಿಕೆಟ್ ಕೊಡುವುದರಿಂದ ಬಲ್ಲಾಳ್ ಭರವಸೆ ಇಟ್ಟುಕೊಳ್ಳುವಂತಿಲ್ಲವಾಗಿದೆ.

ಹಿಂದುಳಿದ ವರ್ಗದ ಪಿ.ವಿ. ಮೋಹನ್ ಕಾಂಗ್ರೆಸ್‌ಗೆ ಸಮರ್ಥ ಮತ್ತು ಸರಿಯಾದ ಆಯ್ಕೆ. ಕಟ್ಟಾ ಸೆಕ್ಯುಲರ್ ಮೋಹನ್ ನಿಷ್ಠಾವಂತ ಕಾಂಗ್ರೆಸಿಗ. ಗುಂಪುಗಾರಿಕೆಯಲ್ಲಿ ಗೋವಿಂದ ಆಗಿದ್ದ ಈ ತರುಣನನ್ನು ಈ ಬಾರಿ ಆಸ್ಕರ್-ಪೂಜಾರಿ ಗುರುತಿಸಿ ಎಐಸಿಸಿ ಸದಸ್ಯ ಮಾಡಿದ್ದಾರೆ. ಆದರೆ ಆತನ ಬಳಿ ಹಣವಿಲ್ಲವೆ[…] ವಿರೋಧ ಮಾಡುವ ಒಂದು ಪಂಗಡ[…] ಪಕ್ಷದಲ್ಲಿದೆ. ಕಾರ್ಯಕರ್ತ[…] ಜನಸಾಮಾನ್ಯರ ಬೇರು ಮಟ್ಟ[…] ಸಂಪರ್ಕ-ಬದ್ಧತೆಯ ಮೋಹ[…] ಬಿಜೆಪಿಯ "ಕುಸಂಸ್ಕೃತಿ" ರಾಜಕಾ[…] ಕೌಂಟರ್ ಮಾಡಬಲ್ಲ ಜಾಣ್ಮೆಯ[…] ಇರುವಾತ. ಹಿಂದೂಗಳಿಗೆ ಕಾಂಗ್[…] ಟಿಕೆಟ್ ಎಂದಾದರೆ ಮೋಹನ್ ಹೆ[…] ಮುಂಚೂಣಿಗೆ ಬರುತ್ತದೆ. ಜನಾದ[…] ಪೂಜಾರಿ-ಆಸ್ಕರ್ ಫರ್ನಾಂಡಿ[…] ಬೆಂಬಲಿಸುತ್ತಾರೆ.

ಮಂಗಳೂರು ಕಾಂಗ್ರೆಸ್[…] ಕ್ರಿಯಾಶೀಲವಾಗಿರುವ ಈ ಮೇ[…] ಅಭ್ಯರ್ಥಿ ಆಕಾಂಕ್ಷಿಗಳ ಹೊರತಾಗಿಯೂ ಇನ್ನಿಬ್ಬರು ದು[…] ಕುಳಗಳ ಹೆಸರೂ ಈಗ ಚಾಲ್ತಿಗೆ ಬಂದಿದೆ. ತಮ್ಮಲ್ಲಿ[…] ಕೊಪ್ಪರಿಗೆಗಟ್ಟಲೆ ಕಾಸಿನ ಬಲದಿಂದಲೇ ಡಿಸಿಸಿ ಬ್ಯಾ[…] ಅಧ್ಯಕ್ಷ ರಾಜೇಂದ್ರ ಕುಮಾರ್ ಮತ್ತು ಪ್ರಾಪರ್ಟಿ ಕನ್ಸ್ಟ್ರ[…] ಸಾಹುಕಾರ ರೋಹನ್ ಎಂಬಾತ ದಿಲ್ಲಿ-ಬೆಂಗಳೂ[…] ಮಟ್ಟದಲ್ಲೇ ಟಿಕೆಟ್ ಪ್ರ್ಯಾಕ್ಟೀಸ್ ಮಾಡುತ್ತಿದ್ದಾರೆ. ಟಿ[…] ಸಿಗುವುದಾದರೆ ಬಿಲ್ಡರ್-ಡೆವಲಪರ್ ರೋಹನ್ […] ಕೋಟಿ ಬೇಕಿದ್ದರೂ ಚೆಲ್ಲಲು ರೆಡಿಯಂತೆ. ಹಾಗೆ[…] "ಇಂಟರ್ ನ್ಯಾಷನಲ್" ಮಟ್ಟದ ಸಹಕಾರಿ ಧುರಿ[…] ರಾಜೇಂದ್ರ ಕುಮಾರ್ ಕಾರ್ಕಳ-ಮೂಡಬಿದಿ[…] ಮಂಗಳೂರು ಎಲ್ಲಾದರೂ ಸರಿ ಟಿಕೆಟ್ ಕೊಡಿ ಎನ್ನುತ್ತಿ[…] ಜೈನ್ ಸಮುದಾಯದ ಈ ರಾಜೇಂದ್ರ ಕುಮಾರ್ ಎ[…] ಟಿಕೆಟ್‌ಗಾಗಿ-ಅಧಿಕಾರಕ್ಕಾಗಿ ಬಿಜೆಪಿಗೂ ಹೋ[…] ಹೊರಬಂದಿರುವಾತ. ಡಿಸಿಸಿ ಬ್ಯಾಂಕ್‌ನಲ್ಲಿ ಮಾಡಿ[…] ಅವಾಂತರದಿಂದ ಹೆಸರು ಕೆಡಿಸಿಕೊಂಡಿರುವ ರಾಜೇ[…] ಕುಮಾರ್‌ಗೆ ಜಾತಿ ಫ್ಯಾಕ್ಟರೂ ಅನುಕೂಲಕರವಾಗಿಲ್ಲ[…]

ಅತ್ತ ಬಿಜೆಪಿಯಲ್ಲೂ ಟಿಕೆಟ್ ರಾಜಕಾ[…] ಅಯೋಮಯವಾಗಿದೆ. ಕಳೆದ ಹೆಚ್ಚುಕಮ್ಮಿ 19 ವರ್ಷ[…] ಮಂಗಳೂರು ದಕ್ಷಿಣದ ಶಾಸಕನಾಗಿರುವ ಕೊಂಕಣಿ ಬ್ರಾ[…] ಯೋಗೀಶ್ ಭಟ್‌ಗೆ ಟಿಕೆಟ್ ತಪ್ಪಿಸಬೇಕೆಂಬ ಸ್ಕೆಚ್ ಅರ[…] ಡಾನ್ ಕರಾವಳಿ ಬಿಜೆಪಿ ಟಿಕೆಟ್ ಹಂಚಿಕೆದಾರ ಕ[…] ಪ್ರಭಾಕರ ಭಟ್ಟ ರಹಸ್ಯವಾಗಿ ಹಾಕಿ ಕೊಂಡಿದ್ದಾನೆ. ರಿಪಬ್ಲಿಕ್ ರಾಜಕಾರಣಕ್ಕೆ ಅಷ್ಟು ಅನುಕೂಲಕರ ಅ[…] ಲಾಭದಾಯಕನಲ್ಲದ ಈ ಯೋಗೀಶ್ ಭಟ್ಟನ ಬದ[…] ತನ್ನ "ಹಿಂದೂ ಬಾನ್" ಅಡ್ಡೆಯ ಫಂಟರ್ ಶ್ರೀ[…] ಪ್ರಭುಗೆ ಛಾನ್ಸ್ ಕೊಡುವ ಇರಾದೆ ಕಲ್ಲಡ್ಕ ಭಟ್ಟನ[…] ಯೋಗೀಶ್ ಭಟ್ಟ ನಾಲ್ಕು ಬಾರಿ ಸತತ[…] ಶಾಸಕನಾಗಿದ್ದರೂ ಆತನಿಗೆ ಮಂತ್ರಿಗಿರಿ ಸಿಗದಂತೆ ಮಾ[…] ಇದೇ ಚೆಡ್ಡಿ ಸುಪ್ರೀಮೋ. ಹಾಲೇಮಾರನಂತೆ ಕೇಳಿದ[…] ಕಲ್ಲಡ್ಕನಿಗೆ ಹಣ-ಕಾರು ಕೊಡುವ ತಾಕತ್ತು ಯೋಗೀ[…] ಭಟ್ಟನಿಗಿಲ್ಲ; ಜತೆಗೆ ಹಿಂದುತ್ವದ ಹಿಡನ್ ಅಜೆ[…] ಜಾರಿಯ "ಹೋರಾಟ"ಕ್ಕೆ ಮನೆಯಿಂದ ಹೊರಬ[…] ಧೈರ್ಯವೂ ಇಲ್ಲ. ಇದು ಕಲ್ಲಡ್ಕನ ಕಣ್ಣು ಕೆಂಪಾಗಿ[…]

ಅತ್ತೂ-ಕರೆದು ಅಂತೂ-ಇಂತೂ ವಿಧಾನಸಭ[…] ಉಪಾಧ್ಯಕ್ಷ ಕುರ್ಚಿ ಹಿಡಿದುಕೊಂಡ ಯೋಗೀಶ್ ಭ[…] ಮತ್ತೆ ಮಂಗಳೂರು ದಕ್ಷಿಣದಲ್ಲಿ ಶಾಸಕನಾಗುವ ಅವ[…] ಬಿಜೆಪಿ ಕೊಡದೆಂಬ ಸುದ್ದಿ ತುಂಬ ಹಿಂದೆಯೇ ಎ[…] ಆಗಿನ್ನೂ ಹಾಲೇಮಾರ್ "ಬ್ಲೂ ಬಾಯ್ಸ್" ಭ[…]

> ಕೇಸರಿ ಕಿರಾತಕರ ಅನೈತಿಕ ಪೊಲೀಸ್‌ಗಿ[…] ಯಿಂದ ಇಡೀ ಮಂಗಳೂರು ತತ್ತರಿಸುತ್ತಿ[…] ಬಿಜೆಪಿ ಪರ್ವದಲ್ಲಿ ಜನಪರ ಕೆಲಸವಾಗಲಿ[…] ಅಭಿವೃದ್ಧಿಯಾಗಲಿ ಆಗಿಲ್ಲ. ಆಗಿದ್ದೆ[…] ಅನಾಚಾರ-ಅತ್ಯಾಚಾರ-ಅವ್ಯವಹಾರಗಳೆ[…] ಬಿಜೆಪಿ-ಭಜರಂಗಿ-ಚೆಡ್ಡಿಗಳು ಹಿಂದ[…] ಸಂಸ್ಕೃತಿ ಎನ್ನುತ್ತ ಹಿಂದೂ ಹುಡುಗಿಯರನ್[…] ಬೆತ್ತಲಾಗಿಸುತ್ತಿದ್ದಾರೆ; ಹಫ್ತಾ ವಸೂಲಿ[…] ದರೋಡೆ ಮಾಡುತ್ತಿದ್ದಾರೆ. ಇವರ "ದೊರ[…] ಗಳು ಸರ್ಕಾರಿ ಬೊಕ್ಕಸವನ್ನೇ ಕೊ[…] ಹೊಡೆಯುತ್ತಿದ್ದಾರೆ. ಮಂಗಳೂ[…] ಏರಿಯಾದಲ್ಲಿ ಅದೆಂಥ ಭೀಭತ್ಸ ನರ[…] ನಿರ್ಮಾಣ ಆಗಿದೆಯೆಂದರೆ ಅಣ್ಣ-ತಂಗಿ[…] ಗಂಡ- ಹೆಂಡತಿಯರೇ ಜೋಡಿಯಾ[…] ಹೊರಹೋಗದಂತಾಗಿದೆ. ಕಂಡ-ಕಂಡ ಹೆಣ್[…] ಗಂಡುಗಳ ಮೇಲೆ ಅನೈತಿಕತೆ ಆರೋ[…] ಹೊರಿಸಿ ಹಲ್ಲೆ ಮಾಡೋರ ಪಕ್ಷಕ್ಕೆ ಮ[…] ಹಾಕಲು ಸಾಧ್ಯವಾ[…]

ಲಿಲ್ಲ. ಪಕ್ಷದ ಮಂಗಳೂರು ಉತ್ತರ ಕ್ಷೇತ್ರದಲ್ಲಿ ನೆಲೆ ಕಳೆದುಕೊಳ್ಳುತ್ತಿದ್ದ ಪಾಲೇಮಾರ್ ದಕ್ಷಿಣಕ್ಕೆ ಾದ ಯೋಜನೆ ಹಾಕಿಕೊಂಡಿದ್ದ. ಇದಕ್ಕೆ ಕಲ್ಲಡ್ಕ ಕೂ ಒಪ್ಪಿಗೆ ಕೊಟ್ಟಿದ್ದನಂತೆ. ಅಸೆಂಬ್ಲಿಯಲ್ಲಿ ಬ್ಲೂಫಿಲಂ ಾದ ಪಾಪಕ್ಕೆ ಮಂತ್ರಿಗಿರಿ ಕಳಕೊಂಡ ಪಾಲೇಮಾರ್ ಮಂಗಳೂರು ಬಿಜೆಪಿಗೂ ಬೇಡವಾಗಿದ್ದಾನೆ. ್ಕರಿಗೂ ಬೇರೆ-ಬೇರೆ ಕಾರಣಕ್ಕೆ (ನೈತಿಕತೆ ಾಂದಿದ್ದಕ್ಕಲ್ಲ) ಪಾಲೇಮಾರ್ ಬಗ್ಗೆ ಬೇಸರ ಮೂಡಿದೆ. ೀಮಾರ್ ಕೂಡ ಸಾರ್ವಜನಿಕ ಜೀವನದಿಂದ ಮೂಗುತ್ತಿದ್ದಾನೆ. ಆತನಿಗೆ ದಕ್ಷಿಣ-ಉತ್ತರ ಎರಡೂ ಟಿಕೆಟ್ ಕೊಡದಿರಲು ಕಲ್ಲಡ್ಕ ಖಡಕ್ ತೀರ್ಮಾನ ದ್ದಾನೆಂದು ಬಿಜೆಪಿಗಳೇ ಪಿಸುಗುಡುತ್ತಿದ್ದಾರೆ. ೀಮಾರ್‌ಗೂ ಮತ್ತೆ ಶಾಸಕನಾಗುವ ಅಥವಾ ಬಿಜೆಪಿಯ ಗಳಿಗೆ ಅಡ್ಡ ಬೀಳುವುದು ಬೇಡವಾಗಿದೆಯಂತೆ. ಂದು ಬೀಸಿ ಒಗೆಯುವ ಎಲೆಯಂತೆ ಚೆಡ್ಡಿ ್ಗಣರು ತಮ್ಮನ್ನು ಬಳಸಿಕೊಂಡರೆಂದು ಪಾಲೇಮಾರ್ ಪರಿತಪಿಸುತ್ತಿದ್ದಾನೆ.

ಮಂಗಳೂರು ಉತ್ತರದಲ್ಲಿ ಹಿಂದೂ ಜಾಗರಣ ತೆಯ ನಟೋರಿಯಸ್ ನಾಯಕರಾದ ಸತ್ಯಜಿತ್ ಅಥವಾ ೀಶ್ ಶೆಣೈರಲ್ಲಿ ಒಬ್ಬನನ್ನು ಬಿಜೆಪಿ ಅಭ್ಯರ್ಥಿ ಮಾಡಲು ರ್ಮಾನಿಸುವ ಕಲ್ಲಡ್ಕ ಭಟ್ಟನಿಗೆ ದಕ್ಷಿಣದಲ್ಲಿ ೀಮಾರ್‌ನ ಬದಿಗೆ ಸರಿಸಿದಷ್ಟು ಸುಲಭದಲ್ಲಿ ೋಗೀಶ್ ಭಟ್ಟನ ಹೆಡೆಮುರಿ ಕಟ್ಟಲು ಸಾಧ್ಯವಾಗುತ್ತಿಲ್ಲ. ನರೆ ಸತತ ನಾಲ್ಕು ಬಾರಿ ಗೆದ್ದು "ಪಾಪದ ಪಾಪಿ" ಇಮೇಜು ಹಿಂದೂಗಳಲ್ಲಿ-ಅದರಲ್ಲೂ ವರ್ತಕ ಣಿ ವಲಯದಲ್ಲಿ "ಹೆಸರು ಮಾಡಿರುವ ಯೋಗೀಶ್ ಗೆ ತಪ್ಪಿಸಿದರೆ ಬಿಜೆಪಿ ಸೋಲಬಹುದೆಂಬ ಭೀತಿ ನಿಗೆ ಕಾಡುತ್ತಿದೆ. ದಿಲ್ಲಿ-ಬೆಂಗಳೂರು ಲೆವೆಲ್‌ನ ಯ ದೊಡ್ಡವರೂ ಈ ನಿರುಪದ್ರವಿ ಯೋಗೀಶ್ ನಿಗೇ ಮತ್ತೊಂದು ಅವಕಾಶ ಕೊಡುವ ಡುತ್ತಿದ್ದಾರೆ.

ಆದರೂ ಕಲ್ಲಡ್ಕ ಭಟ್ಟ ಕಿತಾಪತಿಯೇನೂ ನಿಲ್ಲಿಸಿಲ್ಲ. ಆಜ್ಞಾನುಧಾರಿ ಸೇವಕನೂ ಯೋಗೀಶ್ ಭಟ್ಟರ ಬಂಧುವೂ ಆದ ಶ್ರೀಕರ ಪ್ರಭುನನ್ನು ಪ್ರಾಜೆಕ್ಟ್ ತ್ತಿದ್ದಾನೆ. ಬಿಜೆಪಿಯ ನಗರ ಘಟಕದ ಅಧ್ಯಕ್ಷನಾಗಿರುವ ಪ್ರಭು ಫರ್ಫೆಕ್ಟ್ ಹಿಂದೂಬಾನಿ ಕೇಡರ್! ಹಿಂದುಳಿದ ದ ಯುವಕರನ್ನು ಕೋಮು ಕ್ರೌರ್ಯ-ಅನೈತಿಕ ೀಸ್‌ಗಿರಿಗೆ ಛೂಬಿಟ್ಟು ಹಿಂದೂ ಮುಖಂಡನಾಗುವ ಲತ್ತುಗಾರ. ಹಿಂದೂ ಹುಡುಗಿಯರ ಮೇಲೆ ಂಖ್ಯಾತರ ಮೇಲೆ ಬರ್ಬರ ದಾಳಿ ಮಾಡುವ ಹಿಂದೂ ರ ದಂಡಿನ ಫೈನಾನ್ಷಿಯರ್ ಈ ಪ್ರಭು. ಅಷ್ಟೇ ದಾಳಿಕೋರರ-ಲೂಟಿಕೋರರ-ವಿಕೃತ ಕಾಮಿಗಳ ೀಸ್ ಠಾಣೆಯಿಂದ ಬಿಡಿಸಿಕೊಂಡು ಬರುವ ಕಲ್ಲಡ್ಕ ನ ಏಜೆಂಟ್! ರಿಯಲ್ ಎಸ್ಟೇಟ್ ಮುಂತಾದ ಹರಿವ ಹಲವು ವ್ಯವಹಾರದಲ್ಲಿ ಈತ ಫಿಕ್ಸರ್. ೀಟೆಲ್ ಗೇಟ್‌ವೇನಲ್ಲಿ ನಡೆದ ನೀಲಿ ಚಿತ್ರ ಕಾರಿಕೆಯಲ್ಲಿ ಈತ ಸಿಕ್ಕಿಯೂ ಬಿದ್ದಿದ್ದ. ಅಂದು ಜಿಲ್ಲಾ ಸ್ತುವಾರಿ ಮಂತ್ರಿಯಾಗಿದ್ದ ಪಾಲೇಮಾರನೇ ತನ್ನ ಸ್ಪರ್ಧಿಯಾಗಿ ತಯಾರಾಗುತ್ತಿದ್ದ ಪ್ರಭುನ "ಸಿನಿಮಾ ಕಾರಿಕೆ ಅಡ್ಡೆ" ಮೇಲೆ ಪೊಲೀಸ್ ದಾಳಿ ಮಾಡಿಸಿದ್ದ. ರೆ ಚೆಡ್ಡಿ ರಿಪಬ್ಲಿಕ್ ಜನರಲ್ ಕಲ್ಲಡ್ಕ ಭಟ್ಟ ಈ ಕೇಸ್ ಹಿಡಿಸಿಬಿಟ್ಟಿದ್ದ.

ಇದೆಲ್ಲ ಏನೇ ಇರಲಿ, ಬರುವ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಪಿಯಿಂದ ಶ್ರೀಕರ ಪ್ರಭುವೇ ಸ್ಪರ್ಧಿಸಲಿ ಅಥವಾ ೀಗೀಶ್ ಭಟ್ಟನೇ ನಿಲ್ಲಲಿ, ಗೆಲ್ಲುವುದು ಮಾತ್ರ ಭವಲ್ಲ. ಯೋಗೀಶ್ ಭಟ್ಟನನ್ನು ಚೆಡ್ಡಿ ಡಾನ್- ುಗಳು ಕಾದುತ್ತಿದ್ದಾರಷ್ಟೇ ಅಲ್ಲ. ಜನರಿಗೂ ಈ ಭರಿತ ಬೇಡವಾಗಿದ್ದಾನೆ. ಕಾವಿ ಕಿರಾತಕ ಶ್ರೀಕರ ಪ್ರಭುಗೆ ಥೋಂಗಿ ಹಿಂದೂತ್ವವೇ ಸೋಲಿಸಲಿದೆ. ಹಾಗೆಯೇ ಗಳೂರಲ್ಲಿ ಬಿಜೆಪಿ ಎಂದರೇನೇ ಜನರು ಅಸಹ್ಯ ುವಂತಾಗಿದೆ. ಕೇಸರಿ ಕಿರಾತಕರ ಅನೈತಿಕ ೀಸ್‌ಗಿರಿಯಿಂದ ಇಡೀ ಮಂಗಳೂರು ತತ್ತರಿಸುತ್ತಿದೆ! ಿ ವರ್ಷದಲ್ಲಿ ಜನಪರ ಕೆಲಸವಾಗಲಿ, ಅಭಿವೃದ್ಧಿಯಾಗಲಿ ಲ್ಲ. ಆಗಿದ್ದೆಲ್ಲ ಅನಾಚಾರ-ಅತ್ಯಾಚಾರ-ಅವ್ಯವಹಾರಗಳೇ. ಪಿ-ಭಜರಂಗಿ-ಚೆಡ್ಡಿಗಳು ಹಿಂದೂ ಸಂಸ್ಕೃತಿ ಎನ್ನುತ್ತ ದೂ ಹುಡುಗಿಯರನ್ನೇ ಬೆತ್ತಲಾಗಿಸುತ್ತಿದ್ದಾರೆ; ಹಫ್ತಾ ಲಿ-ದರೋಡೆ ಮಾಡುತ್ತಿದ್ದಾರೆ. ಇವರ "ದೊರೆ"ಗಳು ರಿ ಬೊಕ್ಕಸವನ್ನೇ ಕೊಳ್ಳೆ ಹೊಡೆಯುತ್ತಿದ್ದಾರೆ.

ಮಂಗಳೂರು ಏರಿಯಾದಲ್ಲಿ ಅದೆಂಥ ಭೀಭತ್ಸ ನರಕ ಆಗಿದೆಯೆಂದರೆ ಅಣ್ಣ-ತಂಗಿ, ಗಂಡ- ಹೆಂಡತಿಯರೇ ಜೋಡಿಯಾಗಿ ಹೊರಹೋಗ ದಂತಾಗಿದೆ. ಂಡ ಹೆಣ್ಣು-ಗಂಡುಗಳ ಮೇಲೆ ಅನೈತಿಕತೆ ಆರೋಪ ಿಸಿ ಹಲ್ಲೆ ಮಾಡೋರ ಪಕ್ಷಕ್ಕೆ ಮತ ಹಾಕಲು ಸಾ? ಹಿಂದೂ ರಾಷ್ಟ್ರಕಟ್ಟುವ ನೆಪದಲ್ಲಿ ಸರ್ಕಾರ- ಜನ ದರೋಡೆ ಮಾಡಿ ಹಣ ಮಾಡುವ ಕಲ್ಲಡ್ಕ ಸ ಪಕ್ಷಕ್ಕೆ ಮತ್ತೆ ಜನ ಓಟು ಹಾಕಬಹುದಾ?

ಈ ರಾಜಕೀಯ-ಸಾಮಾಜಿಕ-ಧಾರ್ಮಿಕ ಪರಿಸ್ಥಿತಿಯನ್ನು ಅದ್ಯೆಗೆ ಎನ್‌ಕ್ಯಾಷ್ ಮಾಡಿಕೊಳ್ಳುತ್ತದೆಂಬುದರ ಆ ಪಕ್ಷದ ಹಣೆಬರಹ ನಿರ್ಧಾರವಾಗಲಿದೆ.

● ನಹುಷ

ಸಂಘಪರಿವಾರದ ದೇಶದ್ರೋಹಿಗಳು ಕಾಂಗ್ರೆಸ್‌ನ ದಂಡಪಿಂಡಗಳು ಮತ್ತು ಪ್ರಗತಿಪರರ ಮೇಲೆ ಕೇಸುಗಳು...

ಮಂಗಳೂರಿನ ಚೆಡ್ಡಿಗಳಿಗೆ ಅವರು ನಂಬುವ ಧರ್ಮವನ್ನು ರಕ್ಷಿಸಲು, ಅವರು ಆಚರಿಸುವ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು, ಅವರು ನಂಬುವ ದೇವರುಗಳನ್ನು ಸಂಪ್ರೀತಿಗೊಳಿಸಲು ಯುವತಿಯರನ್ನು ವಿವಸ್ತ್ರಗೊಳಿಸುವುದು, ಯುವತಿಯರ ಎದೆಗೆ ಕೈಹಾಕುವುದು ಮತ್ತು ಯುವತಿಯರಿಗೆ ಬಡಿಯುವುದು ಅಗತ್ಯ ಎಂದು ಮಂಗಳೂರಿನ ಕ್ರಿಮಿನಲ್ ಪಾಪಿ ಹೆಗ್ಡೆ ಮೊನ್ನೆ ಬೆಳ್ತಂಗಡಿಯಲ್ಲಿ ಘೋಷಿಸಿದ್ದಾನೆ. ಇನ್ನು ಮುಂದೆಯೂ ಇಂತಹ ಧರ್ಮ-ಸಂಸ್ಕೃತಿ ರಕ್ಷಣೆಯ ಕೆಲಸಗಳನ್ನು ಮುಂದುವರಿಸುವೆವು ಎಂದು ಹೇಳಿರುವ ಈತ ದೇಶದ ಕಾನೂನು ಮತ್ತು ಸಂವಿಧಾನಕ್ಕೆ ಬಹಿರಂಗವಾಗಿ ಸವಾಲೆಸೆದಿದ್ದಾನೆ. ಇದೇ ಹೆಗ್ಡೆ ಮತ್ತೂ ಮುಂದುವರಿದು ಸ್ವಾತಂತ್ರ್ಯ ದಿನವನ್ನು ಕರಾಳ ದಿನವೆಂದೂ ಘೋಷಿಸಿದ್ದಾನೆ. ರಾಷ್ಟ್ರಪಿತ ಗಾಂಧೀಜಿ ಮತ್ತು ನೆಹರೂ ಅವರನ್ನು ತನ್ನ ಲಂಗುಲಗಾಮಿಲ್ಲದ ಹೊಲಸು ಭಾಷೆಯಲ್ಲಿ ಹೀನಾಮಾನವಾಗಿ ನಿಂದಿಸಿದ್ದಾನೆ. ಈ ದೇಶದ ರಾಷ್ಟ್ರಧ್ವಜವನ್ನು ತುಚ್ಛವಾಗಿ ನಿಂದಿಸಿ ಕೆಂಪುಕೋಟೆಯಲ್ಲಿ ಭಗವಾಧ್ವಜ ಹಾರಿಸುವ ಸಂಕಲ್ಪ ಮಾಡಿದ್ದಾನೆ. ಅದೂ ಸ್ವಾತಂತ್ರ್ಯೋತ್ಸವದ ಮುನ್ನಾದಿನ. ಚೆಡ್ಡಿಗಳು ಅಖಂಡ ಭಾರತ ಸಂಕಲ್ಪ ದಿನವೆಂದು ಆಚರಿಸುವ ದಿನದಂದು. ದೇಶವನ್ನು ಕೋಮು-ಜಾತಿ ಆಧಾರದಲ್ಲಿ ಮತ್ತೆ ತುಂಡರಿಸುವ ಸಂಕಲ್ಪ ಮಾಡುವ ದಿನಾಚರಣೆಯಲ್ಲಿ....

ಹೌದು ನಮಗೆ ಗೊತ್ತಿದೆ. ಈ ಆರೆಸ್ಸೆಸ್ಸಿನ ಪಿಂಡಗಳು ಈ ದೇಶದ ಸಂವಿಧಾನವನ್ನು, ಕಾನೂನನ್ನು ಒಪ್ಪುವುದಿಲ್ಲ. ಅವರು ಒಪ್ಪುವ ಸಂವಿಧಾನ ಮನುಸ್ಮೃತಿ. ಖಂಡಿತವಾಗಿಯೂ ಈ ದೇಶದ ಸ್ವಾತಂತ್ರ್ಯ ಅವರ ಪಾಲಿಗೆ ಕರಾಳ ದಿನ ಎಂಬುದರಲ್ಲಿ ನಮಗೆ ಯಾವ ಸಂಶಯವೂ ಉಳಿದಿಲ್ಲ. ಯಾಕೆಂದರೆ ಈ ಚೆಡ್ಡಿಗಳ ಪೂರ್ವಜರು ಸ್ವಾತಂತ್ರ್ಯವನ್ನು ಎಂದೂ ಬಯಸಿರಲಿಲ್ಲ. ಅವರು ಚರಿತ್ರೆಯುದ್ದಕ್ಕೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ದ್ರೋಹವೆಸಗುತ್ತಲೇ ಬಂದವರು. ಸ್ವಾತಂತ್ರ್ಯ ಸೇನಾನಿಗಳ ವಿರುದ್ಧ ಬ್ರಿಟಿಷ್ ಪ್ರಭುತ್ವದ ಪರವಾಗಿ ಪಿತೂರಿ ನಡೆಸುತ್ತಾ ಬಂದವರು. ಭಾರತದಲ್ಲಿ ಬ್ರಿಟಿಷ್ ಪ್ರಭುತ್ವದ ಆಳ್ವಿಕೆಯನ್ನು ಆರೆಸ್ಸೆಸ್ಸಿನ ಸ್ವಂತದ ಲೇಖಕ ಕೇಶವ ಚಂದ್ರ ಸೇನ್ ಹೀಗೆ ಬಣ್ಣಿಸಿದ್ದಾನೆ: "ಭಾರತದಲ್ಲಿ ಇಂಗ್ಲಿಷ್ ಪ್ರಭುತ್ವದ ಉದಯ, ಪ್ರಾಚೀನ ಆರ್ಯ ಜನಾಂಗದ ಒಂದೇ ವಂಶಾವಳಿಯ ಎರಡು ಕುಟುಂಬಗಳ ವಾರಸುದಾರರ ಹಾಗೂ ಅಗಲಿದ ದಾಯಾದಿಗಳ ಪುನರ್ಮಿಲನದ ದ್ಯೋತಕ."

ಗಾಂಧೀಜಿಯನ್ನು ಕೊಂದ ಗೋಡ್ಸೆಯ ಶನಿಸಂತಾನಿಗಳಾದ ಈ ಚೆಡ್ಡಿಗಳಿಗೆ ಗಾಂಧೀಜಿಯ ಕುರಿತಂತೆ ದ್ವೇಷವಲ್ಲದೇ ಇನ್ನೇನಿದ್ದೀತು? ಈ ಫ್ಯಾಸಿಸ್ಟ್ ರಕ್ಕಸರಿಗೆ ಶಾಂತಿ, ಸೌಹಾರ್ದ, ಸಮೃದ್ಧಿ ಭ್ರಾತೃತ್ವದ ದ್ಯೋತಕವಾದ ತ್ರಿವರ್ಣ ಧ್ವಜದ ಬಗ್ಗೆ ಹೇಗೆ ತಾನೆ ಗೌರವ ಇದ್ದೀತು...?

ಇದೇ ಸಂಘ ಪರಿವಾರದ ಇನ್ನೊಂದು ತುಂಡು ಅಂದರೆ ಭಜರಂಗದಳವೆಂಬ ಪುಂಡು ಪೋಕರಿ ಹಫ್ತಾ ವಸೂಲಿ ವೀರರ ಗುಂಪು. ಮಂಗಳೂರು ನಗರದ ಬೋಳಾರ ಮುಳಿಹಿತ್ಲು ಎಂಬಲ್ಲಿ ರಾಷ್ಟ್ರಧ್ವಜವನ್ನು ಭಗವಾಧ್ವಜ ಎಂಬ ಕೋಮು ವಿಷವಾಯು ಹಬ್ಬಿಸುವ ಧ್ವಜಕ್ಕಿಂತ ಕೆಳಗೆ ಹಾರಿಸಿದ್ದಾರೆ.

ಅಲ್ಪಸಂಖ್ಯಾತ ಸಮುದಾಯಗಳನ್ನು ಪ್ರಚೋದನಾಕಾರಿಯಾಗಿ ಮತ್ತು ತುಚ್ಛವಾಗಿ ನಿಂದಿಸುವುದಂತೂ ಚೆಡ್ಡಿಗಳಿಗೆ ಕರಗತವಾಗಿದೆ. ಆದರೆ ಅದನ್ನು ತಡೆಯುವುದನ್ನು ಕರಾವಳಿಯ ಪೊಲೀಸರು ಮಹಾಪರಾಧ ಎಂದೇ ತಿಳಿದುಕೊಂಡಿದ್ದಾರೆ.

ಕರಾವಳಿಯಲ್ಲಿ ಸಂಘಪರಿವಾರದ ಮಂಗಗಳು ಇಷ್ಟೆಲ್ಲಾ ಅನಾಹುತಗಳನ್ನು ನಿರಂತರವಾಗಿ ಮಾಡುತ್ತಿದ್ದರೂ ಕರಾವಳಿಯ ಖಾಕಿಗಳು ತಮಗೂ ಇದಕ್ಕೂ ಏನೇನೂ ಸಂಬಂಧವಿಲ್ಲವೆಂಬಂತೆ ಮಗುಮ್ಮಾಗಿ ಕುಳಿತಿದ್ದಾರೆ.

ಬೆಳ್ತಂಗಡಿಯ ಡಿವೈಎಫ್‌ಐ ಕಾರ್ಯಕರ್ತರು ಪಾಪಿ ಹೆಗ್ಡೆ ಮಾಡಿದ ಭಾಷಣದ ವಿರುದ್ಧ ಪೊಲೀಸರಿಗೆ ದೂರು ನೀಡಲು ಹೋದಾಗ "ಹೆಗ್ಡೆಯ ಭಾಷಣ ತುಳು ಭಾಷೆಯಲ್ಲಿರುವುದರಿಂದ ಕೇಸು ರಿಜಿಸ್ಟರ್ ಮಾಡಲು ಸಾಧ್ಯವಿಲ್ಲ" ಎಂಬ ಪಿಳ್ಳೆ ನೆವ ನೀಡಿದ್ದಾರೆ. ಭಾರತದಲ್ಲಿ ನೂರಾರು ಭಾಷೆಗಳಿವೆ. ಯಾವ ಭಾಷೆಯಲ್ಲಿ ನಿಂದಿಸಿದರೂ ನಿಂದನೆ ನಿಂದನೆಯೇ ಹೊರತು ಪ್ರಶಂಸೆ ಆಗುವುದಿಲ್ಲ. ಭಾಷೆಯ ತೊಡಕನ್ನು ನಿವಾರಿಸುವುದು ಪೊಲೀಸರ ಕೆಲಸವಲ್ಲ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ನ್ಯಾಯಾಲಯ ಮಾಡಿಕೊಳ್ಳುತ್ತದೆ.

ಆದರೆ ಒಂದು ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕಾಂಗ್ರೆಸ್ ಈ ಸಂದರ್ಭದಲ್ಲಿ ಹೇಗೆ ಕೆಲಸ ಮಾಡಬೇಕಿತ್ತೋ ಅದಕ್ಕಿಂತ ಮಿಗಿಲಾಗಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆ, 'ಕರಾವಳಿ ಅಲೆ' ಪತ್ರಿಕೆ ಮತ್ತು ಪ್ರಗತಿಪರ ಸಂಘಟನೆಗಳು ಕೆಲಸ ಮಾಡುತ್ತಿವೆ. ಹೋಂ ಸ್ಟೇ ದಾಳಿಯ ವಿರುದ್ಧದ ಬಹಿರಂಗ ಪ್ರತಿಭಟನಾ ಸಭೆಯಲ್ಲಿ ಪ್ರಗತಿಪರರು ಭಾಷಣ ಮಾಡಿ ಚೆಡ್ಡಿಗಳ ಧರ್ಮ ರಕ್ಷಣೆಯ ಪರಿಯನ್ನು ಟೀಕಿಸಿದ್ದು ಮಂಗಳೂರಿನ ಪೊಲೀಸರಿಗೆ ಮಹಾಪರಾಧವಾಗಿ ಕಂಡಿದೆ. ನಿರೀಕ್ಷೆಯಂತೆಯೇ ಕೋಮು ಸೌಹಾರ್ದ ವೇದಿಕೆಯ ಪ್ರಧಾನ ಕಾರ್ಯದರ್ಶಿ ಕೆ.ಎಲ್. ಅಶೋಕ್ ಮತ್ತು ಅಧ್ಯಕ್ಷ ಸಮಿತಿಯಲ್ಲಿ ಸದಸ್ಯರಾಗಿರುವ ಗೌರಿ ಲಂಕೇಶ್ ವಿರುದ್ಧ ಕೇಸು ದಾಖಲಾಗಿದೆ. ಪರವಾಗಿಲ್ಲ, ಕೋಮು ಸೌಹಾರ್ದ ವೇದಿಕೆಯ ಮುಖಂಡರಿಗೆ ಈ ಬಗ್ಗೆ ಯಾವ ಪಶ್ಚಾತ್ತಾಪವೂ ಇಲ್ಲ. ಗೌರಿ ಲಂಕೇಶ್ ಮತ್ತು ಕೆ.ಎಲ್. ಅಶೋಕ್ ಸರಿಯಾದುದನ್ನೇ ಮಾಡಿದ್ದಾರೆ. ಮಾನವೀಯ ಕರ್ತವ್ಯವನ್ನು ನಿರ್ವಹಿಸಿದ್ದಕ್ಕೆ ಇವರೀರ್ವರ ಮೇಲೆ ಈ ಹಿಂದೆಯೂ ಕೇಸು ದಾಖಲಾಗಿದೆ. ಕೋಮು ಸೌಹಾರ್ದ ವೇದಿಕೆಯ ಕಾರ್ಯಕರ್ತರಿಗೆ ಈ ಬಗ್ಗೆ ಹೆಮ್ಮೆ ಇದೆ. ಕೇಸುಗಳನ್ನು ಹಾಕುವ ಮೂಲಕ ನಮ್ಮ ಹೋರಾಟವನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ಈ ಹಿಂದೆಯೂ ತೋರಿಸಿಕೊಟ್ಟಿದ್ದೇವೆ. ಮುಂದೆಯೂ ತೋರಿಸಿ ಕೊಡಲಿದ್ದೇವೆ. ಇಂತಹ ಕೇಸುಗಳನ್ನು ಕಾನೂನುರೀತ್ಯಾ ನಿಭಾಯಿಸುವ ಶಕ್ತಿಯೂ ಕೋಮು ಸೌಹಾರ್ದ ವೇದಿಕೆಗಿದೆ. ನಮಗೆ ಕಾಂಗ್ರೆಸ್‌ನ ಬೆಂಬಲದ ಅಗತ್ಯ ಖಂಡಿತಾ ಇಲ್ಲ. ನಾವು ಈ ಹಿಂದೆ ಬಾಬಾಬುಡನ್‌ಗಿರಿ ವಿವಾದ, ಜಾನುವಾರು ಹತ್ಯಾ ನಿಷೇಧ ಕಾಯಿದೆ, ಕ್ರೈಸ್ತರ ಮೇಲಿನ ದಾಳಿಯ ವಿರುದ್ಧದ ಹೋರಾಟಕ್ಕಾಗಿ ನಮ್ಮ ಮೇಲೆ ಹಾಕಲಾದ ಕೇಸುಗಳನ್ನೆಲ್ಲಾ ಸಮರ್ಥವಾಗಿಯೇ ನಿಭಾಯಿಸಿದ್ದೇವೆ ಎಂಬುದನ್ನು ನೆನಪಿಸಬಯಸುತ್ತೇವೆ.

ಓಟು ಗಳಿಕೆಗಾಗಿ ಗಾಂಧಿ ಮತ್ತು ನೆಹರೂ ಹೆಸರನ್ನು ಯಥೇಚ್ಛವಾಗಿ ಬಳಸುವ ಕಾಂಗ್ರೆಸ್ಸಿಗರಿಗೆ ಗಾಂಧಿ ಮತ್ತು ನೆಹರೂರವರನ್ನು ನಿಂದಿಸಿದರೆ ಅದೊಂದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರವೆಂದು ಅನಿಸುವುದೇ ಇಲ್ಲ. ಕರಾವಳಿ ಕಾಂಗ್ರೆಸ್‌ನ ತ್ರಿಮೂರ್ತಿಗಳಾದ ಮೊಯ್ಲಿ, ಆಸ್ಕರ್, ಪೂಜಾರಿ ಈವರೆಗೆ ಇದರ ವಿರುದ್ಧ ತುಟಿಪಿಟಿಕ್ಕೆಂದಿಲ್ಲ. ಮೊಯ್ಲಿ ಮಹಾತ್ಮ ಕಳೆದ ಕೆಲವು ದಿನಗಳಿಂದ ಅಲ್ಲಲ್ಲಿ "ದೀಪ ಬೆಳಗಿಸುತ್ತಾ ರೀಲು ಬಿಡುವ" ಸಲುವಾಗಿ ಮಂಗಳೂರಿನಲ್ಲೇ ಝಾಂಡಾ ಹೂಡಿದ್ದಾರೆ. ಆಧುನಿಕ ರೋಮಿಯೋ ಆಸ್ಕರ್ ಫೆರ್ನಾಂಡಿಸ್ ತನ್ನ ಜ್ಯೂಲಿಯೆಟ್ ಜೊತೆಗೂಡಿ ಕರಾವಳಿಯ ವಿವಿಧೆಡೆ ತಿರುಗಾಡುತ್ತಲೇ ಇದ್ದಾರೆ. ಸದ್ಯ ನಿರುದ್ಯೋಗಿಯಾಗಿರುವ ಪೂಜಾರಿ ಕೆಲವೊಮ್ಮೆ ಕೆಟ್ಟ ಕನಸಿನಿಂದ ಬೆಚ್ಚಿ ಬಿದ್ದು ಎಚ್ಚರಗೊಂಡವರಂತೆ ಅರಚಾಡುವುದಿದೆ.

ಕರಾವಳಿಯ ಕಾಂಗ್ರೆಸ್ಸಿಗರಿಗೆ ಇರುವುದು ಎರಡೇ ಕಾರ್ಯಸೂಚಿ. ಇಂದಿರಾ ಗಾಂಧಿ ಪುಣ್ಯತಿಥಿ ಮತ್ತು ರಾಜೀವ್ ಗಾಂಧಿ ಜನ್ಮದಿನ. ಕರಾವಳಿಯಲ್ಲಿ ಕಾಂಗ್ರೆಸ್‌ನ ಇಂದಿನ ಅಧೋಗತಿಗೆ ಅವರ ಜನ್ಮದಿನ ಮತ್ತು ಪುಣ್ಯತಿಥಿಯ ಪೌರೋಹಿತ್ಯವೇ ಕಾರಣ.

ಕಳೆದ ವರ್ಷ ಕಲ್ಲಡ್ಕ ಭಟ್ಟ ಅಲ್ಪಸಂಖ್ಯಾತ ಸಮುದಾಯವನ್ನು ಪ್ರಚೋದಿಸಿ ಕೋಮುಗಲಭೆ ಸೃಷ್ಟಿಸುವ ಸಲುವಾಗಿ ಗೊಗ್ಗರು ಧ್ವನಿಯಲ್ಲಿ ಉಪ್ಪಿನಂಗಡಿಯಲ್ಲಿ 'ಗಾಯತ್ರಿ ಮಂತ್ರ' ಪಠಿಸಿದಷ್ಟು ಸುಲಭವಾಗಿ ಭಾಷಣ ಬಿಗಿದದ್ದನ್ನು ವಿರೋಧಿಸಿ ಅಂದು ಕೇಸು ದಾಖಲಿಸಿದ್ದು ಉಪ್ಪಿನಂಗಡಿ ಕೇಂದ್ರ ಜಮಾ ಮಸೀದಿಯ ಅಧ್ಯಕ್ಷರೇ ಹೊರತು ಮುಸ್ಲಿಮರನ್ನು ತಮ್ಮ ಓಟ್ ಬ್ಯಾಂಕಾಗಿ ಬಳಸುತ್ತಿರುವ ಕಾಂಗ್ರೆಸ್ ಅಲ್ಲ. ಕಲ್ಲಡ್ಕನ ವಿರುದ್ಧ ಕೋಮುಗಲಭೆಗೆ ಪ್ರಚೋದನೆ ನೀಡಿದ ದೂರು ದಾಖಲಾಗಿದ್ದಂತಹ ದಿನಗಳಲ್ಲೇ ಮಂಗಳೂರು ಪೊಲೀಸ್ ಕಮೀಷನರೇಟ್‌ನ ನೂತನ ಕಚೇರಿ ಉದ್ಘಾಟನಾ ಸಮಾರಂಭ ನಡೆದಿತ್ತು. ಆ ಕಾರ್ಯಕ್ರಮದಲ್ಲಿ ಕಲ್ಲಡ್ಕ ವಿಐಪಿ ಸಾಲಿನ ಮೊದಲ ಕುರ್ಚಿಯಲ್ಲೇ ಆಸೀನನಾಗಿದ್ದ. ಅದೂ ತನ್ನ ಮೇಲೆ ದಾಖಲಾದ ಕೇಸಿಗೆ ಸಂಬಂಧಿಸಿದಂತೆ ಜಾಮೀನು ಪಡೆಯದೇ. ಆದರೂ ಕಲ್ಲಡ್ಕನ ಆಜ್ಞಾನುವರ್ತಿ ಪೊಲೀಸರಿಗೆ ಕಲ್ಲಡ್ಕನನ್ನು ಅರೆಸ್ಟ್ ಮಾಡುವ ಧಮ್ ಇರಲಿಲ್ಲ ಬಿಡಿ. ಆಗಲೂ ಕಾಂಗ್ರೆಸ್‌ನ ದಪ್ಪ ಚರ್ಮದ ಮಂದಿಗಳು ಒಂದೇ ಒಂದು ಖಂಡನಾ ಹೇಳಿಕೆಯನ್ನೂ ನೀಡಲಿಲ್ಲ. ಪ್ರತಿಭಟನೆ ನಡೆಸುವುದಂತೂ ದೂರದ ಮಾತು. ಕಲ್ಲಡ್ಕನ ವಿರುದ್ಧ ದಾಖಲಾಗಿದ್ದ ಕೇಸಿಗೆ ಖಾಕಿ ಧರಿಸಿದ ಆರೆಸ್ಸೆಸ್ ಗುಲಾಮರು ಬಿ. ರಿಪೋರ್ಟ್ ಹಾಕಿ ಬಿಟ್ಟಿದ್ದಾರೆ. ಇದರ ವಿರುದ್ಧವೂ ಕಾಂಗ್ರೆಸ್‌ನ ಕಪಟಿ ಸೆಕ್ಯುಲರ್‌ವಾದಿಗಳು ಧ್ವನಿಯೆತ್ತುತ್ತಿಲ್ಲ. ಒನ್ಸ್ ಅಗೇನ್ ಕೋಮು ಸೌಹಾರ್ದ ವೇದಿಕೆಯ ಜಿಲ್ಲಾಧ್ಯಕ್ಷ ಸುರೇಶ್ ಭಟ್ ಬಾಕ್ರಬೈಲು ಅವರು ಕಾನೂನುರೀತ್ಯಾ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ.

ಕರಾವಳಿಯ ಪೊಲೀಸ್ ವೆಬ್‌ಸೈಟ್‌ನಲ್ಲಿ ಆರೆಸ್ಸೆಸ್‌ನ ಕವಾಯತು ಮತ್ತಿತರ ದೃಶ್ಯಗಳನ್ನು ಹಾಕಿದ್ದನ್ನು ವಿರೋಧಿಸಿ ಇತರ ಪ್ರಗತಿಪರ ಸಂಘಟನೆಗಳ ಜೊತೆಗೂಡಿ ಪ್ರತಿಭಟಿಸಿದ್ದೂ ಕೋಮು ಸೌಹಾರ್ದ ವೇದಿಕೆಯೇ ಹೊರತು ರಾಜ್ಯದ ಅಧಿಕೃತ ವಿರೋಧ ಪಕ್ಷ ಕಾಂಗ್ರೆಸ್ ಅಲ್ಲ.

ಕಾಂಗ್ರೆಸ್‌ನ ದಂಡಪಿಂಡಗಳಿಗೆ ಸಿಟ್ಟು ಬರುವುದೇ ಇಲ್ಲ ಎಂಬುವುದರಿಂದ ನಮಗೆ ಒಂದಂತೂ ಸ್ಪಷ್ಟವಾಗಿದೆ. "ಕರಾವಳಿಯ ಕಾಂಗ್ರೆಸ್ ಬಿ.ಜೆ.ಪಿಯ ಬಿ.ಟೀಮ್" ಆಗಿದೆ. ಅಷ್ಟಕ್ಕೂ ಅನ್ಯಾಯದ ವಿರುದ್ಧ ಸಿಡಿದೇಳಲು ಅವರೇನು ಕೋಮು ಸೌಹಾರ್ದ ವೇದಿಕೆಯ ಕಾರ್ಯಕರ್ತರೇ?

(ಪ್ರಗತಿಪರ ಕಾಂಗ್ರೆಸ್ಸಿಗ ಪಿ.ವಿ.ಮೋಹನ್‌ರ ಕ್ಷಮೆ ಯಾಚಿಸುತ್ತೇನೆ.)


● ಇಸ್ಮತ್ ಪಜೀರ್

ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಮಂಗಳೂರು


ಗ್ಯಾಂಗ್ಸ್ ಆಫ್ ಹಿಂದೂತ್ವ: ಭಾಗ-2

ಬಿಡುಗಡೆಯಾಗಿರುವ ಭಾಗ-1

ದಿನಾಂಕ 28.7.2012ರ ಸಂಜೆ ಮಂಗಳೂರಿನ ಪಡಿಲಿನಲ್ಲಿರುವ 'ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇ'ಯಲ್ಲಿ 13 ಯುವಕ-ಯುವತಿಯರು ಯುವಕನೊಬ್ಬನ ಹುಟ್ಟುಹಬ್ಬದ ಪ್ರಯುಕ್ತ ಸಂತೋಷಕೂಟ ಆಚರಿಸಲು ಸೇರಿದ್ದರು. ಸಂಜೆ 6 ಗಂಟೆ ಹೊತ್ತಿಗೆ, ತಾವು 'ಹಿಂದೂ ಜಾಗರಣ ವೇದಿಕೆ'ಯವರು ಎಂದು ಜಾಹೀರು ಮಾಡಿಕೊಂಡ ಯುವಕರ ಗುಂಪು ಹೋಮ್ ಸ್ಟೇ ಒಳಗೆ ನುಗ್ಗಿ ಯುವಕ-ಯುವತಿಯರ ಮೇಲೆ ಹಲ್ಲೆ ನಡೆಸಲು ಶುರುವಿಟ್ಟುಕೊಂಡಿತ್ತು. ಆ ಹೊತ್ತಿಗೆ (ತಮ್ಮ ಸುದ್ದಿಮಾಹಿತಿದಾರರ ಮೂಲಕ ವಿಷಯ ತಿಳಿದ) ಎರಡು ಖಾಸಗಿ ಟಿ.ವಿ. ಚಾನೆಲ್ಲುಗಳ ವರದಿಗಾರರು ಅಲ್ಲಿಗೆ ಹೋಗಿ ಹಲ್ಲೆಯ ಘಟನೆಯನ್ನು ಚಿತ್ರೀಕರಿಸಿಕೊಳ್ಳತೊಡಗಿದರು. ಒಂದು ತಾಸು ಹಿಂಸಾಚಾರ ನಡೆದ ಬಳಿಕ, ಸ್ಥಳಕ್ಕೆ ಮಂಗಳೂರು ಗ್ರಾಮಾಂತರ ಠಾಣೆಯ ಪೊಲೀಸರು ಬಂದರು. ಅದೇ ಹೊತ್ತಿಗೆ, ಮಂಗಳೂರು ಮಹಾನಗರ ಪಾಲಿಕೆಯ ಪಡಿಲ್ ವಾರ್ಡಿನ ಬಿ.ಜೆ.ಪಿ. ಸದಸ್ಯನೂ ಸ್ಥಳಕ್ಕೆ ಬಂದು, ಯುವಕ-ಯುವತಿಯರು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂದೂ, ಅವರನ್ನು ಬಂಧಿಸಬೇಕೆಂದೂ ತಾಕೀತು ಮಾಡತೊಡಗಿದ. ಪೊಲೀಸರು ಹಲ್ಲೆ ನಡೆಸಿದವರನ್ನು 'ಸಮಾಧಾನ'ಗೊಳಿಸಿ, ಹಲ್ಲೆಗೊಳಗಾದವರನ್ನು 'ವಿಚಾರಣೆ'ಗೆಂದು ಠಾಣೆಗೆ ಕರೆದೊಯ್ದರು. ಒಂದು ಗಂಟೆ ಕಾಲ ಗುಂಪು ಯಾವ ಬಗೆಯಲ್ಲಿ ಈ ಅನಾಚಾರವನ್ನೆಸಗಿತ್ತು ಎನ್ನುವುದನ್ನು 7.30ರ ಹೊತ್ತಿಗೆ ಖಾಸಗಿ ಟಿ.ವಿ. ಚಾನೆಲ್ಲುಗಳು ಬಿತ್ತರಿಸತೊಡಗಿದವು. ಹಲ್ಲೆಯ ಸ್ವರೂಪ ದೇಶಾದ್ಯಂತ ಬಿತ್ತರವಾಗುತ್ತಿದ್ದಂತೆ, ಆಕ್ರೋಶಿತ ಪ್ರತಿಕ್ರಿಯೆಗಳು ಬರತೊಡಗಿದವು. ಆಗ ಪೊಲೀಸರು ನಗರಪಾಲಿಕೆಯ ಸದಸ್ಯನನ್ನೂ ಸೇರಿದಂತೆ ಹಲ್ಲೆಯಲ್ಲಿ ಭಾಗಿಯಾಗಿದ್ದ ಏಳು ಜನರನ್ನು ಬಂಧಿಸಿದರು. ಆದರೆ ಬಂಧನ ನಡೆದ ಅರ್ಧ ಗಂಟೆಯೊಳಗೆ ಬಿ.ಜೆ.ಪಿ. ಪಕ್ಷದವರು ಠಾಣೆಗೆ ಹೋಗಿ ಗಲಾಟೆ ಮಾಡಿ ಪಾಲಿಕೆ ಸದಸ್ಯನನ್ನು ಬಿಡಿಸಿಕೊಂಡು ಬಂದರು.



ಮರುದಿನ 'ಹಿಂದೂ ಜಾಗರಣ ವೇದಿಕೆ'ಯ ಪಾಲಕ ಸಂಘಟನೆ 'ವಿಶ್ವ ಹಿಂದು ಪರಿಷತ್' ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಿ 'ವ್ಯಾಪಕವಾಗಿರುವ ಮಾದಕವಸ್ತು ಹಾಗು ವೇಶ್ಯಾವಾಟಿಕೆಯ ಜಾಲದ ಭಾಗವಾಗಿರುವ ಹೋಮ್ ಸ್ಟೇಗಳ ಮೇಲೆ ಕ್ರಮ ಕೈಗೊಳ್ಳಲು' ಆಗ್ರಹಿಸಿತು. ವೇದಿಕೆಯ ರಾಜ್ಯಾಧ್ಯಕ್ಷ ಟಿ.ವಿ. ಚಾನೆಲ್ಲುಗಳಲ್ಲಿ ಪ್ರತ್ಯಕ್ಷನಾಗಿ ದಿನಪೂರ್ತಿ ನಾಲ್ಕು ಸಂಗತಿಗಳನ್ನು ಪದೇಪದೆ ಒತ್ತಿ ಹೇಳಿದ- 'ಹಲ್ಲೆ ನಡೆಸಿದವರು ನಮ್ಮ ಸಂಘಟನೆಯವರಲ್ಲ, ವೇಶ್ಯಾವಾಟಿಕೆಯ ಜಾಲ ಹೋಮ್ ಸ್ಟೇ ಹಾಗು ರೆಸಾರ್ಟುಗಳ ಮೂಲಕ ಬಲವಾಗಿ ಹಬ್ಬಿ ಯುವತಿಯರನ್ನು ಬಲೆಗೆ ಹಾಕಿಕೊಳ್ಳುತ್ತಿದೆ. ನಾಗರಿಕರು ನೂರಾರು ಸಾರಿ ಪೊಲೀಸರಿಗೆ ದೂರು ಕೊಟ್ಟಿದ್ದರೂ ಪೊಲೀಸರು ಯಾವ ಕ್ರಮವನ್ನೂ ಕೈಗೊಂಡಿಲ್ಲ, ಸದರಿ ಹಿಂಸೆಗೆ ಇದೇ ಕಾರಣವಾಗಿದ್ದು ಇನ್ನು ಮುಂದೆಯೂ ನಮ್ಮ ಸಂಘಟನೆ ಹೋಮ್ ಸ್ಟೇ ಮತ್ತು ರೆಸಾರ್ಟುಗಳ ಮೇಲೆ ನಿಗಾ ಇಟ್ಟು ಸೂಕ್ತ ಕ್ರಮ ಕೈಗೊಳ್ಳಲು ಸನ್ನದ್ಧವಾಗಿದೆ'. ಮಂಗಳೂರು ಹಾಗು ರಾಜ್ಯದ ಇತರೆಡೆಗಳಲ್ಲಿ ವಿದ್ಯಾರ್ಥಿಗಳು, ಪ್ರಗತಿಪರ ಹಾಗು ಮಾನವ ಹಕ್ಕು ಸಂಘಟನೆಗಳು ಪ್ರಸ್ತುತ ಘಟನೆ ಹಾಗು ಅದರಲ್ಲಿ ಸಂಘಪರಿವಾರ ವಹಿಸಿರುವ ಪಾತ್ರವನ್ನು ಖಂಡಿಸಿ ಪ್ರತಿಭಟನೆ ನಡೆಸತೊಡಗಿದರು. ಆಡಳಿತಾರೂಢ ಬಿ.ಜೆ.ಪಿ. ಸರಕಾರದ ಗೃಹಮಂತ್ರಿ ಆರ್.ಅಶೋಕ್ ಮತ್ತು ಸ್ವತಃ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಹಲ್ಲೆಯನ್ನು ಖಂಡಿಸುವ ಮತ್ತು ಆರೋಪಿಗಳ ಮೇಲೆ ಕಠಿಣ ಕಾನೂನುಕ್ರಮ ಜರುಗಿಸುವ ಹೇಳಿಕೆಗಳನ್ನು ನೀಡಿದರು. ಘಟನೆ ನಡೆದ ಮರುದಿನ 'ಕರ್ನಾಟಕ ರಾಜ್ಯ ಮಹಿಳಾ ಆಯೋಗ'ದ ಅಧ್ಯಕ್ಷರಾದ ಸಿ.ಮಂಜುಳಾ 'ಯುವತಿಯ ಮೇಲೆ ನಡೆದ ಈ ಅಸಭ್ಯ ಹಿಂಸೆ'ಯನ್ನು ಖಂಡಿಸಿದರು ಮತ್ತು ವಿವರವಾದ ತನಿಖೆ ನಡೆಸಿ ಕಠಿಣ ಕ್ರಮ ಜರುಗಿಸಲು ಸರಕಾರಕ್ಕೆ ಶಿಫಾರಸ್ಸು ಮಾಡುವುದಾಗಿಯೂ ಘೋಷಿಸಿದರು. ಅಂತೆಯೇ ನಾಲ್ಕನೇ ದಿನ ಮಂಗಳೂರಿಗೆ ಬಂದು ತುರ್ತು ತನಿಖೆ ನಡೆಸಿದರು. ಮಂಜುಳ, ಹಲ್ಲೆಗೊಳಗಾದ 13 ಯುವಕ ಯುವತಿಯರಲ್ಲಿ ಒಬ್ಬ ಯುವತಿಯನ್ನು ಮಾತ್ರ ಭೇಟಿಯಾದರು. ತಮ್ಮ ತನಿಖೆಯ ಸಂಕ್ಷಿಪ್ತ ವಿವರಗಳನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿ ಇಡೀ ಪ್ರಕರಣಕ್ಕೆ ಅವರು ಒಂದು 'ಕೌತುಕ ತಿರುವು' ನೀಡಿದರು. ಅವರ ಪ್ರಕಾರ: "ಹಲ್ಲೆ ಖಂಡನೀಯ. ಆದರೆ ಘಟನೆಯ ಹಿಂದೆ ಇರಬಹುದಾದ ಯುವಜನರನ್ನು ದಾರಿತಪ್ಪಿಸುವ ಮಾದಕ ದ್ರವ್ಯ ಹಾಗು ವೇಶ್ಯಾವಾಟಿಕೆ ಜಾಲದ ಪಾತ್ರವನ್ನೂ ಪರಾಂಬರಿಸಬೇಕು. ಹೋಮ್ ಸ್ಟೇಯ ಮಾಲಕಿಯ ಹಿನ್ನೆಲೆ ಹಾಗು ಹಲ್ಲೆಗೊಳಗಾದ ಯುವಕನೋರ್ವನ ತಾಯಿಯ ನೈತಿಕ ಹಿನ್ನೆಲೆಯೂ ತನಿಖಾಯೋಗ್ಯ." ಇದರ ಮುಂದುವರಿಕೆಯಾಗಿ ದಕ್ಷಿಣ ಜಿಲ್ಲೆಯಾದ್ಯಂತ ಸಂಘಪರಿವಾರದ ಸಂಘಟನೆಗಳು 'ಹೋಮ್ ಸ್ಟೇ ಹಾಗು ರೆಸಾರ್ಟುಗಳ ಮೂಲಕ ಹಬ್ಬಿರುವ ಮಾದಕದ್ರವ್ಯ ಹಾಗು ವೇಶ್ಯಾವಾಟಿಕೆಯ ಜಾಲದ ಮೇಲೆ ಕ್ರಮ ಕೈಗೊಳ್ಳಿ, ಹಿಂದೂ ಸಂಸ್ಕೃತಿಯ ಮೇಲೆ ನಡೆಯುತ್ತಿರುವ ಆಕ್ರಮಣವನ್ನು ನಿಲ್ಲಿಸಿ" ಎಂದು ಪ್ರತಿಭಟನಾ ಕಾರ್ಯಕ್ರಮಗಳನ್ನು ನಡೆಸಿದವು.



ಹಲ್ಲೆ ನಡೆದ ವಾರದೊಳಗೇ ಅನಾವರಣಗೊಂಡ ಇಷ್ಟು ವಿದ್ಯಮಾನಗಳಲ್ಲಿ ಅವಶ್ಯಕವಾಗಿ ಗಮನಿಸಬೇಕಾದ ಮುಖ್ಯ ಅಂಶಗಳಿವೆ: 1. ಸಂಘಪರಿವಾರವು ಹಿಂಸೆಯಲ್ಲಿ ತಾನು ಭಾಗಿಯಲ್ಲವೆಂದೂ, ಇದು ಆಕ್ರಮಣಕ್ಕೆ ಒಳಗಾಗುತ್ತಿರುವ ಹಿಂದೂ ನಾಗರಿಕರ ತತ್‌ಕ್ಷಣದ ಆಕ್ರೋಶಿತ ಕೃತ್ಯವೆಂದೂ ಸಾರುತ್ತದೆ.

2. ಹಿಂಸಾಘಟನೆಯ ಬೆನ್ನಿಗೆ, ಘಟನೆಯ ಸಮರ್ಥನೆಗೆ ಒಂದು ಕಾರ್ಯ-ಕಾರಣ ಸಂಬಂಧದ ನಿರೂಪಣೆಯನ್ನು ಕಟ್ಟುತ್ತದೆ ('ಮಾದಕ ದ್ರವ್ಯ ಹಾಗು ವೇಶ್ಯಾವಾಟಿಕೆಯ ಜಾಲ').

3. ಇಡೀ ಹಿಂದೂ ಸಮುದಾಯವು ಅನಾಚಾರಕ್ಕೆ ತುತ್ತಾಗಿ ದೂರು ನೀಡಿದರೂ ಕಾನೂನು ಪಾಲಕರು ಯಾವ ಕ್ರಮಗಳನ್ನೂ ಕೈಗೊಳ್ಳದೇ ಇರುವುದರಿಂದ ಆತಂಕಿತ ಹಿಂದೂಗಳ ರಕ್ಷಣೆಗೆ ತಾನು ಮುಂದಾಳತ್ವ ವಹಿಸುವುದಾಗಿ ಸಂಘಪರಿವಾರ ಬಹಿರಂಗವಾಗಿ ಸಾರುತ್ತದೆ. ಊರೂರುಗಳಲ್ಲಿ ಪ್ರತಿಭಟನೆಗಳನ್ನು ಆಯೋಜಿಸುತ್ತದೆ.

4. ಹಿಂಸೆ ನಡೆಸಿದವರು 'ಸಮಾಜ ರಕ್ಷಕರು', ಹಿಂಸೆಗೊಳಗಾದವರು ಮತ್ತವರ ಬೆಂಬಲಿಗರು 'ಸಮಾಜ ಕಂಟಕರು' ಎಂಬುದನ್ನು ಸಾಮಾನ್ಯ ಜನರ ಬುದ್ಧಿಭಾವಗಳಲ್ಲಿ ಬಿತ್ತುವ ಕಾರ್ಯಾಚರಣೆಯನ್ನು ಎಡೆಬಿಡದೆ ಮುಂದುವರೆಸುತ್ತದೆ.

ಇದು ಹಿಂದೂತ್ವ ಫ್ಯಾಸಿಸಂನ 'ಕೈಪಿಡಿ'ಯಲ್ಲಿರುವ ಮೊದಲ ಹಂತದ ಕಾರ್ಯಸೂಚಿಯ ಕಾರ್ಯಾನುಷ್ಠಾನ. ಎರಡನೇ ಹಂತದಲ್ಲಿ, ಸಾಂವಿಧಾನಿಕ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಆಡಳಿತ ನಡೆಸುವ ಸರಕಾರ ತನ್ನ ಕಾರ್ಯಸೂಚಿಯನ್ನು ಒಪ್ಪಿ, ಆಡಳಿತ ವ್ಯವಸ್ಥೆಯ ಮೂಲಕ ಕಾರ್ಯಾನುಷ್ಠಾನಗೊಳಿಸುವಂತೆ ಮಾಡುವ ಮಾರ್ಗೋಪಾಯಗಳ ಕಡೆ ಸಂಘಪರಿವಾರ ಗಮನ ಹರಿಸುತ್ತದೆ. ಪ್ರಸ್ತುತ, ಸಂಘಪರಿವಾರದ ಅಧಿಕೃತ ಭಾಗವಾಗಿರುವ ಬಿ.ಜೆ.ಪಿ. ಪಕ್ಷವೇ ಕರ್ನಾಟಕದಲ್ಲಿ ಅಧಿಕಾರದಲ್ಲಿದೆ. ಹಾಗಾಗಿ, ಸಂಘಪರಿವಾರದ ಕಾರ್ಯಸೂಚಿಯನ್ನು ಫ್ಯಾಸಿಸ್ಟ್ ಆಳ್ವಿಕೆಯ 2ನೇ ಹಂತಕ್ಕೆ ಕೊಂಡೊಯ್ಯಲು ಬಿ.ಜೆ.ಪಿ. ಸರಕಾರ ಅನುಸರಿಸುವ ನಡೆಯನ್ನು ಗಮನಿಸಿದರೆ 'ಗ್ಯಾಂಗ್ಸ್ ಆಫ್ ಹಿಂದೂತ್ವ: ಭಾಗ-2' ರ ಚಿತ್ರೀಕರಣದ ವಿವರಗಳು ಅನಾವರಣಗೊಳ್ಳುತ್ತವೆ.

ಭಾಗ-2ರ ಚಿತ್ರೀಕರಣ ವಿವರಗಳು

ದೃಶ್ಯ-1: ದಿನಾಂಕ 5.8.2012 ರಂದು ಪ್ರಸ್ತುತ ಉನ್ನತ ಶಿಕ್ಷಣ ಸಚಿವರೂ, ಹಲ್ಲೆ ನಡೆದಿರುವ ದ.ಕ. ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ (ಬಾಬಾಬುಡನ್‌ಗಿರಿ ದರ್ಗಾವನ್ನು 'ದತ್ತಪೀಠ'ವೆಂಬುದಾಗಿ ವಿವಾದ ಸೃಷ್ಟಿಸಿ, ಅದನ್ನು ದಕ್ಷಿಣ ಭಾರತದ ಆಯೋಧ್ಯೆ ಮಾಡುವ ಸಂಘಪರಿವಾರದ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸಿದ ನಟ) ಸಿ.ಟಿ.ರವಿ ವಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ 'ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇ ದಾಳಿ'ಯ ಬಗ್ಗೆ ಪತ್ರಕರ್ತರು ಪ್ರತಿಕ್ರಿಯೆ ಕೇಳಿದಾಗ ಸಚಿವರು ಹೊಡೆದ ಡೈಲಾಗ್: "ಕೆಲವು ಕಾರ್ಯಕರ್ತರು ಭಾಗಿಯಾಗಿದ್ದಾರೆ ಎಂಬ ಕಾರಣಕ್ಕಾಗಿ ಇಡೀ 'ಹಿಂದೂ ಜಾಗರಣಾ ವೇದಿಕೆ'ಯನ್ನು ದೂಷಿಸುವುದು ಸರಿಯಲ್ಲ. ವೇದಿಕೆಯ ಅಧ್ಯಕ್ಷರೇ ಹಲ್ಲೆಯನ್ನು ಖಂಡಿಸಿ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಿ ಎಂದು ಹೇಳಿದ್ದಾರೆ. ಸಂಘಟನೆಯೊಂದು ಪದೇಪದೆ ಸಮಾಜವಿರೋಧಿ ಕೃತ್ಯಗಳಲ್ಲಿ ಭಾಗಿಯಾದಾಗ ಮಾತ್ರ ನಿಷೇಧಿಸುವ ಸಂಗತಿಯನ್ನು ಪರಿಗಣಿಸಬಹುದಷ್ಟೆ." ('ದಿ ಹಿಂದೂ', ಅಗಸ್ಟ 6,2012, ಪು.4)

ಘಟನೆ ನಡೆದ ಒಂದು ವಾರದಲ್ಲಿಯೇ, ತನಿಖೆ ಪೂರ್ಣಗೊಳ್ಳುವ ಮೊದಲೇ ಸಚಿವರು 'ಹಿಂದೂ ಜಾಗರಣ ವೇದಿಕೆ'ಯನ್ನು ನಿರಾಯಾಸವಾಗಿ ಆರೋಪಮುಕ್ತಗೊಳಿಸಿಬಿಡುತ್ತಾರೆ.

ದೃಶ್ಯ2: ದಿನಾಂಕ 8.7.2012ರಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಸಿ.ಮಂಜುಳ ಘಟನೆಯ ಕುರಿತ ತಮ್ಮ ವರದಿಯನ್ನು ಸರಕಾರಕ್ಕೆ ಸಲ್ಲಿಸಿದರು. ಸಂವಿಧಾನಕ್ಕೆ ಬದ್ಧತೆಯುಳ್ಳ ಆಯೋಗಗಳು ಸತ್ಯಶೋಧನೆಯಲ್ಲಿ ಒಂದು ಕ್ರಮವನ್ನು ಅನುಸರಿಸುವುದು ವಾಡಿಕೆ. ಹಲ್ಲೆಗೆ ತುತ್ತಾದವರನ್ನು ಭೇಟಿಮಾಡಿ ಘಟನೆಯ ವಿವರಗಳನ್ನು ಸಂಗ್ರಹಿಸುವುದು, ಪೊಲೀಸರಿಂದ ದಾಳಿಕೋರರ ಸಂಪೂರ್ಣ ಮಾಹಿತಿ ಪಡೆಯುವುದು- ಅನುಸರಿಸಬೇಕಾದ ಕನಿಷ್ಠ ಕ್ರಮ. ಇವುಗಳ ಆಧಾರದಲ್ಲಿ ಸಾಂವಿಧಾನಿಕ ನ್ಯಾಯದ ಚೌಕಟ್ಟಿನ ನೆಲೆಯಲ್ಲಿ ಘಟನೆಯ ಸ್ಪಷ್ಟ ಚಿತ್ರ ಕಟ್ಟಿಕೊಡುವುದು ಹಾಗು ಘಟನೆಯ ಪರಿಮಿತಿಗೆ ಸಂಬಂಧಿಸಿದಷ್ಟಕ್ಕೆ ಮಾತ್ರವೇ ಸರಕಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸುವುದು ಮಾನವಂತ ವಿಧಾನ. ಆದರೆ ಸದರಿ ಆಯೋಗದ ಅಧ್ಯಕ್ಷರು ಈ ಕ್ರಮವನ್ನು ಅನುಸರಿಸುವುದಿರಲಿ, ಘಟನೆಯನ್ನು ನೋಡುವ ನ್ಯಾಯಕ್ರಮವನ್ನೇ ಪಲ್ಲಟಗೊಳಿಸಿಬಿಟ್ಟಿದ್ದಾರೆ. ಹಲ್ಲೆಗೊಳಗಾದ ಯುವಕ ಯುವತಿಯರು ಮತ್ತು ಅವರ ಕುಟುಂಬ, ಹಲ್ಲೆಯನ್ನು ಸಾರ್ವಜನಿಕಗೊಳಿಸಿದ ಮಾಧ್ಯಮದವರೇ ಆರೋಪಿಗಳು- ಇವರನ್ನು ತನಿಖೆಗೆ ಒಳಪಡಿಸಬೇಕೆಂದು ಮಹಿಳಾ ಆಯೋಗದ ಅಧ್ಯಕ್ಷರು ಸಲ್ಲಿಸಿರುವ ವರದಿ ಹೇಳುತ್ತದೆ. ಆಯೋಗದ ವರದಿ ದಾಳಿಕೋರರನ್ನು 'ಶ್ರೀರಾಮಸೇನೆ'ಯ ಮಾಜಿ ಕಾರ್ಯಕರ್ತರು ಎಂದು ಮಾತ್ರ ಗುರುತಿಸುತ್ತದೆ ಮತ್ತು ಅವರ ಮೇಲೆ ಕಠಿಣಕ್ರಮ ಕೈಗೊಳ್ಳಬೇಕೆಂದು ಹೇಳುತ್ತದೆ! ವಿಕೃತಿ ಘಟನೆಯ ನ್ಯಾಯಿಕ ಕಣ್ಕೋಟ ಥೇಟು, ಹಲ್ಲೆ ನ... ಮರುದಿನದಿಂದಲೇ ಘಟನೆಗೆ ಕಾರಣಗಳನ್ನು ಉತ... ಭರದಿಂದ ಪ್ರಚಾರದಲ್ಲಿ ತೊಡಗಿದ ಸಂಘಪರಿವಾ... ಕಣ್ಕೋಟವೇ ಆಗಿದೆ. ಉದಾಹರಣೆಗೆ ವರದಿಯ... ವರಸೆ ನೋಡಿ: "ಆ ದಿನ ಪಾರ್ಟಿಯಲ್ಲಿದ್ದ ಯುವ... ಗಾಂಜಾ ಸೇವಿಸಿರುತ್ತರೆಂದು ಪೊಲೀಸರಿಂದ ಮಾ... ಪಡೆದಿರುತ್ತೇನೆ. ಅವರನ್ನು ಪೊಲೀಸ್ ಠಾ... ಕರೆದೊಯ್ದಿದ್ದಾಗ ವೈದ್ಯಕೀಯ ಪರೀಕ್ಷೆ ನಡ... ಬಿಟ್ಟಿರುತ್ತಾರೆ." ಆದರೆ ಸ್ವತಃ ಕರ್ನಾಟಕ ಪಶ್ಚಿಮ ವಲ... ಐ.ಜಿ.ಪಿ., ವೈದ್ಯಕೀಯ ಪರೀಕ್ಷೆ ನಡೆಸಿರುವುದಾಗಿ... ಯುವಕರು ಮಾದಕ ಪದಾರ್ಥಗಳನ್ನು ಸೇವಿಸಿರಲಿಲ್ಲವೆ... ಅಧಿಕೃತ ಹೇಳಿಕೆ ನೀಡುತ್ತಾರೆ! ವರದಿಯಲ್ಲಿರುವ ... ಭಾಗವನ್ನು ಸಂಘಪರಿವಾರ ಕಟ್ಟಿರುವ ಕತೆಯ ... ತಾಳೆ ಹಾಕಿ ನೋಡಿ ಮಹಿಳಾ ಆಯೋಗದ ಅಧ... ಎಷ್ಟು ದಕ್ಷತೆಯಿಂದ 'ಗ್ಯಾಂಗ್ಸ್ ಆಫ್ ಹಿಂದೂತ... ಭಾಗ 2'ರ ಚಿತ್ರಕತೆಯನ್ನು ರಚಿಸಿದ್ದಾರೆ... ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.


ದೃಶ್ಯ 3: ಮಹಿಳಾ ಆಯೋಗದ ವರದಿಯ ಬೆ... ದಿನಾಂಕ 13.8.2012ರಂದು, ಸರಕಾರದ ಅ... ಸಂಸ್ಥೆ 'ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ'... ಬೆಂಗಳೂರಿನಲ್ಲಿ 'ಮಂಗಳೂರು ಹೋಮ್ ಸ್ಟೇ ಘ... ಮದ್ಯ ಹಾಗು ಮಾದಕವಸ್ತು ಸೇವನೆಯ ಪಾತ್ರ' ... ವಿಚಾರಸಂಕಿರಣ ಏರ್ಪಡಿಸುತ್ತದೆ. ಈ ಸಂಕಿರ... ಉದ್ದೇಶವೇನು ಎಂಬುದನ್ನು ಅಲ್ಲಿ ಚಿತ್ರೀಕರಣಗೊ... ದೃಶ್ಯದ ತುಣುಕುಗಳೇ ಅನುಮಾನಕ್ಕೆ ಎಡೆ ಇಲ್ಲ... ಸ್ಪಷ್ಟಪಡಿಸಿರುತ್ತವೆ. ಅಲ್ಲಿನ 'ಟೇಕ್'ಗಳ ಕೆ... ಝಲಕ್ಕುಗಳು ನಿಮಗಾಗಿ:


ಶಾಟ್ 1 - ಸಚ್ಚಿದಾನಂದ ಹೆಗ್ಡೆ, 'ಕರ್ನಾ... ಮದ್ಯಪಾನ ಸಂಯಮ ಮಂಡಳಿ' ಅಧ್ಯಕ್ಷರು: "ಅ... ಅಲ್ಲಿ ನಡೆಯುತ್ತಿದ್ದದ್ದು ರೇವ್ ಪಾರ್ಟಿಯೇ ಹೊ... ಹುಟ್ಟುಹಬ್ಬವಲ್ಲ ಎನ್ನುವುದು ನನಗೆ ಬಲ್ಲ ಮೂಲಗಳ... ತಿಳಿದು ಬಂದಿದೆ. ಪೊಲೀಸ್ ಅಧಿಕಾರಿಯೊಬ್ಬರ ಮ... ಅಲ್ಲಿದ್ದಳು ಎಂಬ ಕಾರಣಕ್ಕಾಗಿ ಅದನ್ನು ಹುಟ್ಟುಹಬ್ಬವೆ... ತಿರುಚಿ ಹೇಳುತ್ತಿದ್ದಾರೆ. ಹಲ್ಲೆಗಿಂತ ಗಂಭೀರವಾಗಿ... 'ವಿಸ್ತೃತ ವಾಸ್ತವ'ವನ್ನು ನೋಡುವುದೂ, ಕಾನೂ... ಉಲ್ಲಂಘನೆಯ ಜೊತೆ ಸಾಮಾಜಿಕ ನೈತಿಕತೆ... ಆಯಾಮವನ್ನು ಚರ್ಚಿಸುವುದೂ ಈ ವಿಚಾರ ಸಂಕಿರ... ಉದ್ದೇಶವಾಗಿದೆ."

ಶಾಟ್ 2 - ಪ್ರಮೀಳ ನೇಸರ್ಗಿ, ಶಾಸಕರು ಹಾ... ಕರ್ನಾಟಕ ಮಹಿಳಾ ಆಯೋಗದ ಮಾಜಿ ಅಧ್ಯ... "ಇಡೀ ಘಟನೆಯನ್ನು ಗಮನಿಸಿದರೆ, ಯುವತಿಯರ ಮೇ... ಹಲ್ಲೆ ಮಾಡಿದವರದ್ದೇ ತಪ್ಪು ಎನ್ನಲಿಕ್ಕಾಗದು. ಹೆಂಗಸೊ... ಬಾವಿಯಲ್ಲಿ ಹಾರಲಿಕ್ಕೆ ಯತ್ನಿಸುತ್ತಿದ್ದಾಗ ಯಾರಾದರು... ಬೆತ್ತಲೆ ಇದ್ದಾಳೋ ಇಲ್ಲವೋ ಎಂದು ನೋಡುತ್ತಾರೆ... ಇದು ಅಂತಹುದೇ ಘಟನೆ. ಮಕ್ಕಳು ತಪ್ಪು ಮಾಡಿ... ಪೆಟ್ಟು ಕೊಡುವುದಿಲ್ಲವೇ. ಆವಶ್ಯ ಪ್ರಸಂಗಗಳಲ್ಲಿ ಕಾನೂ... ಮುಖ ನೋಡುತ್ತ ಕೂಡಲಾಗುವುದಿಲ್ಲ."

ಶಾಟ್ 3 - ವಿಜಯಲಕ್ಷ್ಮಿ ಬಾಳೆಕುಂದ್ರಿ, ಹೃ... ತಜ್ಞೆ: (ಹಲ್ಲೆಯನ್ನು ಖಂಡಿಸಿರುವ ಖ್ಯಾತ ಲೇಖಕಿ ವೈದ... ಈ ಬಗೆಯಲ್ಲಿ 'ಹಿಂದೂ ಸಂಸ್ಕೃತಿ'ಯನ್ನು ರಕ್ಷಿಸು... ಎನ್ನುವುದೇ ಪ್ರಶ್ನಾರ್ಹ ಎಂದಿರುವುದಕ್ಕೆ ಪ್ರತಿಕ್ರಿಯಿಸಿ... "ವೈದೇಹಿ 'ಹುಸಿ ಜಾತ್ಯತೀತರು' ಮತ್ತು 'ಹು... ಬುದ್ಧಿಜೀವಿ'ಗಳ ಜೊತೆ ಈ ರೀತಿ ಮಾತನಾಡಿರುವು... ಸರಿಯಲ್ಲ. ಇದೆಲ್ಲ 'ಹಿಂದೂ ಸಂಸ್ಕೃತಿಯನ್ನು ಸರಿಯ... ಪಾಲಿಸದಿರುವುದರ ಪರಿಣಾಮವಲ್ಲವೇ' ಎಂಬುದರ ... ಅವರು ಯೋಚಿಸಿದರೆ ಒಳ್ಳೆಯದು."

ಶಾಟ್ 4 - ಸಿ.ಮಂಜುಳಾ, ಕರ್ನಾಟಕ ಮಹಿ... ಆಯೋಗದ ಅಧ್ಯಕ್ಷೆ: "ಯುವಕ-ಯುವತಿಯರ ಮೇ... ಹಲ್ಲೆ ನಡೆದದ್ದನ್ನು ನಾನು ಖಂಡಿಸಿದ್ದೇನೆ. ಆ... ಕಾನೂನುಬಾಹಿರ ಹಾಗು ಅನೈತಿಕ ಚಟುವಟಿಕೆಗ... ಒಳಗೊಂಡಿರುವ ಘಟನೆಯ 2ನೇ ಭಾಗವನ್ನು ...



ಸಚ್ಚಿದಾನಂದ ಹೆಗಡೆ


ಎಂ.ವಿ.ಕಾಮತ್


ಸಿ.ಟಿ.ರವಿ


ಪ್ರಮೀಳಾ ನೇಸರ್ಗಿ


ಮಂಜುಳಾ


ವಿಜಯಲಕ್ಷ್ಮಿ ಬಾಳೆಕು...

ಲಿಸಬೇಕು. ತಮ್ಮ ಕುದಿತ ಚಟದ ಕಾರಣವಾಗಿ ಕ-ಯುವತಿಯರು ಹಲ್ಲೆಗೆ ಬಲಿಯಾಗಿದ್ದಾರೆ. ಹಲ್ಲೆ ಸ್ಥಳದಲ್ಲಿ ಬೀರು ಬಾಟಲಿಗಳು ದೊರಕಿರುವುದು ಅನೈತಿಕ ಚಟುವಟಿಕೆ ನಡೆಯುತ್ತಿತ್ತು ಎಂಬುದಕ್ಕೆ ರೂಗಿದೆ - ಇದು ಯುವತಿಯರ ಮೇಲೆ ನಡೆದ ಂತ ಗಂಭೀರವಾದ ವಿಷಯವಾಗಿದೆ. ಹಲ್ಲೆಗೆ ತುತ್ತಾದ ಜನೋರ್ವನ ಉದುಹೇ ಆತ ಮಾದಕ ವಸ್ತುವನ್ನು ಸಿದ್ದ ಎನ್ನುವುದಕ್ಕೆ ಪುರಾವೆಯನ್ನೊದಗಿಸುತ್ತದೆ. ೊಳಗಾದವರು ಮಾಧ್ಯಮಗಳ ಪ್ರಚಾರದ ಕಾರಣವಾಗಿ ಸ್ಟ ಅನುಕಂಪ ಗಳಿಸಿದ್ದಾರೆ. ಹಲ್ಲೆಗೊಳಗಾದ ಜನೋರ್ವನ ತಾಯಿ ತನ್ನ ಅನುಮತಿ ಪಡೆದೇ ಮಗ ಆ ಕೂಟದಲ್ಲಿ ಭಾಗಿಯಾಗಿದ್ದ ಎಂದು ್ಯಮಗಳಿಗೆ ತಿಳಿಸಿ ಪ್ರಚಾರ ಗಿಟ್ಟಿಸಿಕೊಳ್ಳಲು ುದ್ದಾರೆ. ಅಂಥ ತಾಯಿಯ ಮಾನವಂತಿಕೆಯ ಹಿನ್ನೆಲೆ ಎನ್ನುವುದು ತನಿಖೆಯಾಗಬೇಕು. ಅಂತೆಯೇ, ಘಟನೆ ಹೋಮ್ ಸ್ಟೇಯ ಮಾಲಕಿಯ ಹಿನ್ನೆಲೆಯನ್ನು ಗೆ ಒಳಪಡಿಸಬೇಕು. ನನ್ನ ವರದಿಯನ್ನು ಖಂಡಿಸಿರುವ ೀಯ ನಾಯಕರು 'ವೋಟ್ ಬ್ಯಾಂಕ್' ರಾಜಕೀಯ ವಂಥವರು. ಬರಿ ಯುವತಿಯರ ಮೇಲೆ ನಡೆದ ು ಕಡೆಗೆ ಮಾತ್ರ ಗಮನವನ್ನು ಕೇಂದ್ರೀಕರಿಸುವ ಧ್ಯಮಗಳು ಯಾವುದೋ ವ್ಯವಹಾರ ರಿಸಿಕೊಂಡಿರುವಂತಿದೆ. ನನ್ನ ವರದಿಯನ್ನು 'ಮಹಿಳಾ ೋಧಿ, ಪಕ್ಷಪಾತಿ' ಎಂದು ದೂರಿರುವ ಳಗಾರ್ತಿಯರದ್ದು ಹುಸಿ ಕಾಳಜಿ. 'ಮಹಿಳಾವಾದ'ಕ್ಕೆ ನಾಡಿನಲ್ಲಿ ಯಾವ ಬೆಂಬಲವೂ ಇಲ್ಲ. 'ನೆಲದ ೃತಿ'ಯ ಬಗ್ಗೆ ಮಾತನಾಡುತ್ತಿರುವ ಇವರೆಲ್ಲ ಧರು'." ('ಡೆಕ್ಕನ್ ಹೆರಾಲ್ಡ್', ಪು.1 ಮತ್ತು 7, ಿಂದೂ', ಪು.4, 14 ಆಗಸ್ಟ್, 2012)

ಈ ದೃಶ್ಯದ ಪ್ರತಿಯೊಬ್ಬರೂ ಒಂದೇ 'ಟೇಕ್'ನಲ್ಲಿ ತ ನಟನೆ ನೀಡಿರುವುದರಿಂದ ಟೀಕುವಿನ ಅಗತ್ಯವಿಲ್ಲ) ದೃಶ್ಯ 4: ದಿನಾಂಕ 16.8.2012ರಂದು (ಮತ್ತೇ ಬಾಬುಡನ್ ಗಿರಿ ವಿವಾದದ ಸ್ಟಾರ್) ಸಿ.ಟಿ.ರವಿ, ಳೇನರಸಿಂಹಪುರ ತಾಲೂಕಿನ ಹಳ್ಳಿ ಮೈಸೂರಿನಲ್ಲಿ ರಿ ಪ್ರಥಮ ದರ್ಜೆ ಕಾಲೇಜನ್ನು, ಉನ್ನತ ಶಿಕ್ಷಣ ಸ್ಥಾನದಿಂದ ಉದ್ಘಾಟಿಸಿ ಹೊಡೆದ ಡೈಲಾಗ್: ೇಂ ಸ್ಟೇಯಲ್ಲಿ) ಹಲ್ಲೆಗೊಳಗಾದವರನ್ನು ವೈದ್ಯಕೀಯ ್ಷೆಗೆ ಒಳಪಡಿಸದೆ ಪೊಲೀಸರು ತಪ್ಪು ಮಾಡಿದ್ದಾರೆ. ೀಸರ ಪ್ರಕಾರ ಕಾರ್ಯವೆಸಗಿಲ್ಲ. ರಾಜ್ಯ ಮಹಿಳಾ ೋಗದ ವರದಿಯೂ ಇದನ್ನೇ ಎತ್ತಿ ಹೇಳಿದೆ." ಹಿಂದೂ', ಆಗಸ್ಟ್ 17, 2012, ಪು.8)


ಚಿತ್ರೀಕರಣ ಹೀಗೆ ಯಶಸ್ವಿಯಾಗಿ ಮುಂದುವರೆ ್ತಿರುವಾಗ, ಪ್ರಸಾರಭಾರತಿಯ ಮಾಜಿ ಅಧ್ಯಕ್ಷರೂ, ಭೂಷಣ ಪ್ರಶಸ್ತಿ ವಿಜೇತರೂ ಮತ್ತು ೂತ್ವವಾದದ ಸಹೃದಯಿ ಮೀಮಾಂಸಕರೂ ಆದ ಯ ಪತ್ರಕರ್ತ ಎಂ.ವಿ.ಕಾಮತ್, ಮಂಗಳೂರಿನ ೊಂದರಲ್ಲಿ ಯುವಜನಾಂಗವನ್ನು ಉದ್ದೇಶಿಸಿ ತನಾಡುತ್ತ, ಚಿತ್ರದ ಬಗ್ಗೆ ತಮ್ಮ ವ್ಯಾಖ್ಯಾನವನ್ನು ಪ್ರಕಟಿಸಿದರು: "ಹಲ್ಲೆ ಮಾಡಿದವರು, ಹಲ್ಲೆಗೊಳಗಾದ ವಕ-ಯುವತಿಯರ ಪಾಲಕರು ಮರೆತಿರುವ ್ಯವನ್ನು ನಿಭಾಯಿಸಿದ್ದಾರೆ. ಇದನ್ನೇ ಮಾಧ್ಯಮಗಳು ಷ್ಟ ಸಂಗತಿ ಮಾಡಿರುವುದು ಸರಿಯಲ್ಲ. ಹಾಗೆಯೇ ಹಿಳಾ ಆಯೋಗದ ಅಧ್ಯಕ್ಷರ ವರದಿಯು ವಂತವಾಗಿದ್ದು ನಾನು ಅದನ್ನು ಮನಃಪೂರ್ವಕ ಲಿಸುತ್ತೇನೆ. ಉದ್ಯೋಗಾಕಾಂಕ್ಷಿಗಳಾಗಿರುವ ಹೆಂಗುಸರ ೋಭಾವ ನನಗೆ ಹಿಡಿಸದು. ವಿದ್ಯಾರ್ಥಿಗಳು ಹೋಂ ಳಲ್ಲಿ ಹೋಗಿ ಹುಟ್ಟುಹಬ್ಬ ಆಚರಿಸುವ ಅವಶ್ಯಕತೆ ಬೇಕಿದ್ದರೆ ತಮ್ಮ ಮನೆಯಲ್ಲೇ ಕುಟುಂಬದ ಜೊತೆ ಿಸಿಕೊಳ್ಳಬೇಕು. ಇಂದು ನಮ್ಮ ಯುವ ಜನಾಂಗಕ್ಕೆ ಮಾರ್ಗದರ್ಶನದ ಕೊರತೆ ಇದೆ. ತುಂಡು ಲಂಗ ುವುದು, ಜೀನ್ಸ್ ಧರಿಸುವುದು, ಪಬ್‌ಗಳಿಗೆ ಗುವುದು ಭಾರತೀಯ ಸಂಸ್ಕೃತಿಗೆ ಅವಮಾನಕರವಾದ ಗಳು. ಬಾಯ್ ಫ್ರೆಂಡ್‌ಗಳನ್ನು ಇಟ್ಟುಕೊಳ್ಳುವುದು, ವು ದೈಹಿಕ ಸಂಬಂಧ ಅನುಭವಿಸುವುದು ಇಂದಿನ ೀಗಿಯರಿಗೆ ಮಾಮೂಲಿಯಾಗಿಬಿಟ್ಟಿದೆ. ಹಿಂದೂ ಣ ವೇದಿಕೆಯ ಮೇಲೆ ಮಾಧ್ಯಮಗಳು ದಾಳಿ ುವುದನ್ನು ಕಂಡಾಗ ನನ್ನ ಕಣ್ಣಲ್ಲಿ ನೀರುಕ್ಕಿ ಬಂತು." ಹಿಂದೂ', ಮಂಗಳೂರು ಆವೃತ್ತಿ, 15.8.2012,)

ಘಟನೆ ನಡೆದ ಎರಡೇ ವಾರಗಳಲ್ಲಿ, ಕಾನೂನು ೆ ಪೂರ್ಣಗೊಳ್ಳುವ ಮುನ್ನವೇ, ಬಿ.ಜೆ.ಪಿ. ಸರಕಾರ ಿಸಿಲುವನ್ನು ಸಂಘಪರಿವಾರದ ನಿರೂಪಣೆಗೆ ಸರಿಯಾಗಿ ಂದಿಸಿಕೊಳ್ಳುತ್ತ ಹೋಗುತ್ತಿದೆ. ಇದು ಫ್ಯಾಸಿಸಂನ ಹಂತ. 'ಗುಜರಾತ್' 'ಮೋದಿಯ ಗುಜರಾತ್' ಮ್ಮ ಈ ಬಗೆಯ ಹಂತಹಂತದ ಫ್ಯಾಸಿಸಂನ ರಯಲ್ಲೇ ಎನ್ನುವುದನ್ನು, 'ಗ್ಯಾಂಗ್ಸ್ ಆಫ್ ಹಿಂದುತ್ವ -2'ನ್ನು ರಜತಪರದೆಯ ಮೇಲೆ ನೋಡುವ ವೀಕ್ಷಕರು ಿದಿತ್ತವನ್ನು

● ಕೆ.ಫಣಿರಾಜ್

ನೀನು ಜೈಲಿಗೋಗಿದ್ದ ಪ್ರೊ. ನಂಜುಂಡಸ್ವಾಮಿ ನೋಡಲಿಲ್ವೆ

ಕೆಲವು ಪತ್ರಕರ್ತರು, ಬುದ್ಧಿಜೀವಿಗಳು, ಅರೆಬರೆ ವಕೀಲರು, ನಾಲಿಗೆ ಕೆಲಸ ಮಾಡಿ ನಿವೃತ್ತಿ ಹೊಂದಿದ ಮಾಸ್ತರುಗಳು ಮತ್ತು ಇತರೆ ಪಿಂಚರಾಪೋಲುಗಳೆಲ್ಲಾ ಸರಣಿ ಸ್ಫೋಟದಂತೆ ಕಿಟ್ಟು ಕಿರುಚಿದಿದು ಹೋಗಿದ್ದಾರಂತಲ್ಲಾ ಇಂಥಾ ಪರಿಸ್ಥಿತಿಯಲ್ಲಿ ಇದ್ದುದರಲ್ಲೇ ಮಾನವಂತರೆಂದು ನಾವು ತಪ್ಪು ತಿಳಿದಿದ್ದ ಹಸಿರುಸೇನೆಯ ಚಂದ್ರಶೇಖರನನ್ನು ಮಾತನಾಡಿಸಿ ಎಲ್ಲಿದ್ದೀರಿ ಎಂದು ಕೇಳಬೇಕೆನಿಸಿತಲ್ಲಾ. ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.



ರಿಂಗ್ ಟೋನ್: "ಉಳುವಾ ಯೋಗಿಯ ನೋಡಲ್ಲೀ, ಜನಾರ್ದನ ರೆಡ್ಡೀ ಬಗಲಲ್ಲೀ...."

"ಹಲೋ ಯಾರು?"

"ನಾನು ಕೋಡಳ್ಳಿ ಯಾಹು."

"ಕೋಡಳ್ಳಿಲಿ ಯಾಹು ಅಂತ ಯಾರೂ ಇಲ್ಲವಲ್ಲಾ."

"ನೀವು ಕೋಡಳ್ಳಿ ಚಂದ್ರಶೇಖರ್ ತಾನೆ?"

"ಹೌದು ನಾನೆ."

"ನಮಸ್ಕಾರ, ಚೆನ್ನಾಗಿದ್ದೀರ ಸಾರ್?"

"ಚೆನ್ನಾಗಿದ್ದೀನಿ. ನೀವು ಹೇಗಿದ್ದೀರಿ?"

"ನಾವ್ಯಂಗೆ ಚೆನ್ನಾಗಿರಕ್ಕಾಗುತ್ತೆ ಸಾರ್. ನೀವೆಲ್ಲಾ ಹಿಂಗಾಗಿರುವಾಗ."

"ನಾವೇನಾಗಿದ್ದಿನಿ?"

"ನೀವು ಚೆನ್ನಾಗಿ ಇದ್ದಿರಿ ಸಾರ್. ಪ್ರೊಫೆಸರ್ ಇದ್ರೆ ಹಿಂಗಿರಕ್ಕಾಯಿತ್ತಾ?"

"ಪ್ರೊಫೆಸರ್ ನೆನಸಬೇಡಿ. ಭಾಳ ನೋವಾಗತ್ತೆ."

"ಹೌದು ಸಾರ್. ಕೆಟ್ಟ ಕೆಲಸ ಮಾಡುವಾಗ ಅಂಥೋರ ನೆನೆಸಿಕೊಡ್ರೆ ನೋವು ಆಗೇ ಆಗುತ್ತೆ."

"ನಾನು ಪ್ರತಿದಿನ ಅವರನ್ನ ನೆನೆಸಿಕೊಳ್ತಿನಿ. ಕೇವಲ ಮೂವತ್ತೈದು ಮಾರ್ಕ್ಸ್ ತಗೊಂಡು ಕೋಡಳ್ಳಿಲಿ ಅಲೆದಾಡತಿದ್ದೆ. ಆಗ ಪ್ರೊಫೆಸರ್ ಸಿಕ್ಕಿದ್ರು. ಇಲ್ದಿಯಿದ್ರೆ ನಾನು ರೈತರ ತರ ಆತ್ಮಹತ್ಯೆ ಮಾಡಿಕೊಂಡು ಸಾಯಬೇಕಾಗಿತ್ತು."

"ಆತ್ಮಹತ್ಯೆ ಮಾಡಿಕೊಬಾರ್ದು ಸಾರ್. ಎಂತಹ ನೀಚ ಕೆಲಸನಾದ್ರೂ ಮಾಡಿ ಬದುಕಬೇಕು. ಆತ್ಮಹತ್ಯೆ ಏನಿದ್ರು ರೈತರಿಗೆ ಬಿಟ್ಬಿದ್ದು."

"ಏನು ಮಾಡ್ತಿರೇಳಿ? ನಾವು ಏನು ಮಾಡಿದ್ರೂ ರೈತರ ಆತ್ಮಹತ್ಯೆ ತಡಿಯಕ್ಕಾಗ್ತಾಯಿಲ್ಲ?"

"ರೈತರತ್ರ ಹೋಗಿದ್ರೆ ತಡಿಬವುದಿತ್ತು ಕಂಡ್ರಿ. ನೀವು ಹಸುರು ಟವಲ್ ಹಾಯ್ಕೊಂಡು, ಬೆಂಗಳೂರಲ್ಲಿ ಇದ್ದುಕೊಂಡು, ಭೂಗತಲೋಕದ ಲೀಡ್ರು ತರ ಮಾತಾಡಿದ್ರೆ ರೈತರು ಉಳಿತಾರ?"

"ನಂಜುಂಡಸ್ವಾಮಿಗಳು ಬೆಂಗಳೂರಲ್ಲೆ ಇದ್ರಲ್ಲವಾ?"

"ಅವರು ಅಂತರ್‍ರಾಷ್ಟ್ರೀಯ ಮಟ್ಟದ ಲೀಡ್ರು. ಪ್ರಪಂಚದಲ್ಲಿದ್ದ ಅವರಂತ ರೈತನಾಯಕರು ಪ್ರೊಫೆಸರ್ ಏನೇಳ್ತರೆ ಅಂತ ಕಾಯ್ತಿದ್ರು. ಆ ಎಲ್ಲಾ ಕಾರಣಕ್ಕೆ ಬೆಂಗಳೂರಲ್ಲಿದ್ರು. ಸುಂದರೇಶ್, ಕಡಿದಾಳು ಶಾಮಣ್ಣ, ತಂಬಾಕೆ, ಬಾಬಾಗೌಡ, ಪುಟ್ಟಣ್ಣಯ್ಯ ಇವುರೆಲ್ಲಾ ಬೆಂಗಳೂರಲ್ಲಿದ್ರಾ? ನಂಜುಂಡಸ್ವಾಮಿಗಳ ತರ ತೂಕವಾಗಿ ಮಾತಾಡಿದ್ರೆ ಸಾಕು ನಾನು ನಂಜುಂಡಸ್ವಾಮಿ ಅಂತ ತಿಳಕೊಂಡುಬಿಡ್ತಿರಿ ನೀವು."

"ನಾನು ಪ್ರೊಫೆಸರ್ ತರ ಅಂತ ಎಂದೂ ತಿಳಕೊಂಡಿಲ್ಲ. ಅವುರೆಲ್ಲಿ? ನಾವೆಲ್ಲಿ? ಅಂತ ಬಿಲ್ ಕ್ಲಿಂಟನ್ ಜರ್ಮನಿಗೆ ಬಂದಿದ್ದಾಗ, ಅವರ ಸಭೆ ನಡೆಯೋದಕ್ಕೆ ಬಿಡದೆ

ಥೂತ್ತೇರಿ

ಅಡ್ಡಿಪಡಿಸಿದ್ರು. ಮಾಜಿ ಪ್ರಧಾನಿ ವಿ.ಪಿ. ಸಿಂಗರನ್ನ ಹಿಡುಕೊಂಡು ನಿನಗೆ ಡಬ್ಲೂಟಿಓ, ಗ್ಯಾಟ್ ಗೊತ್ತ ಅಂತ ನೀರಿಳಿಸಿದ್ರು. ಅಂಥ ಪ್ರೊಫೆಸರ್‌ನ ನಾವು ನಮ್ಮ ಜೀವನದಲ್ಲಿ ಇನ್ನು ನೋಡಲ್ಲ."

"ಪ್ರೊಫೆಸರ್ ನಿಮ್ಮನ್ನ ಭಾಳ ಇಷ್ಟಪಡುತ್ತಿದ್ರಲ್ಲವಾ?"

"ಹೋರಾಟದ ಹುಡುಗರನ್ನ ಕಂಡ್ರೆ ಅವುರಿಗೆ ಬಾಳ ಮೆಚ್ಚುಗೆ. ಯುವಕರಲ್ಲಿ ಹೇಡಿತನ ಇರಬಾರ್ದು. ರೈತರ ಮುಂದೆ ತುಂಬಾ ಸವಾಲುಗಳಿವೆ. ಆದ್ದರಿಂದ ನೀವು ನಿರಂತರವಾಗಿ ಹೋರಾಟ ಮಾಡಬೇಕು ಅಂತ ಹೇಳತಿದ್ರು."

"ಪ್ರೊಫೆಸರು ಈ ಜನಾರ್ದನ ರೆಡ್ಡಿ ತರದೋರನ್ನ ಹೇಗೆ ನೋಡತಿದ್ರೂ?"

"ಹೇಸಿಗೆ ನೋಡಿದಂಗೆ ನೋಡತಿದ್ರು."

"ಅಂತ ಹೇಸಿಗೆ ನೋಡಕ್ಕೆ ನೀವು ಪರಪ್ಪನ ಅಗ್ರಹಾರದ ಜೈಲಿಗೋಗಿದ್ರಂತಲ್ಲಾ ನಿಜವೆ?"

"ನೋಡಿ, ಯಾರೆ ಒಬ್ಬ ಮನುಷ್ಯ ಕಷ್ಟದಲ್ಲಿದ್ದಾಗ ಹೋಗಿ ನೋಡಬೇಕಾಗುತ್ತೆ."

"ರೆಡ್ಡಿ ಯಾವು ಕಷ್ಟದಲ್ಲಿದ್ದಾ? ಮಾಡಿದ್ದುಣ್ಣೊ ಮಾರಾಯಾ ಅನ್ನಂಗಿರಲಿಲ್ವೆ?"

"ನೋಡಿ, ನಾವು ಕೂಡ ರೈತಸಂಘದಲ್ಲಿ ಹೋರಾಟ ಮಾಡಿ ಜೈಲಿಗೋಗಿದ್ದೋರು. ಜೈಲಿನ ಬಗ್ಗೆ ಹೆದರೊ ಅಗತ್ಯವಿಲ್ಲ ಅಂತ ರೆಡ್ಡಿಗೆ ಹೇಳಕ್ಕೋಗಿದ್ದೆ."

"ನಿಜ, ಜೈಲಿಗೋಗೋರಿಗೆ ಧೈರ್ಯ ತುಂಬದು ಸರಿ. ಆದ್ರೆ ನಿರಪರಾಧಿ ಜೈಲಿಗೊಂಟಾಗ ಧೈರ್ಯ ತುಂಬಬೇಕಾಗ್ತದೆ. ಸಾವಿರಾರು ಕೋಟಿ ರೂಪಾಯಿ ಲೂಟಿ ಮಾಡಿ, ದುಗ್ಗಮ್ಮನ ದೇವಸ್ಥಾನ ಉಡಾಯಿಸಿ, ತಿರುಪ್ತಿ ತಿಮ್ಮಪ್ಪನಿಗೆ ಐವತ್ತು ಕೋಟಿ ರೂಪಾಯಿ ಕಿರೀಟ ಕೊಟ್ಟು, ಬಳ್ಳಾರಿನ ಸರ್ವನಾಶ ಮಾಡಿ ಜೈಲಿಗೋದೋನಿಗೆ ನೀವ್ಯಂಥ ಧೈರ್ಯ ಹೇಳಿದ್ರಿ?"

"ನೀವೇನು ಹೆದರಬೇಡಿ, ಹೊರಗಡೆ ಬರ್ತಿರಿ ಅಂತ ಹೇಳಿ ಬಂದೆ."

"ಆ ತರ ಹೇಳುವಾಗ ಪ್ರೊಫೆಸರ್ ಕಣ್ಣಿಗೆ ಕಾಣಲಿಲ್ವೆ? ಅಥವಾ ಅವುರು ನೋಡಲಿಲ್ವೆ"

"ಅವುರೆಂಗೆ ಕಾಣ್ತರೆ? ಅವುರೆಂಗೆ ನೋಡ್ತಾರೆ ಯಾಹು?"

"ಅಲ್ಲಿಗೆ ನೀವು ಕೆಟ್ಟ ಕೆರ ಹಿಡದಿದ್ದಿರಿ ಅನ್ನದು ಸಾಬೀತಾಯ್ತು."

"ಅದ್ಯಂಗೇಳ್ತಿರಿ?"

"ಅಲ್ರೀ, ರೆಡ್ಡಿ ಏನು ನಿಮ್ಮ ಭಾವನೊ? ಅಥವಾ ನಿಮ್ಮ ಅಣ್ಣನೊ? ಅಂಥೋನ್ನ ನೋಡಕ್ಕೆ ಹಸುರು ಟವಲ್ಲ ಮುಂಚ್ಚಿಟ್ಟು ಜೈಲಿಗೋಗಿದ್ರಿ ಅಂದ್ರೆ ನಿಮ್ಮ ಕತೆ ಮುಗಿತಲವೇನ್ರಿ? ಇವತ್ತು ಇಡೀ ಕರ್ನಾಟಕದ ಮುಗ್ಧ ರೈತರಿಗೆ ಆಗಿರೊ ಆಘಾತ ನಿಮ್ಮ ಅರಿವಿಗೆ ಬಂದ್ರೆ ನೀವು ಕೋಡಳ್ಳಿಗೋಗಿ ನೀಲಗಿರಿ ಮರಕ್ಕೆ ನೇಣಾಯ್ಕಬೇಕಾಯ್ತದೆ."

"ಜೈಲಲ್ಲಿದ್ದ ಜನಾರ್ದನ ರೆಡ್ಡಿ ನೋಡಿದ್ಕೆ ರೈತರಿಗೆ ಯಾಕೆ ಆಘಾತ ಆಗಬೇಕು? ನಾನ್ಯಾಕೆ ನೇಣಾಯ್ಕಬೇಕ್ರಿ?"


"ಯಾಕೆ ಅಂದ್ರೆ ರೈತರು ಇನ್ನು ಪ್ರೊಫೆಸರ್ ಗುಂಗಲ್ಲೇ ಅವ್ರೆ. ಅಂಥೋರ ಜೊತೆ ನೀವು ಇದ್ರಿ. ಪ್ರೊಫೆಸರ್ ಇದ್ದಿದ್ರೇ ರೆಡ್ಡಿ ವಿರುದ್ಧ ಹೋರಾಡತಿದ್ರು. ಲೋಕಾಯುಕ್ತರ ಕೆಲಸ ಮಾಡತಿದ್ರು. ಕರ್ನಾಟಕ ಆಳಿದ ಐದಾರು ಜನ ಮುಖ್ಯಮಂತ್ರಿಗಳು ನಂಜುಂಡಸ್ವಾಮಿ ಅಂದ್ರೆ ಹೆದರೊರು. ಯಾಕಂದ್ರೆ ಅವರ ಪ್ರಾಮಾಣಿಕತೆ, ನಿಷ್ಠುರತೆ ಮತ್ತೆ ಪಾಂಡಿತ್ಯ ಹಾಗಿತ್ತು. ಅಂಥವರ ಜೊತೆ ಇದ್ದ ನೀನು ರೆಡ್ಡಿ ನೋಡಕ್ಕೆ ಜೈಲಿಗೋಗಿದ್ದಿಯಲ್ಲಾ. ರೈತಸಂಘದ ಇತಿಹಾಸದಲ್ಲಿ ನಿನ್ನಂಥ ದ್ರೋಹಿನ ನೋಡಿಲ್ಲ. ನಿನಗೆ ಹಣಕಾಸಿಗೆ ಅಷ್ಟು ತೊಂದ್ರೆ ಇದ್ರೆ ರೈತರನ್ನೆ ಕೇಳಿದ್ರೆ ಕೊಡತಿದ್ರು. ದೇಶಕ್ಕೆ ಅನ್ನ ಕೊಡೊ ರೈತನಿಗೆ ನಿನ್ನಂಥ ಲೋಭಿನ ಸಾಕೊ ಶಕ್ತಿಯಿಲ್ಲವೆ. ನಿಮ್ಮ ರೈತಸಂಘದಲ್ಲಿ ನಿಮ್ಮಂಥೋರು ಭಾಳ ಜನ ಅವ್ರೆ. ಆದ್ರೆ ಅವ್ರಾರೂ ನಿನ್ನಷ್ಟು ಧೈರ್ಯ ಮಾಡಲಿಲ್ಲ. ನಿಜಕ್ಕೂ ನೀನು ಎಡ್ಡೂರಪ್ಪನ ಹಿರಿಮಗ ಆಗಿ ಹುಟ್ಟಬೇಕಾಗಿತ್ತು. ಇಷ್ಟಾದ್ರು ನಾವು ರೈತ ಸಂಘದಿಂದ ಕೇಳಿದ ನಿನ್ನ ವೃತ್ತಾಂತ ಸುಳ್ಳಾಗಲಿ. ನೀವು ಜೈಲಿಗೋಗಿ ರೆಡ್ಡಿ ಭೇಟಿಯಾಗಿದ್ದು ಸುಳ್ಳಾಗಲಿ. ಅವನತ್ರ ದುಡ್ಡು ಕೇಳಿದ್ದು ಸುಳ್ಳಾಗಲಿ ಅಂತ ಇವತ್ತಿಗೂ ಅನ್ನಕೊಳ್ತೀವಿ ಆಮೇಲೆ... ಹಲೋ? ಹಲೋ? ಹಲೋ?"

ಥೂತ್ತೇರಿ!!! ●

ತರೀಕೆರೆ ಎ.ಸಿ.ಖುರೇರಾ ಮಾಡಿದ ಬಿಜೆಪಿ ಸಲಾಮು

ತರೀಕೆರೆಯ ಉಪವಿಭಾಗಾಧಿಕಾರಿ ಶಶಿಧರ್ ಖುರೇರಾ ಬಿಜೆಪಿ ಪಕ್ಷಕ್ಕೆ ಅಡ್ಡಡ್ಡ ನಮಸ್ಕಾರ ಹಾಕಿದ ಪ್ರಕರಣ ಆಗಸ್ಟ್ 15ರಂದು ನಡೆಯಿತು..

ಅಂದು ರಾಷ್ಟ್ರಧ್ವಜ ತ್ರಿವರ್ಣಕ್ಕೆ ಗೌರವ ಸಲ್ಲಿಸಬೇಕಾದ ಈ ಅವಿವೇಕಿ ಅಧಿಕಾರಿ ಹಿಂದೂತ್ವವಾದಿಗಳ - ಅದರಲ್ಲೂ ಕೋಮು ವಾದಿ ಚೆಡ್ಡಿಗಳು ಆರಾಧಿಸುವ - ಭಾರಧ್ವಜ ಹಿಡಿದಿರುವ ದೇವಿಯ ಚಿತ್ರಕ್ಕೆ ಗೌರವ ಸಲ್ಲಿಸುವ ಮೂಲಕ ಆರೆಸ್ಸೆಸ್ಸಿಗೆ ಅಡ್ಡಡ್ಡಲಾಗಿ ನಮಸ್ಕಾರ ಹಾಕಿದ್ದಾನೆ.


ಸೂಟ್‌ಧಾರಿ ಖುರೇರಾ

ನಿಯಮಗಳ ಪ್ರಕಾರ ಆಗಸ್ಟ್ 15ರಂದು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ಭಾಗವಾಗಿ ಧ್ವಜಾ ರೋಹಣ ನೆರವೇರಿಸಿರಬೇಕು. ಈ ಹಿಂದೆ ತರೀಕೆರೆಯಲ್ಲಿದ್ದ ಅಧಿಕಾರಿಗಳು ಅದನ್ನೇ ಮಾಡಿಕೊಂಡು ಬಂದಿದ್ದಾರೆ. ಹೀಗೆ ಕಚೇರಿ ಯಲ್ಲಿ ಧ್ವಜಾರೋಹಣ ಕಾರ್ಯಕ್ರಮದ ನಂತರ ತರೀಕೆರೆಯ ಬಯಲುರಂಗಮಂದಿರದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಸಾಮೂಹಿಕ ಕಾರ್ಯಕ್ರಮಗಳಿರುತ್ತವೆ. ಸ್ಥಳೀಯ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಹಾಗು ಸರ್ಕಾರಿ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದು ವಾಡಿಕೆ.


ಆದರೆ ಖುರೇರಾ ಎಂಬ ಆಸಾಮಿ ಉಪವಿಭಾಗಾಧಿಕಾರಿಗಳ ಕಚೇರಿಯ ಆವರಣದಲ್ಲಿ ಒಂದು ವಾಹನಕ್ಕೆ ಕಟ್ಟಿಹಾಕಲಾಗಿದ್ದ ಭಾರತಾಂಬೆಯ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ್ದಾನೆ! ಭಾರತದ ಎಲ್ಲಾ ಜನರನ್ನು ಬಿಂಬಿಸುವ ಭಾರತದ ಧ್ವಜದ ಬದಲಾಗಿ ಒಂದು ಕೋಮಿನ ಪ್ರತೀಕವಾಗಿರುವ ಕೇಸರಿ ಧ್ವಜ ಹಿಡಿದಿದ್ದ ಮಾತೆಯ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗೌರವ ಸಲ್ಲಿಸುವ ಮೂಲಕ ಈತ ಸಂವಿಧಾನಕ್ಕೆ ಬದಲು 'ಬಿಜೆಪಿ ಪಕ್ಷಕ್ಕೆ ತನ್ನ ನಿಷ್ಠೆ ತೋರಿದ್ದಾನೆ.

ತರೀಕೆರೆಯಲ್ಲಿ ಎ.ಸಿ. ಆಗುವ ಮುನ್ನ ಪೊಲೀಸ್ ಅಧಿಕಾರಿಯಾಗಿದ್ದ ಖುರೇರಾ ಆನಂತರ ಕೆಎಎಸ್ ಪರೀಕ್ಷೆ ಪಾಸ್ ಮಾಡಿ ತರೀಕೆರೆ ಶಾಸಕ ಡಿ. ಎಸ್. ಸುರೇಶ್‌ರ ಕೃಪೆಯಿಂದ ಇಲ್ಲಿಗೆ ವಕ್ಕರಿಸಿದ್ದಾನೆ. ಇಂತಹ ಮನುಷ್ಯ ತನ್ನ ಹುದ್ದೆಯ ಜವಾಬ್ದಾರಿಯನ್ನು ಮರೆತು ಶಾಸಕ ಸುರೇಶ್ ಪ್ರತಿನಿಧಿಸುವ ಬಿಜೆಪಿ ಪಕ್ಷಕ್ಕೆ ಗೌರವ ಸಲ್ಲಿಸಿದ್ದು ಆತನ ಮುಲಾಜಿಗೆ ಸಾಕ್ಷಿ ಆಗಿದೆ.

ರಾಷ್ಟ್ರಾಭಿಮಾನಕ್ಕೆ ಧಕ್ಕೆ ತರುವಂತೆ ಹಾಗೂ ರಾಷ್ಟ್ರ ಧ್ವಜಕ್ಕೆ ಅವಮಾನವಾಗುವಂತೆ ಯಾರಾದರೂ ನಡೆದುಕೊಂಡರೆ ಅವರನ್ನು ಶಿಕ್ಷೆಗೊಳಪಡಿಸುವ ಅಧಿಕಾರ ಈ ಎ.ಸಿ. ಸಾಹೇಬನಿಗೆ ಇದೆ. ಆದರೆ ಈತನೇ ಇಂತಹ ಯಡವಟ್ಟು ಮಾಡಿದರೆ ಆತನನ್ನು ಶಿಕ್ಷಿಸುವವರು ಯಾರು?

ಖುರೇರಾ ಸಾರ್ವಜನಿಕವಾಗಿ ಇಂತಹ ತಪ್ಪು ಎಸಗಿದ್ದರೂ ಆತನ ವಿರುದ್ಧ ಇಲ್ಲಿಯತನಕ ಯಾರೂ ಕ್ರಮ ತೆಗೆದುಕೊಂಡಿಲ್ಲ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ವಿಚಾರಣೆ ಮಾಡಿ ತಪ್ಪಿತಸ್ಥ ಅಧಿಕಾರಿಗೆ ಶಿಕ್ಷೆ ನೀಡಬೇಕೆಂಬುದು ಸಾರ್ವಜನಿಕರ ಅಭಿಪ್ರಾಯ.


● ವರದಿಗಾರ



ಅಶೋಕ್

ಪತ್ರಿಕೆ ವರದಿಗೆ ಮೇಯರ್ ಪುರಾವೆ

ಅಶೋಕ್‌ಗೆ ಸಂಕಟ ತಂದಿಟ್ಟ ಮೇಯರ್ ವೆಂಕಟ!



ಮೇಯರ್ ವೆಂಕಟೇಶ್‌ಮೂರ್ತಿ

ಬಿಬಿಎಂಪಿ ಮಹಾಪೌರ ಎನಿಸಿಕೊಂಡವ ತುಂಡು ಭೂಮಿಯೂ ಇಲ್ಲದ ಮಹಾ ನಿರ್ಗತಿಕ!

ಆತನ ಹೆಂಡತಿ ಭೂರಹಿತ ಕೂಲಿ ಹೆಂಗಸು!

ಸಿಲಿಕಾನ್ ಸಿಟಿಯ ಕಾರ್ಪೋರೇಟರ್‌ಗಳಂತು ಹೊಲದಲ್ಲಿ ಉತ್ತು, ಬಿತ್ತೇ ಜೀವನ ಸಾಗಿಸಬೇಕು! ಇನ್ನೂ ಹುಟ್ಟದ ಮಗುವೂ ನೇಗಿಲು ಹಿಡಿದು ಒಕ್ಕಲುತನಕ್ಕಿಳಿದಿದ್ದ! ಬೆಂಗಳೂರು ಭೂಗಳ್ಳರ ಪಿತಾಮಹ ಆರ್. ಅಶೋಕನ ಆಸ್ಥಾನದಲ್ಲಿ ಇಂತಹ ಅತಿರೇಕದ ಅಚ್ಚರಿಗಳು ತೀರಾ ಸಾಮಾನ್ಯ.

ಆತನ ನೇತೃತ್ವದಲ್ಲಿ ದಲಿತರಿಗೆ ಮತ್ತು ಭೂರಹಿತ ಕೃಷಿ ಕಾರ್ಮಿಕರಿಗೆ ಸೇರಬೇಕಾದ ಸುಮಾರು ನಾಲ್ಕೂವರೆ ಸಾವಿರ ಎಕರೆ ಬಗರ್‌ಹುಕುಂ ಭೂಮಿಯನ್ನು ಬಿ.ಜೆ.ಪಿ ಗ್ಯಾಂಗು ಕೊಳ್ಳೆ ಹೊಡೆದಿದ್ದ ಸತ್ಯವನ್ನು 'ಪತ್ರಿಕೆ' ಸಾಲು ಸಾಲು ವರದಿಗಳ ಮೂಲಕ 2007ರಲ್ಲೇ ಪ್ರಕಟಿಸಿತ್ತು. ಅದನ್ನೀಗ ಖುದ್ದು ಮೇಯರ್ ವೆಂಕಟೇಶ್ ಮೂರ್ತಿಯೇ ಒಪ್ಪಿಕೊಂಡು ಬಿ.ಜೆ.ಪಿ ಆಡಳಿತವೆಂದರೆ ಅದು ಹಗಲು ದರೋಡೆಯ 'ನೀಲಿ' ಚಿತ್ರ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಇತ್ತೀಚೆಗೆ ಕಾರ್ಯಾಚರಣೆಗಿಳಿದ ಬೆಂಗಳೂರು ಮೆಟ್ರೊಪಾಲಿಟನ್ ಟಾಸ್ಕ್‌ಫೋರ್ಸ್ (ಬಿ.ಎಂ.ಟಿ.ಎಫ್) ತಂಡ ಬೃಹತ್ ಭೂಹಗರಣದ ಧೂಳು ಕೆಡವಲು ರೆಡಿಯಾಗಿತ್ತು. ರಿಯಲ್ ಎಸ್ಟೇಟ್ ದಂಧೆ ಬೆಂಗಳೂರು ನಗರವನ್ನು ಹೇಗೆಲ್ಲ ಕಬಳಿಸಿ ಕೂತಿದೆ ಎನ್ನುವ ಜಾಡು ಹಿಡಿದು ಹೊರಟ ತಂಡಕ್ಕೆ ಮೊದಲು ತಗುಲಿಕೊಂಡವರೇ ಮೇಯರ್ ವೆಂಕಟೇಶ್‌ಮೂರ್ತಿ. ತಾನು ಕಿಂಚಿತ್ತೂ ಭೂಮಿಯಿಲ್ಲದ ಕೂಲಿ ಕಾರ್ಮಿಕ ಎನ್ನುವ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಉತ್ತರಹಳ್ಳಿ ಹೋಬಳಿಯ ಸೋಮನಹಳ್ಳಿಯಲ್ಲಿನ ಎಂಟು ಎಕರೆ ಬಗರ್‌ಹುಕುಂ ಜಮೀನನ್ನು ತನ್ನ ಮತ್ತು ಹೆಂಡತಿ ಪ್ರಭಾ ಹೆಸರಿಗೆ ಮಂಜೂರು ಮಾಡಿಸಿಕೊಂಡಿದ್ದ. ಏನಿಲ್ಲವೆಂದರೂ ಹದಿನೈದು ಕೋಟಿ ಬೆಲೆಬಾಳುವ ಗೋಮಾಳದ ಭೂಮಿ ಅದು. ಕಮಲದ ಕೃಪೆಯಿಂದಾಗಿ ಸಿಟಿ ಬಸ್‌ನಿಲ್ದಾಣ ನಿರ್ಮಾಣಕ್ಕೆ ಗೊತ್ತಾಗಿದ್ದ ಜಾಗ ಮೇಯರ್ ಸಾಹೇಬರ ಖಾಸಗಿ ಸ್ವತ್ತಾಗಿ ಬದಲಾಗಿತ್ತು.


2004ರಲ್ಲಿ ಇನ್ನೂ ಬಿ.ಜೆ.ಪಿ ಕೌನ್ಸಿಲರ್ ಆಗಿದ್ದಾಗಲೇ ಬಗರ್‌ಹುಕುಂ ಜಮೀನು ಬೇಕೆಂದು ಹಾಕಿಕೊಂಡಿದ್ದ ಮೂರ್ತಿಯ ಅರ್ಜಿಯನ್ನು ಸರ್ಕಾರ ಪುರಸ್ಕರಿಸಿದ್ದು 2012ರಲ್ಲಿ, ಅಂದರೆ ಆತ ಮೇಯರ್ ಗದ್ದುಗೆ ಏರಿದ ಮೇಲೆ. 1992ರಲ್ಲಿ ತಾನೊಬ್ಬ ಭೂರಹಿತ ಕಾರ್ಮಿಕನಾಗಿದ್ದರಿಂದ ಜಮೀನಿಗೆ ಅರ್ಜಿ ಸಲ್ಲಿಸಿದ್ದೆ, ಅದರಲ್ಲಿ ತಪ್ಪೇನಿದೆ? ಎಂಬುದಾಗಿ ಲಜ್ಜೆ ಬಿಟ್ಟು ಸಮರ್ಥಿಸಿಕೊಳ್ಳುವ ವೆಂಕಟೇಶ್ ಮೂರ್ತಿಗೆ ಬಗರ್‌ಹುಕುಂ ಜಮೀನು ಮಂಜೂರು ಮಾಡಲು ಕೇವಲ ಭೂಮಿ ಇಲ್ಲದಿರುವ ಅರ್ಹತೆ ಮಾತ್ರವಲ್ಲದೆ ಫಲಾನುಭವಿಯಾಗುವವನು 1991ಕ್ಕಿಂತಲೂ ಮುಂಚಿನಿಂದ ಸದರಿ ಜಮೀನನ್ನು ಉಳುಮೆ ಮಾಡಿಕೊಂಡಿರಬೇಕು, ವಾರ್ಷಿಕ ಆದಾಯ ಹನ್ನೆರಡು ಸಾವಿರಕ್ಕೂ ಹೆಚ್ಚಿರದ ಬಡವನಾಗಿರಬೇಕು, ಅದೇ ಊರಿನ ನಿವಾಸಿಯಾಗಿರಬೇಕು, ಈಗ ಮಂಜೂರು ಮಾಡುವ ಸರ್ಕಾರಿ ಭೂಮಿಯೂ ಸೇರಿದಂತೆ ಆತನ ಒಟ್ಟು ಹಿಡುವಳಿ 4.38 ಎಕರೆಗಿಂತ ಹೆಚ್ಚಿರಕೂಡದೆಂಬ ನಿಯಮಗಳ ಬಗ್ಗೆ ಕನಿಷ್ಠ ಜ್ಞಾನವೂ ಇದ್ದಂತಿಲ್ಲ, ವಂಚನೆ ಮಾಡುವವರಿಗೆ ನಿಯಮಗಳಾದರೂ ಏಕೆ ಬೇಕು? ಅಷ್ಟಕ್ಕೂ ನಿಯಮಗಳು ಬೇಕಾಗುವುದು ಸಮರ್ಥನೆಗೆ ಮಾತ್ರ ಅಂದುಕೊಂಡ ಪಕ್ಷದ ಪೊಡಕ್ಟಾದ ಮೂರ್ತಿಯಿಂದ ಹೆಚ್ಚಿನದೇನನ್ನು ನಿರೀಕ್ಷಿಸಲು ಸಾಧ್ಯ

ಬಗರ್‌ಹುಕುಂ ಭೂಮಿಯನ್ನು ಒಂದೇ ಕುಟುಂಬದ ಇಬ್ಬರಿಗೆ ಮಂಜೂರು ಮಾಡಲು ಬರುವುದಿಲ್ಲವಾದ್ದರಿಂದ ಈತನ ಹೆಂಡತಿ ಕೆ.ಪ್ರಭಾ ದಾಖಲೆ ಸಲ್ಲಿಸುವಾಗ ಅರ್ಜಿಯಲ್ಲಿ 'ಕೆಂಚಪ್ಪನ ಮಗಳು' ಎಂದಷ್ಟೇ ನಮೂದಿಸಿ ಉದ್ದೇಶಪೂರ್ವಕವಾಗಿ ಮೂರ್ತಿಯ ಹೆಂಡತಿ ಎಂಬುದನ್ನು ಮರೆಮಾಚಿ, ಭೂಮಿ ಲಪಟಾಯಿಸಿದ್ದರು. ಅದೂಅಲ್ಲದೆ ಮೂರ್ತಿಗೆ ಪಿತ್ರಾರ್ಜಿತ ಆಸ್ತಿ ಅಂತ ಹೊಸೂರು ಹತ್ತಿರ 30 ಎಕರೆ ಜಮೀನಿದೆ. ಹಾಗಿದ್ದಾಗ ಈತ ಭೂರಹಿತ ಕೃಷಿಕ ಹೇಗಾಗುತ್ತಾನೆ ಎನ್ನುವುದೇ ಪವಾಡದ ಪ್ರಶ್ನೆ!

ಭೂಮಿ ಪಡೆಯಲು ವೆಂಕಟೇಶ್ ಮೂರ್ತಿ, ಅವನ ಹೆಂಡತಿ ಪ್ರಭಾ ನೀಡಿದ್ದ ದಾಖಲೆಗಳು ಬೋಗಸ್ ಎನ್ನುವುದು ತಿಳಿಯುತ್ತಿದ್ದಂತೆ ನೋಟೀಸ್ ಕಳಿಸಿದ ಬಿ.ಎಂ.ಟಿ.ಎಫ್ ತಕ್ಷಣವೇ ಉತ್ತರ ನೀಡುವಂತೆ ತಾಕೀತು ಮಾಡಿತ್ತು. ಪ್ರಕರಣ ಅದೆಷ್ಟು ಬಿಗಡಾಯಿಸಿಕೊಂಡಿದೆಯೆಂದರೆ ಅರೆಸ್ಟ್ ಆಗುವುದನ್ನು ತಪ್ಪಿಸಿಕೊಳ್ಳಲು ವೆಂಕಟೇಶ್‌ಮೂರ್ತಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕುವಂತಾಗಿದೆ.

ಅಶೋಕ್ ಬಾಬಾ ಮತ್ತು 37 ಭೂಗಳ್ಳರು

ಕೇವಲ ವೆಂಕಟೇಶ್ ಮೂರ್ತಿಯಲ್ಲದೆ ಬಗರ್‌ಹುಕುಂ ಭೂಮಿ ನುಂಗಿದ ಎಲ್ಲರನ್ನೂ ಬಯಲಿಗೆಳೆಯಲು ಬಿ.ಎಂ.ಟಿ.ಎಫ್ ಸಜ್ಜಾಗಿದೆ. ಈಗ ಸಿಕ್ಕಿರುವ ಮಾಹಿತಿಯಂತೆ ಸರ್ಕಾರಿ ಲ್ಯಾಂಡ್ ಗ್ರ್ಯಾಬಿಂಗ್‌ನಲ್ಲಿ ಪಾಲ್ಗೊಂಡಿರಬಹುದಾದ 37 ಕಾರ್ಪೋರೇಟರ್‌ಗಳ ಹಿಟ್‌ಲಿಸ್ಟ್ ತಯಾರಿಸಿಕೊಂಡಿರುವ ಬಿ.ಎಂ.ಟಿ.ಎಫ್ ಒಬ್ಬೊಬ್ಬರನ್ನೇ ತಡವಿಕೊಳ್ಳುವ ಯೋಜನೆಯಲ್ಲಿದೆ. ಹಾಲಿ ಉಪ ಮೇಯರ್ ಎಲ್.ಶ್ರೀನಿವಾಸ್, ಹೊಸಕೆರೆಹಳ್ಳಿ ಕಾರ್ಪೋರೇಟರ್ ಎಚ್.ನಾರಾಯಣರಂತಹ ಘಟಾನುಘಟಿಗಳ ಹೆಸರೂ ಇರುವುದು ಬಿಬಿಎಂಪಿ ಅಂಗಳದಲ್ಲಿ ಆತಂಕಕ್ಕೆ ಕಾರಣವಾಗಿದೆ. ಈಗಾಗಲೇ ಫೀಲ್ಡಿಗಿಳಿದಿರುವ ಭೂಬಕಾಸುರರ ಟೀಮು ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪನ ಮತ್ತು ಆರ್.ಅಶೋಕ್ ಮೂಲಕ ಜಗದೀಶ್ ಶೆಟ್ಟರಿಂದಲೇ ಬಿ.ಎಂ.ಟಿ.ಎಫ್ ಚೀಫ್ ಆರ್.ಪಿ. ಶರ್ಮಾರನ್ನು ಡೀಲ್ ಮಾಡಲು ನೋಡುತ್ತಿದೆ. ಅದಕ್ಕೂ ಬಗ್ಗದಿದ್ದರೆ ಎಲ್ಲಾ ಕಾರ್ಪೋರೇಟರ್‌ಗಳು ಕೂಡಿ ಬಿ.ಎಂ.ಟಿ.ಎಫ್ ವಿರುದ್ಧವೇ ಮುಷ್ಕರ ಹೂಡಲು ಯೋಚಿಸುತ್ತಿದ್ದರೆನ್ನುವ ಮಾತೂ ಕೇಳಿಬರುತ್ತಿದೆ(!?).



ಆರ್.ಪಿ. ಶರ್ಮಾ, ಎಲ್. ಶ್ರೀನಿವಾಸ್, ಬಸವರಾಜ್

ಈ ನಡುವೆ ಸತ್ಯ ಬಯಲಾಗುತ್ತಿದ್ದಂತೆಯೇ ಬೆಂಗಳೂರು ದಕ್ಷಿಣ ಉಪ ವಿಭಾಗೀಯ ಮ್ಯಾಜಿಸ್ಟ್ರೇಟರು ಆರ್‌ಯುಸಿ/ಸಿಆರ್/4/12/13 ಪತ್ರ ಸಂಖ್ಯೆಯ ಆದೇಶದಲ್ಲಿ ಮಂಜೂರಾತಿಯನ್ನು ರದ್ದುಗೊಳಿಸಿದ್ದರು. ಆದರೆ ತಾನೇ ಅದನ್ನು ವಾಪಾಸ್ಸು ಮಾಡಿರುವುದಾಗಿ ವೆಂಕಟೇಶ್ ಮೂರ್ತಿ ತುತ್ತೂರಿ ಊದುತ್ತಿದ್ದಾನೆ. ಅಲ್ಲದೆ ವಿಪರೀತ ಗಾಬರಿಗೆ ಬಿದ್ದಂತಿರುವ ಮೇಯರ್ ಸಾಹೇಬರು ತಾನು ಬಚಾವಾಗುವ ತವಕದಲ್ಲಿ ಮಂತ್ರಿ ಅಶೋಕ್ ಮತ್ತು ಬಿಜೆಪಿ ಭೂಗಳ್ಳರ ವೃತ್ತಾಂತದ ಸುಳಿವು ನೀಡಿರುವುದು ಸೋಜಿಗದ ವಿಷಯ. ಮೊನ್ನೆ ಮಾಧ್ಯಮದ ಮುಂದೆ ವೆಂಕಟೇಶ್‌ಮೂರ್ತಿ ಆಡಿದ ಮಾತುಗಳನ್ನು ಆತನದೇ ಧಾಟಿಯಲ್ಲಿ ಕೇಳಿದರೆ ಚೆನ್ನ.

'ಬಗರ್‌ಹುಕುಂ ಭೂಮಿ ಪಡೆದವನು ನಾನೊಬ್ಬನೇ ಅಲ್ಲ, ಎಂ.ಎಲ್.ಎಗಳೂ ಸೇರಿದಂತೆ ಪ್ರಭಾವಿ ವ್ಯಕ್ತಿಗಳೂ ಸುಳ್ಳು ದಾಖಲೆ ನೀಡಿ ಬಗರ್‌ಹುಕುಂ ಜಮೀನು ಪಡೆದಿದ್ದಾರೆ. ಅವರೆಲ್ಲರ ಹೆಸರನ್ನೂ ಹೇಳೋದಿಕ್ಕೆ ನಾನು ಇಷ್ಟ ಪಡೋಲ್ಲ. ತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್, ಉಪವಿಭಾ... ಮ್ಯಾಜಿಸ್ಟ್ರೇಟರಿಂದ ಡಿ.ಸಿ.ವರೆಗೆ ನನಗೆ ಭೂಮಿ ಮಂಜೂರು ಮಾಡಿ... ಎಲ್ಲರದೂ ತಪ್ಪಿದೆ. ಹಾಗಿರುವಾಗ ನನ್ನೊಬ್ಬನನ್ನೇ ತಪ್ಪಿತಸ್ಥನನ್ನಾಗಿಸೋ... ಎಷ್ಟು ಸರಿ. ಅದೂ ಅಲ್ಲದೆ ನನಗೆ ಬಗರ್‌ಹುಕುಂ ಭೂಮಿ ಕೊಡಿ ... 2004ರಲ್ಲಿ ಶಿಫಾರಸ್ಸು ಮಾಡಿದ್ದೇ ಈಗಿನ ಉಪಮುಖ್ಯಮಂತ್ರಿ ಆರ್. ಅಶೋ...

ಮೂರ್ತಿಯ ಮಾತನ್ನು ಅನುಮಾನಿಸುವುದರಲ್ಲಿ ಅರ್ಥವೇ ಇಲ್ಲ. ಏಕೆ... 2004ರಲ್ಲಿ ದಕ್ಷಿಣ ಬೆಂಗಳೂರಿನ ಬಗರ್‌ಹುಕುಂ ಭೂಮಂಜೂರಾತಿ ಕಮಿ... ಅಧ್ಯಕ್ಷನ ಗಾದಿಯಲ್ಲಿದ್ದದ್ದು ಇದೇ ಅಶೋಕ್. ತನ್ನ ಅಧಿಕಾರ ದುರುಪಯೋ... ಪಡಿಸಿಕೊಂಡಿದ್ದ ಅಶೋಕ್ 1969ರ ಭೂಮಂಜೂರಾತಿ ಕಾಯ್ದೆಯಡಿ ಬಡ... ನಿರ್ಗತಿಕರು, ದಲಿತರಿಗೆ ವಿತರಣೆಯಾಗಬೇಕಿದ್ದ ಭೂಮಿಯನ್ನು ತನ್ನ ಬಿ... ಚೇಲಾಗಳಿಗೆ ಭಕ್ಷೀಸಿನಂತೆ ಹಂಚಿದ್ದು ಹಳೇ ವಿಷಯ.

ಅಶೋಕ್‌ನಿಂದಾಗಿ ಭೂಮಿ ಪಡೆದ ಯಾರೊಬ್ಬರಿ... ಫಲಾನುಭವಿಯವಾಗುವ ಅರ್ಹತೆಯೇ ಇರಲಿಲ್ಲ. ಆದರೆ ಸುಳ್ಳು ದಾಖಲೆ... ಸೃಷ್ಟಿಸಿ ಸರ್ಕಾರಿ ಜಾಗವನ್ನು ವ್ಯವಸ್ಥಿತವಾಗಿ ನುಂಗಲಾಗಿತ್ತು. ಅಶೋಕ್ ... ಪಾತ್ರರಾದವರಲ್ಲಿ ಬಿ.ಜೆ.ಪಿ ಬೆಂಬಲಿತ ಧನಿಕ ಕಾರ್ಪೋರೇಟರ್... ಆರೆಸ್ಸೆಸ್ ಚಡ್ಡಿಗಳು, ರೌಡಿಗಳು, ರಿಯಲ್‌ಎಸ್ಟೇಟ್ ಬಿಲ್ಡರ್... ಭ್ರಷ್ಟ ಅಧಿಕಾರಿಗಳು, ಖಾಸಾ ಸಂಬಂಧಿಗಳು, ಅಷ್ಟೇ ಏಕೆ ... ಸ್ವಾಮಿಗಳೂ ಶಾಮೀಲಾಗಿದ್ದಾರೆ. ಅವರ ಲಿಸ್ಟು ತುಂಬ... ದೊಡ್ಡದಿದೆ.

ಪದ್ಮನಾಭನಗರದ ಕೌನ್ಸಿಲರ್ ಎಲ್.ಶ್ರೀನಿವಾಸ್‌ಗೆ ಎರ... ಅಶೋಕ್‌ನ ಲ್ಯಾಂಡ್ ಗ್ರ್ಯಾಬಿಂಗ್ ಪಾರ್ಟನರ್ ಚಂಗಮರಾ... 4 ಎಕರೆ, ಜೆ.ಪಿ ನಗರದ ಬಿಜೆಪಿ ಕೌನ್ಸಿಲರ್ ಎಸ್.ಕೆ.ನಟರಾ... ಮಾವ ಕೆ.ವೈ ನಾರಾಯಣರೆಡ್ಡಿ ಹೆಸರಲ್ಲಿ 1.38 ಎಕರೆ ... ಅತ್ತೆ ಶಾರದಮ್ಮನ ಹೆಸರಲ್ಲಿ 4.38 ಎಕರೆ, ಗಣೇಶ್ ಮ... ವಾರ್ಡಿನ ಬಸವರಾಜು ಸಂಬಂಧಿಕರಿಗೆ 6 ಎಕರೆ, ಪಟ್ಟಣಗೆ... ಬಾಲಕೃಷ್ಣಗೆ 8 ಎಕರೆ, ಬನಶಂಕರಿಯ ಬಿ.ಜೆ.ಪಿ ಲೀ... ನಾಗರಸಯ್ಯನಿಗೆ 2 ಎಕರೆ, ಚುಂಚಘಟ್ಟದ ಬಿ.ಜೆ.ಪಿ ಮುಖ... ಜೈರಾಮನಿಗೆ 3 ಎಕರೆ, ಕೇಸರಿ ಪೋಷಿತ ಮೈಕೋ ಉದ... ಮೂಡಲಗಿರಿಗೌಡನಿಗೆ 3.36 ಎಕರೆ-ಹೀಗೆ ಬೆಳೆಯುತ್ತಲೇ ಸಾಗು... ಅಶೋಕನ 'ಋಣ' ತೀರಿಸುವ ಈ ಸ್ಕೀಮಿನಲ್ಲಿ ಬಿ.ಜೆ.ಪಿಗಳು ನಿರ್ಗತಿ... ದಕ್ಕಬೇಕಾದ ಭೂಮಿಯನ್ನು ಸುಳ್ಳು ದಾಖಲೆ ಸೃಷ್ಟಿಸಿ ಲೂಟಿ ಹೊಡೆದಿ... ಕೆಲವರಂತು ದಾಖಲೆಗಳನ್ನು ನೀಡುವ ಗೋಜಿಗೂ ಹೋಗಿರಲಿಲ್ಲ. ಆ... ಶ್ರೀನಿವಾಸ ನಗರದ ಕೌನ್ಸಿಲರ್ ಆಗಿದ್ದ ಡಿ.ವೆಂಕಟೇಶ್ ಮೂರ್ತಿಯೂ ... ಇದೇ ಛಾನ್ಸು ಎಂದುಕೊಂಡು ಹೆಂಡತಿ ಮತ್ತು ತನ್ನ ಹೆಸರಲ್ಲಿ ಬೋ... ದಾಖಲೆ ಸೃಷ್ಟಿಸಿ ಬಡವರ ಬಿಟ್ಟ ಭೂಮಿಗೆ ಬಾಯ್ತೆರೆದು ಕೂತಿದ್ದ.

ಅಶೋಕ್ ಭೂದಾನ ಕೇವಲ ಕೌನ್ಸಿಲರ್‌ಗಳಿಗೆ ಮಾತ್ರ ಸೀಮಿತವಾ... ಸಂಘಪರಿವಾರದ ಮರ್ಜಿ ಗಿಟ್ಟಿಸಲು ಕೆಲ ಚಡ್ಡಿಗಳನ್ನೂ ಕರೆತಂದು ಫಲಾನು... ಮಾಡಲಾಗಿದೆ. ಅಂತವರಲ್ಲಿ ಜರಗನಹಳ್ಳಿಯ ಡಾ.ಪ್ರಸಾದ್ ಕೂಡಾ ... ಈತ ಹುಟ್ಟಾ ಆರೆಸ್ಸೆಸ್ಸಿಗ ಅಲ್ಲದೇ ಆಗರ್ಭ ಶ್ರೀಮಂತ. ನಾಲ್ಕು ತಲೆಮ... ಹಿಂದಕ್ಕೆ ಹೋದರೂ ಉತ್ತು, ಬಿತ್ತಿದ ಉದಾಹರಣೆಯೇ ಇಲ್ಲ. ಅಂತವ... ಸಹಾ ಮಗನ ಹೆಸರಿಗೆ ಮೂರೆಕರೆ, ಹೆಂಡತಿ ಖಾತೆಗೆ ಎರಡೆಕರೆ, ವ... ಹೆಸರಿನಲ್ಲಿ ಮತ್ತೆ ಮೂರೆಕರೆ-ಹೀಗೆ ಒಟ್ಟು ಎಂಟು ಎಕರೆಯ... ಬಿ.ಎಂ.ಕಾವಲಿನಲ್ಲಿ ಸ್ವಾಹಾ ಮಾಡಿದ್ದಾನೆ. ಒನ್ಸ್ ಎಗೇನ್ ... ಅಶೋಕ್‌ನ ಕೃಪಾಕಟಾಕ್ಷವೇ ಕೆಲಸ ಮಾಡಿದೆ. ವಿಚಿತ್ರ ಎ... ಆದಿಚುಂಚನಗಿರಿಯ ಶೇಖರ್ ಸ್ವಾಮಿಯೂ ಸಹ ಕೆಂಗೇರಿ... ಗಂಗಸಂದ್ರದ ನಾಲ್ಕೆಕರೆ ಭೂಮಿ ಪಡೆದಿರೋದು. ಅದನ್ನೂ ... ಅಶೋಕ್ ಸಾಹೇಬರೇ ಮಂಜೂರು ಮಾಡಿದ್ದಾರೆ.




ಹೀಗೆ ಅಶೋಕ್ ಭೂಮಂಜೂರಾತಿಯ ಅಧ್ಯಕ್ಷನಾಗಿದ್ದ 19... ರಿಂದ 2006ರವರೆಗೆ ಬೋಗಸ್ ದಾಖಲೆಗಳು ಬಡವರ ಭೂ... ನುಂಗಿರೋದಕ್ಕೆ ಲೆಕ್ಕವೇ ಇಲ್ಲ. ಈ ಅವಧಿಯ ಎಲ್ಲಾ ಹಗರಣ... ಹೊರಬೀಳಲು ಮೇಯರ್ ವೆಂಕಟೇಶ್ ಪ್ರಕರಣ ನಾಂದಿ ಹಾ... ಲಕ್ಷಣ ಗೋಚರಿಸುತ್ತಿದೆ. ಅಷ್ಟು ತನಿಖೆಯಾದರೆ ಮೊ... ಆರೋಪಿಯಾಗಿ ತಗುಲಿಕೊಳ್ಳುವುದೇ ಉಪ ಮುಖ್ಯಮಂತ್ರಿ ... ಅಶೋಕ್. ಆದಕ್ಕೊಂದೇ ಬಿ.ಎಂ.ಟಿ.ಎಫ್‌ನ ದಿಕ್ಕು ತಪ್ಪಿಸುವ ಪ್ರಯತ್ನ... ಈಗಾಗಲೇ ಚಾಲನೆ ಪಡೆದಿವೆ.

● ಗಿರೀಶ್ ತಾಳಿಕ...

ಮೈಸೂರು: ಚಾಮುಂಡಿ ತಪ್ಪಲು ಭೂಗಳ್ಳರೇ ಒಕ್ಕಲು

ಕಳೆದ ವಾರ ಬೆಂಗಳೂರಿನಲ್ಲಿದ್ದ ಆರ್‌ಎಸ್‌ಎಸ್ ...ಯಾಳುಗಳು ಮೂಲೆಯಲ್ಲಿ ಬಿದ್ದಿದ್ದ ತಂತಮ್ಮ ಖಾಕಿ ...ಗಳನ್ನು ಏರಿಸಿಕೊಂಡು ರೈಲ್ವೆ ನಿಲ್ದಾಣಕ್ಕೆ ಧಾವಿಸಿ, ...ನ್ಯ ಭಾರತದ ವಲಸಿಗರ ರಕ್ಷಣೆ ...ರುವ ಪೋಸು ಕೊಟ್ಟು ಭಾಷಣ ...ಡುತ್ತಿದ್ದರೆ, ಸರಿಯಾಗಿ ಅದೇ ...ರ್ಭದಲ್ಲಿ ಮೈಸೂರಿನಲ್ಲಿದ್ದ ಇದೇ ... ಕೂಟ ಭೂಹಗರಣದಲ್ಲಿ ಕುತ್ತಿಗೆ ... ಮುಳುಗಿ ಅದರಿಂದ ಬಚಾ...ಲು ಹೆಣಗಾಡುತ್ತಿದ್ದರು!



ಈ ಹಗರಣದ ವಿವರಗಳನ್ನು ...ಡಿ.

ಈ 2000 ಎಕರೆ ಭೂಮಿ ...ೂರು ನಗರಕ್ಕೆ ಅಂಟಿಕೊಂಡಿದೆ. ಐತಿಹಾಸಿಕ ಕಟ್ಟಡ ...ದ ಮಹಲ್ ಪ್ಯಾಲೇಸಿನ ಹಿಂಭಾಗದಿಂದ ಪ್ರಾರಂಭವಾಗಿ ...ಮುಂಡಿ ಬೆಟ್ಟದ ತಪ್ಪಲಿನವರೆಗೂ ವಿಶಾಲವಾಗಿ ...ಕೊಂಡಿದೆ. ಈ ಪ್ರದೇಶದಲ್ಲಿ ಒಂದು ಸೈಟಿನ ಬೆಲೆ ...ವೆಂದರೂ 20 ಲಕ್ಷಗಳಿಗೆ ಕಮ್ಮಿಯಿಲ್ಲ. ಒಂದು ...ಯಲ್ಲಿ ಕಮ್ಮಿಯೆಂದರೂ 20 ಸೈಟುಗಳಾಗಿ ...ಡಿಸಬಹುದು. ಹೀಗಿರುವಾಗ ಮೈಸೂರಿನ ...ಮಾಫಿಯಾದ ಕಾಕದೃಷ್ಟಿ ಈ ಭೂಮಿಯ ಮೇಲೆ ...ುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಮೇಲಾಗಿ ...ದಾಸ್ ಎಂಬ ರಿಯಲ್ ಎಸ್ಟೇಟ್ ಏಜೆಂಟೇ ಜಿಲ್ಲಾ ...ವಾರಿ ಸಚಿವನಾದ ಮೇಲೆ ಇನ್ನು ಕೇಳಬೇಕೆ? ಈ ... ಕಾನೂನು ಇವರಿಗೆ ಕಸಕ್ಕೆ ಸಮವಾಗಿಬಿಟ್ಟಿದೆ.

...ಅಂದಹಾಗೆ ಈ ಪ್ರಕರಣ ಶುರುವಾಗುವುದು ...ಸೂರು ಮಹಾರಾಜರ ಮನೆತನದಿಂದ. ಭಾರತ ...ತ್ರವಾದಾಗ ಬ್ರಿಟಿಷರ ಕೃಪಾಕಟಾಕ್ಷದಲ್ಲಿ ಆಳ್ವಿಕೆ ನಡೆಸುತ್ತಿದ್ದ ...ಸೂರು ರಾಜರಿಗೂ ನಂತರದಲ್ಲಿ ಅಸ್ತಿತ್ವಕ್ಕೆ ಬಂದ ...ತ್ರ ಭಾರತ ಸರ್ಕಾರಕ್ಕೂ ನಡುವೆ 23-01-...ರಂದು ಒಂದು ಒಪ್ಪಂದವಾಯಿತು. ಆ ಪ್ರಕಾರ ...ರಾಜರು ನೂರಾರು ಚರ-ಚಿರಾಸ್ತಿಗಳನ್ನು ತಮ್ಮ ...ಗಿ ಸ್ವತ್ತುಗಳೆಂಬುದಾಗಿ ಘೋಷಿಸಿಕೊಂಡಿದ್ದಾರೆ. ...ಗಳಲ್ಲಿ ಮೈಸೂರಿನ ಹೊರಭಾಗದಲ್ಲಿರುವ ಕುರುಬರಹಳ್ಳಿ ... ನಂಬರ್ 4ರ 1563 ಎಕರೆ, ಚೌಡಹಳ್ಳಿ ಸ.ನಂ. ...ಲ್ಲಿ 259 ಎಕರೆ ಹಾಗೂ ಆಲನಹಳ್ಳಿ ಗ್ರಾಮದ ... 41ರಲ್ಲಿ 173 ಎಕರೆ ಭೂಮಿ ಒಟ್ಟಾಗಿ ಸುಮಾರು ...0 ಎಕರೆ ವಿಸ್ತೀರ್ಣದ ಭೂಮಿಯೂ ಸೇರಿಕೊಂಡಿತ್ತು. ...ಹಾಗೆ ಈ ಭೂಮಿಯ ಇಂದಿನ ಮಾರುಕಟ್ಟೆ ಮೌಲ್ಯ ...ಾರು 5000 ಕೋಟಿಗೂ ಹೆಚ್ಚು.

...ಇದು ಎಲ್ಲಾ ಭೂಮಿಗಳಂತೆ ಮಾಮೂಲಿ ಕಂದಾಯ ...ಮಿಗಳಾಗಿದ್ದರೆ ಯಾವ ಸಮಸ್ಯೆಯೂ ಇರುತ್ತಿರಲಿಲ್ಲ. ...ಘನ ರಾಜವಂಶಸ್ಥರು ಮಾಮೂಲಿಯಂತೆ ಅವುಗಳನ್ನು ... ಪರಭಾರೆ ಮಾಡಿ ಝಣಝಣ ಕಾಂಚಾಣ ...ಸಿಕೊಂಡು ತಣ್ಣಗಿದ್ದುಬಿಡುತ್ತಿದ್ದರು. ಆದರೆ ಇದು ...ದಾಯ ಭೂಮಿಯಾಗಿರದೆ, 1921 ರಿಂದಲೂ ...ಲೆಯಿರುವ ಆಕಾರಬಂದ್ ಪ್ರಕಾರ 'ಬಿ' ಖರಾಬು ...ಎಂದು ನಮೂದಾಗಿದೆ. ಆದಕಾರಣ ಈ ಭೂಮಿಯ ...ಾರೆ, ಖಾತೆ ವರ್ಗಾವಣೆ ಮುಂತಾದವುಗಳನ್ನು ...ಲು ಕಾಯಿದೆಗಳ ಪ್ರಕಾರ ಯಾರಿಗೂ ಅಧಿಕಾರವಿರು...ಲ್ಲ. ಹಾಗಾಗಿ ಇಂಥಾ ಭೂಮಿ ಅನೂಚಾನವಾಗಿ ...ಜನಿಕ ಸ್ವತ್ತಾಗಿದ್ದು, ಸರ್ಕಾರದ ಅಧೀನದಲ್ಲಿರುತ್ತದೆ. ...ನ್ನೆಲೆಯಲ್ಲಿ ಕೆಲವು ದಶಕಗಳ ಕಾಲ ಈ ಭೂಮಿಯ ...ಗೆ ಸ್ವತಃ ರಾಜವಂಶಸ್ಥರೇ ಹೋಗಲಿಲ್ಲ. ಆದರ ಜೊತೆಗೆ ...ದ ಪಕ್ಕದಲ್ಲಿದ್ದ ಭೂಮಿಗೆ ಅಂಥಾ ಮಾರುಕಟ್ಟೆ ...ವೂ ಇರಲಿಲ್ಲ; ರಿಯಲ್ ಎಸ್ಟೇಟ್ ಎಂಬುದರ ...ಸೆಯೇ ಇಲ್ಲದ ಕಾಲವದು.

...ಮೈಸೂರು ನಗರ ಬೆಳೆಯುತ್ತಾ ಹೋದಂತೆ ಈ ... ಖರಾಬು ಭೂಮಿಯ ಗ್ರಹಚಾರ ಕೆಡಲು ...ಭವಾಯಿತು. 1976 ರ ಸುಮಾರಿನಲ್ಲಿ ಮಹಾರಾಜರ ...ಸ್ಥರು ರಾಮು ಎಂಬ ಆಸಾಮಿಗೆ ಈ ಭೂಮಿಗೆ ...ಬಂಧಿಸಿ ಜನರಲ್ ಪವರ್ ಆಫ್ ಅಟಾರ್ನಿ ಕೊಟ್ಟರು. ... ಮೇಲ್ಕಂಡ ಭೂಮಿಯನ್ನು ಹತ್ತಾರು ಮಂದಿಗೆ ...ಾಟ ಮಾಡಿದ. ಆದರೆ ಕ್ರಯಪತ್ರಗಳನ್ನು ರಿಜಿಸ್ಟರ್ ...ಡಿಸಲು ಕಾನೂನಿನಡಿ ಅವಕಾಶವಿಲ್ಲದ ಕಾರಣ ಈ ... ವಹಿವಾಟುಗಳೂ ಕೇವಲ ಛಾಪಾಕಾಗದದ ಮೇಲೆ ...ಮಕೊಟ್ಟ ಪತ್ರಗಳ ಮೂಲಕ ನಡೆದವು. ಹೀಗೆ ...ನೂನುಬಾಹಿರವಾಗಿ ಕ್ರಯಕ್ಕೆ ಪಡೆದ ಮಂದಿ ಆಯಾ ...ಸೈಟುಗಳಿಗೆ ಬೇಲಿ ಸುತ್ತಿ, ತಮ್ಮ ಇಚ್ಛಾನುಸಾರ ಅಭಿವೃದ್ಧಿ ...ಗಳನ್ನು ಕೈಗೊಂಡರು.

...ಆ ನಂತರದ ದಿನಗಳಲ್ಲಿ ಈ ಹೊಸ ಮಾಲಿಕರು ... ಸ್ವಾಧೀನದಲ್ಲಿರುವ ಭೂಮಿಗಳ ದಾಖಲಾತಿಗಳನ್ನು ... ಹೆಸರಿಗೆ ವರ್ಗಾವಣೆ ಮಾಡಿಕೊಡಬೇಕೆಂದು ...ವಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸುತ್ತಲೇ ಬಂದರು. ... ರೀತಿಯ ಲಾಬಿಗಳನ್ನೂ ಮಾಡಿದರು. ಆದರೂ ...ಭೂಮಿಯ ದಾಖಲಾತಿಗಳಲ್ಲಿ ಯಾವ ಬದಲಾವಣೆ ... ಆಗಲಿಲ್ಲ, ಕಾರಣ 'ಬಿ' ಖರಾಬು ಎಂದು ಒಮ್ಮೆ ನಮೂದಾಗಿರುವ ಜಮೀನನ್ನು ಪರಭಾರೆ ಮಾಡುವುದರ ವಿರುದ್ಧ ಇರುವ ಬಲಿಷ್ಠವಾದ ಕಾನೂನುಗಳು ಹಾಗೂ ಚಾಮುಂಡಿ ಬೆಟ್ಟದ ತಪ್ಪಲಿನ ಪರಿಸರವನ್ನು ಕಾಪಾಡಬೇಕೆಂದು ಕೆಲವು ಸಾಮಾಜಿಕ ಕಾರ್ಯಕರ್ತರು ಸರ್ಕಾರದ ಮೇಲೆ ಸತತವಾಗಿ ಹಾಕಿದ ಒತ್ತಡಗಳು.

ಪ್ರಾಮಾಣಿಕ ಡಿಸಿಗಳು

ಕೆಲ ವರ್ಷಗಳ ಹಿಂದೆ ಪಿ. ಮಣಿವಣ್ಣನ್ ಎಂಬ ಪ್ರಾಮಾಣಿಕ ಅಧಿಕಾರಿ ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದರೆಂಬುದು ನಮಗೆಲ್ಲಾ ನೆನಪಿದೆ. ಆ ಸಂದರ್ಭದಲ್ಲಿ ಸದರಿ ಭೂಮಿಗೆ ಕೆಲವರು ಅನಧಿಕೃತವಾಗಿ ಬೇಲಿ ಸುತ್ತುತ್ತಿದ್ದುದ್ದನ್ನು ಖುದ್ದಾಗಿ ಪರಿಶೀಲಿಸಿ, ಆ ಬೇಲಿಗಳನ್ನು ತೆರವುಗೊಳಿಸಿ ಲ್ಯಾಂಡ್ ಮಾಫಿಯಾದ ಕೆಂಗಣ್ಣಿಗೂ ಗುರಿಯಾಗಿದ್ದರು. ನಂತರ ಮೈಸೂರಿಗೆ ಹರ್ಷ ಗುಪ್ತಾ ಎಂಬ ಮತ್ತೊಬ್ಬ ಪ್ರಾಮಾಣಿಕ ಜಿಲ್ಲಾಧಿಕಾರಿ ಬಂದರು. ಅವರ ಕಾಲದಲ್ಲಿ ಸದರಿ ಭೂಮಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿದಾಗ ಕೆಲವು ದುಷ್ಟಶಕ್ತಿಗಳೊಂದಿಗೆ ಸರ್ಕಾರಿ ಅಧಿಕಾರಿಗಳು ಶಾಮೀಲಾಗಿ ಕೆಲವು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುವುದನ್ನು ಪತ್ತೆಹಚ್ಚಿದರು. ಕಾನೂನುಬಾಹಿರವಾಗಿ ಸೃಷ್ಟಿ ಮಾಡಲಾಗಿದ್ದ ಸುಳ್ಳು ಆರ್‌ಟಿಸಿ ಮುಂತಾದ ದಾಖಲಾತಿಗಳನ್ನು 2010ರಲ್ಲಿ ರದ್ದುಮಾಡಿದ ಜಿಲ್ಲಾಧಿಕಾರಿ, ಒಂದು ಸರ್ವೆ ನಂಬರಿಗೆ ಒಂದೇ ಆರ್‌ಟಿಸಿ ತಯಾರಿಸಿ, ಅದರಲ್ಲಿ "ಈ ಸರ್ವೆ ನಂಬರಿನಲ್ಲಿರುವ ಪೂರ್ಣ ವಿಸ್ತೀರ್ಣ ಆಕಾರಬಂದ್ ರೀತ್ಯಾ ಸರ್ಕಾರಿ ಬಿ ಖರಾಬು ಆಗಿರುತ್ತದೆ ಎಂಬ ಷರಾವನ್ನು ದಾಖಲಿಸಿದರು. ಅಷ್ಟೇ ಅಲ್ಲದೆ, ಈ ಅಕ್ರಮದಲ್ಲಿ ಭಾಗಿಯಾಗಿರುವವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಅವರನ್ನು ಜೈಲಿಗೆ ತಳ್ಳಿ ಎಂದು ಆದೇಶಿಸಿ ಬಿಟ್ಟರು. ಇಂಥಾ ಆದೇಶ ಕೇಳಿ ಮೈಸೂರಿನ ಸುತ್ತಮುತ್ತ ಅವುರಿಕೊಂಡಿದ್ದ ಇಡೀ ರಿಯಲ್ ಎಸ್ಟೇಟ್ ಖದೀಮರಿಗೆ ಶಾಕ್ ಆಗಿದ್ದು ಸುಳ್ಳಲ್ಲ. ಹಾಗಾಗಿ ಆಯಕಟ್ಟಿನ ಈ 2000 ಎಕರೆ ಲಪಟಾಯಿಸಲು ಸೂಕ್ತ ಕಾರ್ಯತಂತ್ರಕ್ಕಾಗಿ ಹುಡುಕುತ್ತಿದ್ದರು.

ವಸ್ತ್ರದ್ ಕೈಲಿ ಕಾನೂನು ವಿನಸ್ತದ್

ಹೀಗಿರುವಾಗ ವೈದ್ಯಕೀಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವನಾಗಿರುವ ರಾಮದಾಸ್ ಕೃಪಾಕಟಾಕ್ಷದಲ್ಲಿ 2011ರಲ್ಲಿ ಮೈಸೂರು ಜಿಲ್ಲಾಧಿಕಾರಿಯಾಗಿ ಬಂದವನೇ ಪಿ.ಎಸ್.ವಸ್ತ್ರದ್ ಎಂಬ ಅಧಿಕಾರಿ. ಈತ ಮಾಡಿದ ಘನಕಾರ್ಯವೇನೆಂದರೆ ಸದರಿ ಭೂಮಿಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನೂ ಒಟ್ಟಾಗಿ ಸೇರಿಸಿ ಒಂದೇ ಪ್ರಕರಣವೆಂಬುದಾಗಿ ಪರಿಗಣಿಸಿ ಭೂಮಾಫಿಯಾಗಳ ಪರವಾದ ಒಂದು ಕಾನೂನುಬಾಹಿರ ಆದೇಶವೊಂದನ್ನು ಹೊರಡಿಸಿದ್ದಾನೆ. ಈತ ತನ್ನ ಆದೇಶದ ಸಮರ್ಥನೆಗಾಗಿ ಹಿಂದಿನ ಜಿಲ್ಲಾಧಿಕಾರಿಗಳಂತೆಯೇ ಇದೇ ಕಾನೂನಿನ ಕಲಂಗಳನ್ನು ಉಲ್ಲೇಖಿಸಿದ್ದಾನೆ. ಆದರ ಉದ್ದೇಶ ಹಾಗೂ ಪರಿಣಾಮ ಮಾತ್ರ ಬೇರೆ, ಅಷ್ಟೇ ವ್ಯತ್ಯಾಸ. ಹರ್ಷಗುಪ್ತಾ ಅವರು ಈಗಿನ ದಾಖಲೆಗಳನ್ನು ಹಿಂದಿನ ಆಕಾರಬಂದ್ ಪ್ರಕಾರ ತಾಳೆ ಇಡಲು ಆದೇಶಿಸಿದ್ದರು ಮತ್ತು ಸರ್ಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಸೇರಿದ ಜಮೀನುಗಳಿಗೆ ಹಾಗೂ ಸಾರ್ವಜನಿಕ ಸ್ವತ್ತುಗಳಿಗೆ ಪೋಡಿ ಕೆಲಸ ಪೂರ್ಣಗೊಳಿಸಿ, ಪ್ರತ್ಯೇಕ ಆರ್‌ಟಿಸಿ ತಯಾರಿಸಲು ಆದೇಶಿಸಿದ್ದರು. ಈ ವಿಷಯದಲ್ಲಿ ಸಾರ್ವಜನಿಕ ಹಾಗೂ ಸರ್ಕಾರಿ ಸ್ವತ್ತುಗಳನ್ನು ಕಾಪಾಡುವುದಷ್ಟೇ ಅವರ ಉದ್ದೇಶವಾಗಿತ್ತು ಎಂಬುದು ನಿರ್ವಿವಾದ.

ಆದರೆ ಈಗಿನ ಜಿಲ್ಲಾಧಿಕಾರಿ ವಸ್ತ್ರದ್ ವರಸೆಯೇ ಬೇರೆ. ಅವರ ಪ್ರಕಾರ "ಈ ಜಮೀನುಗಳು ಕೃಷಿಗೆ ಬಳಸದೇ ಇದ್ದ ಕಾರಣ ಹಾಗೂ ರಾಜಮನೆತನದವರ ಅನುಭವದಲ್ಲಿದ್ದ ಕಾರಣದಿಂದ ಭೂಕಂದಾಯ ನಿಗದಿಪಡಿಸಿರುವುದಿಲ್ಲ. ಈ ಕಾರಣಗಳಿಂದಾಗಿ ಈ ಜಮೀನುಗಳನ್ನು 'ಬಿ' ಖರಾಬು ಜಮೀನುಗಳೆಂದು ವರ್ಗೀಕರಿಸಲಾಗಿದೆ ಎಂದು ಪರಿಗಣಿಸಿ", "ಆರ್‌ಟಿಸಿ ಕಾಲಂ 11ರಲ್ಲಿ 'ಬಿ' ಖರಾಬು ಎಂದು ದಾಖಲಿಸಿರುವ ಷರಾ ರದ್ದುಪಡಿಸಿ" ಆದೇಶಿಸಿದ್ದಾರೆ. ಅದರ ಜೊತೆಗೆ ಈ "ಜಮೀನುಗಳು ಸರ್ಕಾರದ ಜಮೀನುಗಳು ಆಗಿರುವುದಿಲ್ಲದ ಕಾರಣ ಭೂಕಂದಾಯ ಕಾಯಿದೆ ಕಲಂ 67(1) ಮತ್ತು (2)ರ ಪ್ರಕಾರ ಕೈಗೊಂಡ ವಿಚಾರಣೆಯನ್ನು ಕೈಬಿಟ್ಟು" ಬಿಡಲಾಗಿದೆ. ಆದ್ದರಿಂದ ಪರಭಾರೆ ದಾಖಲೆಗಳನ್ನು ಪರಿಶೀಲಿಸಿ ಖಾತಾ ವರ್ಗಾವಣೆ ಬಗ್ಗೆ ಕ್ರಮ ಜರುಗಿಸಲು ಆದೇಶ ಹೊರಡಿಸಿದ್ದಾರೆ. ಅಷ್ಟು ಮಾತ್ರವಲ್ಲ, "ಪ್ರಸ್ತುತ ಪ್ರಕರಣಗಳನ್ನು ಪ್ರಥಮಾದ್ಯತೆ ಮೇಲೆ ಪರಿಗಣಿಸಿ ತಕ್ಷಣವೇ ಕ್ರಮ ಕೈಗೊಳ್ಳಲು" ಆದೇಶಿಸಿದ್ದಾರೆ.

ಅಂದರೆ ಮಾನ್ಯ ಜಿಲ್ಲಾಧಿಕಾರಿ ವಸ್ತ್ರದ್ ಹಾಗೂ ಆತನ ಬೆನ್ನ ಹಿಂದೆ ನಿಂತು ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಿರುವ ಸಚಿವ ರಾಮದಾಸ್ ಜೋಡಿ ಯಾರ ಹಿತಾಸಕ್ತಿ ಕಾಪಾಡುತ್ತಿದೆ? ನಾಡಿನಲ್ಲಿ ಬರ ಬಂದು ನೀರಿಲ್ಲದೆ ಹಾಹಾಕಾರವೆದ್ದಿದ್ದಾಗ ಇಲ್ಲದ ಪ್ರಥಮಾದ್ಯತೆ ಸಾಮುದಾಯಿಕ ಆಸ್ತಿಯನ್ನು ಕಬಳಿಸುವ ಆದೇಶದಲ್ಲಿ ಕಂಡುಬರುತ್ತಿರಲು ಕಾರಣವೇನು ಎಂಬ ಬಗ್ಗೆ ಅವರೇ ಉತ್ತರಿಸಬೇಕು!



ಆದರೆ ಮೈಸೂರಿನ ಸಾರ್ವಜನಿಕರ ನಡುವೆ ಚರ್ಚೆಯಾಗುತ್ತಿರುವ ವಿಷಯ ಮಾತ್ರ ಕುತೂಹಲಕಾರಿಯಾದುದು. ಅದೇನೆಂದರೆ ಮೈಸೂರಿನ ಸುತ್ತಮುತ್ತ ರಾಮದಾಸ್ ತನ್ನ ತಮ್ಮ ಶ್ರೀಕಾಂತ್‌ದಾಸ್ ಮೂಲಕ ಭಾರೀ ರಿಯಲ್ ಎಸ್ಟೇಟ್ ದಂಧೆ ನಡೆಸಿದ್ದಾನೆ. ಈ ಭೂಮಿಯನ್ನೂ ಅದೇರೀತಿ ತನ್ನ ಚೇಲಾ ಪಟಾಲಂ ಮೂಲಕ ಲಪಟಾಯಿಸಲಿಕ್ಕಾಗಿ ಷಡ್ಯಂತ್ರ ರೂಪಿಸಿ, ಈ ವಿಲಕ್ಷಣವಾದ ಹಾಗೂ ಕಾನೂನುಬಾಹಿರವಾದ ಆದೇಶವನ್ನು ಡಿಸಿ ಮೂಲಕ ಮಾಡಿಸಿಕೊಂಡಿದ್ದಾನೆ ಎಂದು ಮೈಸೂರಿನ ಬೀದಿಬೀದಿಗಳಲ್ಲಿ ಚರ್ಚೆ ನಡೆದಿದೆ. ಈ ಅಭಿಪ್ರಾಯವನ್ನು ನಂಬದಿರಲು ನಮಗೆ ಏನಾದರೂ ಕಾರಣಗಳಿವೆಯೆ? ಹೋಗಲಿ, ಸಂಘ ಪರಿವಾರದ ಕಣ್ಮಣಿ ರಾಮದಾಸರು ಈ ಬಗ್ಗೆ ಏನು ಹೇಳುತ್ತಾರೆ?

ಮಧುಸೂದನ್ ಎಂಟ್ರಿ

ಅದಿರಲಿ, ಕಳೆದ ವಾರದಲ್ಲಿ ಈ ಪ್ರಕರಣ ಹಲವು ನಾಟಕೀಯ ತಿರುವುಗಳನ್ನು ಪಡೆದುಕೊಂಡಿದೆ. ಸಾರ್ವಜನಿಕ ಸ್ವತ್ತು ಹೀಗೆ ಸದ್ದಿಲ್ಲದೆ ಪರಭಾರೆಯಾಗುತ್ತಿರುವ ಷಡ್ಯಂತ್ರವನ್ನು



ಕಂಡು 'ಪ್ರಜ್ಞಾವಂತ ನಾಗರಿಕ ವೇದಿಕೆ'ಯ ಮುಖಂಡರಾದ ಎಂ.ಲಕ್ಷ್ಮಣ್ ಎಂಬುವವರು ಮಾಹಿತಿ ಹಕ್ಕು ಕಾಯಿದೆಯಡಿ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸಂಗ್ರಹಿಸಿ, ಒಂದು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ದಾಖಲಿಸಲು ಸಜ್ಜಾಗಿದ್ದರು. ಆದರೆ ಅಷ್ಟರಲ್ಲಿ ಮತ್ತೊಬ್ಬ ಕೇಸರಿವೀರ ಗೋ.ಮಧುಸೂದನ್ ಎಂಬಾತನಿಗೆ ಇದ್ದಕ್ಕಿದ್ದಂತೆ ಜ್ಞಾನೋದಯವಾಗಿ ಸಾರ್ವಜನಿಕ ಸ್ವತ್ತನ್ನು ಕಾಪಾಡಲು ವೇಷ ತೊಟ್ಟು ನಿಂತುಬಿಟ್ಟ. ಆಗಸ್ಟ್ 17ರಂದು ಒಂದು ಪ್ರೆಸ್‌ಮೀಟ್ ಕರೆದು ಜಿಲ್ಲಾಧಿಕಾರಿ ಎಸಗಿರುವ ಅಕ್ರಮದ ವಿರುದ್ಧ ಕೂಗೆಬ್ಬಿಸಿ ಹೀರೋ ಆಗಲು ಪ್ರಯತ್ನಿಸಿದ. ಆದರೆ ತಮ್ಮದೇ ಪಕ್ಷದ ಸರ್ಕಾರದ ಬಗ್ಗೆಯಾಗಲಿ, ಅದರಲ್ಲಿ ಉಸ್ತುವಾರಿ ಸಚಿವ ಅಥವಾ ಇನ್ನಿತರರ ಕೈವಾಡದ ಬಗ್ಗೆಯಾಗಲಿ ಅಪ್ಪಿತಪ್ಪಿಯೂ ಸೊಲ್ಲೆತ್ತಲಿಲ್ಲ. ಪತ್ರಕರ್ತರು ಈ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಜಾಣತನದ ಉತ್ತರಗಳನ್ನಷ್ಟೇ ಕೊಟ್ಟು ಜಾರಿಕೊಂಡ. ಒಂದು ವಿಷಯ ನೆನಪಿರಲಿ. ಈತನ ಇತಿಹಾಸದಲ್ಲಿ ಎಂದಿಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ದನಿ ಎತ್ತಿದ ಒಂದು ಉದಾಹರಣೆಯೂ ಇಲ್ಲ.

ಅಂದಹಾಗೆ ಈ ಮಧುಸೂದನ್ ಮಾಮೂಲಿ ವ್ಯಕ್ತಿಯಲ್ಲ, ಸ್ವತಃ ಬಿಜೆಪಿ ಸರ್ಕಾರದಲ್ಲಿ ಹಾಲಿ ಎಂಎಲ್‌ಸಿ. ಈ ಸರ್ಕಾರದ ಯೋಜನೆಗಳ ಫಲಾನುಭವಿ ಕೂಡ. ಈ ಹಿಂದೆ ಬಂಡಿಪುರ ಅಭಯಾರಣ್ಯ ಪ್ರದೇಶದಲ್ಲಿ ಒಂದು ಅಕ್ರಮ ರೆಸಾರ್ಟ್ ಕಟ್ಟಿ ದಂಧೆಗಿಳಿದಿದ್ದ ಐನಾತಿ ಗಿರಾಕಿ ಈತ. ಕೊನೆಗೆ ಭಾರೀ ಪ್ರತಿಭಟನೆ, ಹೋರಾಟಗಳ ಫಲಿತವಾಗಿ ಈತನ ಅಕ್ರಮ ರೆಸಾರ್ಟ್‌ನ್ನು ಇತ್ತೀಚೆಗೆ ತೆರವು ಗೊಳಿಸಲಾಗಿದೆ. ಈತ ರಾಮದಾಸ್ ಲೆವೆಲ್‌ನಲ್ಲಿ ಅಲ್ಲವಾದರೂ ತನ್ನ ಯೋಗ್ಯತಾನುಸಾರ ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಸಿಕೊಂಡಿರುವ ಆಸಾಮಿಯೆಂಬುದು ಮೈಸೂರು ಮಹಾಜನತೆಯ ಅಂಬೋಣ. ಆ ಮಾತು ಹಾಗಿರಲಿ.

ಈ ವಸ್ತ್ರದ್ ಎಂಬ ನಾಲಾಯಕ್ ಡಿಸಿಯ ಆದೇಶದ ಬಗ್ಗೆ ಸಾರ್ವಜನಿಕರು ಛೀಮಾರಿ ಹಾಕಲು ಶುರುಮಾಡಿದ್ದಲ್ಲದೆ, ಕಾನೂನು ಹೋರಾಟ ನಡೆಸಲು ಕೆಲವರು ಮುಂದಾದರು. ಹೀಗೆ ಪರಿಸ್ಥಿತಿ ತಮಗೆ ಮುಳುವಾಗುತ್ತದೆ ಎಂಬುದನ್ನು ಅರಿತ ಈ ಕೂಟ ಉಪಮುಖ್ಯಮಂತ್ರಿ ಈಶ್ವರಪ್ಪನ ನಿವಾಸದಲ್ಲಿ 18 ರ ಬೆಳ್ಳಂಬೆಳಗ್ಗೆಯೇ ಒಂದು ತುರ್ತು ಸಭೆ ಸೇರಿತು. ಆ ಸಭೆಯಲ್ಲಿ ಈಶ್ವರಪ್ಪ, ಮಧುಸೂದನ್, ವಸ್ತ್ರದ್, ರೆವಿನ್ಯೂ ಇಲಾಖೆಯ ಕಾರ್ಯದರ್ಶಿ ಮುಂತಾದವರು ಭಾಗವಹಿಸಿದ್ದರು. ಅದೇ ದಿನ ಮಧ್ಯಾಹ್ನ ಈ ನಾಟಕ ಮತ್ತೊಂದು ತಿರುವು ಪಡೆದುಕೊಂಡುಬಿಟ್ಟಿತು. ಏನೆಂದರೆ ಮಾನ್ಯ ಜಿಲ್ಲಾಧಿಕಾರಿ ವಸ್ತ್ರದ್ ಅವರು ಜೂನ್ 20 ರಂದು ತಾವು ಹೊರಡಿಸಿದ್ದ ಆದೇಶವನ್ನು ತಾವೇ ವಾಪಸ್ ಪಡೆದುಕೊಂಡುಬಿಟ್ಟರು. ಈ ಬಗ್ಗೆ ಮಾಧ್ಯಮ ಪ್ರತಿನಿಧಿಗಳಿಗೆ ನೀಡಿದ ಕಾರಣ ಏನು ಗೊತ್ತೆ? ತಮ್ಮ ಆದೇಶ ಮಾಧ್ಯಮಗಳಲ್ಲಿ ತಪ್ಪಾಗಿ ಬಿಂಬಿತವಾಗಿಬಿಟ್ಟಿದೆ ಮತ್ತು ತಮ್ಮ ಆದೇಶವನ್ನು ತಪ್ಪಾಗಿ ಅರ್ಥೈಸಲಾಗುತ್ತಿರುವುದರಿಂದ ಅದನ್ನು ವಾಪಸ್ ಪಡೆದುಕೊಂಡರಂತೆ.

ಆದರೆ ಕೆಲವು ಕಾನೂನು ವಿಶ್ಲೇಷಕರು ಹೇಳುವುದೇ ಬೇರೆ. ಡಿಸಿ ತಾನು ಹೊರಡಿಸಿದ ಇಂಥಾ ಆದೇಶವನ್ನು ಮತ್ತೆ ತಾನೇ ವಾಪಸ್ ಪಡೆಯಲು ಸಾಧ್ಯವಿಲ್ಲ. ಹಾಗೆ ಮಾಡಬೇಕೆಂದರೆ ಅದನ್ನು ಉನ್ನತ ಅಂಗಗಳೇ ಮಾಡಬೇಕು. ಹೀಗಿರುವಾಗ ಈ ಡಿಸಿಯ ವಾಪಸಾತಿ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ, ನ್ಯಾಯಾಲಯಗಳ ದಿಕ್ಕುತಪ್ಪಿಸಿ ಈ ಹಿಂದಿನ ಆದೇಶವನ್ನೇ ಉಳಿಸಿಕೊಳ್ಳುವಂತೆ ಆದೇಶ ತರುವ ಷಡ್ಯಂತ್ರ ಇದರ ಹಿಂದಿದೆ ಎಂಬುದು ಕೆಲ ಕಾನೂನುಪಂಡಿತರ ವಾದ. ಅದೇನೇ ಇರಲಿ, ಇಂಥಾ ನೀತಿಗೆಟ್ಟ ಆದೇಶಗಳನ್ನು ಹೊರಡಿಸಲು ಡಿಸಿ ವಸ್ತ್ರದ್ ಎಂಬ ಅಧಿಕಾರಿಗೆ ಬುದ್ಧಿ ಭ್ರಮಣೆಯಾಗಿಲ್ಲವಾದರೆ, ಅವರು ಕೆಲವು ಪಟ್ಟಭದ್ರರ ಲಾಬಿಗೆ ಒಳಗಾಗಿರಲೇಬೇಕು ಎಂಬುದು ಸಾರ್ವಜನಿಕರ ತರ್ಕ.

ಈ ವಾಪಸಾತಿ ಆದೇಶದ ನಂತರ ಸೀನ್‌ಗೆ ಎಂಟ್ರಿ ಕೊಟ್ಟ ರಾಮದಾಸ ಮತ್ತೊಂದು ರೀತಿಯ ರಾಗ ಶುರು ಮಾಡಿಕೊಂಡಿದ್ದಾನೆ. ಅದೇನೆಂದರೆ ಈ ಎಲ್ಲಾ ಗೊಂದಲಗಳನ್ನು ಪರಿಹರಿಸಲು ನ್ಯಾಯಾಂಗ ತನಿಖೆ ನಡೆಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡುತ್ತಾನಂತೆ. ಆದರೆ ರಾಮದಾಸನ ಈ ಸೋಗಲಾಡಿ ಮಾತನ್ನು ಶಾಲಾಬಾಲಕರೂ ನಂಬುವ ಸ್ಥಿತಿಯಲ್ಲಿ ಇಲ್ಲ ಬಿಡಿ.


ಈ ಎಲ್ಲದರ ನಡುವೆ ನಮ್ಮ ಮಹಾರಾಜರ ವಂಶೋದ್ಧಾರಕರಾದ ಶ್ರೀಕಂಠದತ್ತ ಒಡೆಯರ್‌ರ ಧರ್ಮಪತ್ನಿ ಪ್ರಮೋದಾ ದೇವಿ ಈ ಎಲ್ಲಾ ಆಸ್ತಿಗಳ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಡಬೇಕೆಂದು ಅಲವತ್ತುಕೊಂಡಿದ್ದಾರೆ. ಹೀಗೆ ಸಾವಿರಾರು ಕೋಟಿಗಳ ಆಸ್ತಿ ನಮಗೇ ಬೇಕು ಎಂದು ಕೂಗೆಬ್ಬಿಸುವ ಸಂದರ್ಭದಲ್ಲಿ ಮಾತ್ರ ನಮ್ಮ ರಾಜವಂಶದ ಕೂಗು ಕೇಳಿ ಬರುತ್ತೆ ಎಂಬುದನ್ನು ಅನುಭವದಿಂದ ಅರಿತಿರುವ ನಾಗರಿಕರು ಈ ವಿಷಯಕ್ಕೆ ಯಾರೂ ತಲೆಕೆಡಿಸಿಕೊಂಡಿಲ್ಲ.

ಈ ಎಲ್ಲಾ ನಾಟಕೀಯ ಬೆಳವಣಿಗೆಗಳ ನಡುವೆ ಕಾನೂನು ಹೋರಾಟ ಮುನ್ನಡೆಸಿರುವ ಎಂ.ಲಕ್ಷ್ಮಣ್ ಅವರು ಈ ಬಗ್ಗೆ ನ್ಯಾಯಾಲಯದಲ್ಲಿ ಕೇವಿಯಟ್ ದಾಖಲಿಸಿರುವುದು ಕೇಸರಿ ಪರಿವಾರದ ಪಾಖಂಡಿಗಳಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಕಳ್ಳರನ್ನು ಕಾವಲಿಗಿಟ್ಟಿರುವ ಮೈಸೂರು ಜನತೆ ಎಚ್ಚೆತ್ತುಕೊಳ್ಳದೇ ಹೋದರೆ ಅವರನ್ನು ಚಾಮುಂಡಿ ತಾಯಿಯೂ ರಕ್ಷಿಸಲಾರಳು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

'ಪ್ರಜ್ಞಾವಂತ' ಲಕ್ಷ್ಮಣ

ಈ ಹಗರಣ ಹೊರಬರಲು ಪ್ರಮುಖ ಪಾತ್ರವಹಿಸಿದವರು ಮೈಸೂರಿನ ಪ್ರಜ್ಞಾವಂತ ನಾಗರಿಕ ವೇದಿಕೆಯ ಸಂಚಾಲಕ ಎಂ.ಲಕ್ಷ್ಮಣ ಎಂಬುವವರು. ಈ ಹಿಂದೆ ಭೂಗಳ್ಳ ರವಿಶಂಕರ ಆಶ್ರಮದ ಹಗರಣವನ್ನು ಬಯಲಿಗೆ ತಂದವರೂ ಇವರೇ. ಎಂಟೆಕ್ ಪದವೀಧರರಾಗಿರುವ ಲಕ್ಷ್ಮಣ ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸಿ ಕೇವಲ ಒಂದು ಸಾವಿರ ಮತಗಳ ಅಂತರದಿಂದ ಸೋಲು ಕಂಡವರು. ಮೈಸೂರು ಬಳಿಯ ಚಾಮಲಾಪುರ ಉಷ್ಣ ವಿದ್ಯುತ್ ಸ್ಥಾವರದ ವಿರುದ್ಧ ಯಶಸ್ವಿಯಾಗಿ ಹೋರಾಟ ಸಂಘಟಿಸಿ, ಆ ಯೋಜನೆಯನ್ನು ಅಲ್ಲಿಂದ ಎತ್ತಂಗಡಿಯಾಗುವಂತೆ ಮಾಡುವುದರಲ್ಲಿ ಪ್ರಮುಖ ಪಾತ್ರಧಾರಿ. ಮೈಸೂರಿನ ಮೂಡಾ ಸಂಸ್ಥೆಯ ಡಿನೋಟಿಫಿಕೇಶನ್ ಹಗರಣಗಳನ್ನು ನಿರಂತರವಾಗಿ ಬಯಲಿಗೆಳೆಯುತ್ತಿರುವ ಇವರು ತಮ್ಮ ಸಂಘಟನೆಯ ಮೂಲಕ ನಾಗರಿಕ ಸೌಲಭ್ಯಗಳಿಗಾಗಿ ದನಿ ಎತ್ತುತ್ತಾ ಬಂದಿದ್ದಾರೆ.




ಲಕ್ಷ್ಮಣ

ಭೂಗಳ್ಳರ ವಿರುದ್ಧದ ಅವರ ಹೋರಾಟ ಯಶಸ್ವಿಯಾಗಲಿ, ಖದೀಮರಿಗೆ ಶಿಕ್ಷೆಯಾಗಲಿ.

ಕಮ್ಮರಡಿ ಹನೀಫನ ಎಸ್ಕೇಪ್!

ನೆಲಮಂಗಲದ ಕೊಲೆಗಡುಕರಿಗೆ ದುಬೈ ಲಿಂಕ್?

ಧಾರವಾಡ ಜೈಲಿನಿಂದ ಪರಾರಿಯಾದ ಹನೀಫ್ ಕೇವಲ ಹತ್ತೇ ಗಂಟೆಯೊಳಗೆ ಮತ್ತೆ ಪೊಲೀಸರ ವಶವಾಗಿದ್ದ. ಭಟ್ಕಳದ ಡಿವೈಎಸ್‌ಪಿ ನಾರಾಯಣ್ ಹನೀಫನ ಬಾಯಿಬಿಡಿಸಲು ಏನೆಲ್ಲಾ ಕಸರತ್ತು ಮಾಡಿದರಾದರೂ ಆತ ನೆಲಮಂಗಲದ ಜೆಡಿಎಸ್ ನಾಯಕ ಕೃಷ್ಣಪ್ಪನವರ ಹತ್ಯೆಯ ಬಗ್ಗೆಯಾಗಲಿ, ಹಂತಕ ಬೆತ್ತನಗೆರೆ ಸೀನನ ಕುರಿತಾಗಲಿ, ಬಂಡೆ ಮಂಜನ ವಿಷಯದಲ್ಲಾಗಲಿ ಏನೇನೂ ಬಾಯಿಬಿಡಲಿಲ್ಲ. ಇತ್ತ ನೆಲಮಂಗಲದ ಪೊಲೀಸರ ತಂಡವೊಂದು ಭಟ್ಕಳಕ್ಕೆ ಬಂದು ಗಂಟೆಗಟ್ಟಲೇ ಹನೀಫನ ಬಾಯಿ ಬಿಡಿಸಲು ಯತ್ನಿಸಿತಾದರೂ ತನಗೆ ಸೀನ ಜೈಲಲ್ಲಿ ಪರಿಚಯವೇ ಹೊರತು ಬೆಮೆಲ್ ಕೃಷ್ಣಪ್ಪನವರ ಹತ್ಯೆ ಕುರಿತಂತೆ ತನಗೆ ಏನೇನೂ ಗೊತ್ತಿಲ್ಲ ಎಂದೇ ಗೋಣು ಬಗ್ಗಿಸಿ ನಿಂತಿದ್ದ.



ಹನೀಫ್

ಧಾರವಾಡ ಜೈಲಿನಿಂದ ರಣಹಾತಕಿ ಕಮ್ಮರಡಿ ಹನೀಫ಼ ಎಸ್ಕೇಪಾಗಿರುವುದಕ್ಕೂ ನೆಲಮಂಗಲದ ಭಿನ್ನಮಂಗಲದ ಕೃಷ್ಣಪ್ಪನವರ ಹಂತಕರಿಗೂ ಸಂಬಂಧವಿದೆಯೆ? ಆಗಸ್ಟ್ 17ರ ಶುಕ್ರವಾರ ರಾತ್ರಿ ಭಟ್ಕಳದಲ್ಲಿ ಸಿಕ್ಕಿಬಿದ್ದ ಕಮ್ಮರಡಿ ಹನೀಫ್ ಅಲಿಯಾಸ್ ಹನೀಫ್ ಬ್ಯಾರಿಗೆ ಭಿನ್ನಮಂಗಲ ಕೃಷ್ಣಪ್ಪನವರ ಹಂತಕರಾದ ಬೆತ್ತನಗೆರೆ ಸೀನ ಮತ್ತು ಬಂಡೆಮಂಜರ ಜೊತೆ ಸೇರಿಕೊಳ್ಳುವ ಉದ್ದೇಶವಿತ್ತೆ? ಧಾರವಾಡ ಜೈಲಿನಿಂದ ಎಸ್ಕೇಪಾಗಿ ರಾಷ್ಟ್ರೀಯ ಹೆದ್ದಾರಿ NH 17 ರ ಮೂಲಕ ಉಡುಪಿ-ಮಂಗಳೂರು ಹಾದು ಕೇರಳದ ಕಾಸರಗೋಡು ತಲುಪುವ ಉದ್ದೇಶದಿಂದಲೇ ಹನೀಫ್ ಭಟ್ಕಳಕ್ಕೆ ಬಂದಿದ್ದನೆ? ಕೇರಳದ ಕಾಸರಗೋಡು ಸುತ್ತಮುತ್ತಲ ಯಾವುದೋ ಬ್ಯಾರಿ ಮುಸ್ಲಿಮರೊಬ್ಬರ ತೋಟದಲ್ಲಿ ಸದ್ಯ ಬೆತ್ತನಗೆರೆ ಸೀನ ಅಡಗಿಕೊಂಡಿರಬಹುದಾ? ಹಾಗೆ ಸೀನನ ಜೊತೆಗೂಡಿ ಕೇರಳದಿಂದ ದುಬೈಗೆ ಹಾರುವುದು ಹನೀಫನ ಗುರಿಯಾಗಿತ್ತಾ?


ಇಂಥ ಹಲವಾರು ಸಾಧ್ಯತೆಗಳ ಲೆಕ್ಕಾಚಾರ ಶುರುವಾಗಿದ್ದೇ ಆಗಸ್ಟ್ 16ರ ಗುರುವಾರ ಮಧ್ಯಾಹ್ನ ಧಾರವಾಡ ಜೈಲಿನಿಂದ ಕ್ರಿಮಿ ಹನೀಫ್ ಬ್ಯಾರಿ ಎಸ್ಕೇಪಾದ ನಂತರ. ಕಮ್ಮರಡಿ ಹನೀಫ್‌ನ ಹಿನ್ನೆಲೆ, ಆತನ ರಕ್ತ ಪಿಪಾಸೆ, ಕ್ರಿಮಿನಲ್ ತಲೆ ಮತ್ತು ಜೈಲಲ್ಲಿದ್ದೇ ಆತ ಕಟ್ಟಿಕೊಂಡಿದ್ದ ಪಾತಕ ಜಾಲದ ಲೆಕ್ಕಾಚಾರವಿದ್ದವರಿಗೆ ಹನೀಫ್ ಜೈಲನ್ನು ಬೇಧಿಸಿ ಪರಾರಿಯಾದ ಘಟನೆ ಅಚ್ಚರಿ ಹುಟ್ಟಿಸುವುದಿಲ್ಲ. ಆಗಸ್ಟ್ 16 ರ ಗುರುವಾರ ಮಧ್ಯಾಹ್ನ ಮೂರೂವರೆ ಹೊತ್ತಿಗೆ ಏಕಾಏಕಿ ಧಾರವಾಡ ಜೈಲಿನ ಗಾರ್ಡುಗಳು ಮತ್ತು ವಾರ್ಡನ್ ಮೇಲೆ ತಿರುಗಿಬಿದ್ದ ಹನೀಫ್ ಅರೆಕ್ಷಣದಲ್ಲೇ ಜೈಲಿನ ಭದ್ರತೆಯನ್ನು ಬೇಧಿಸುತ್ತಾನೆ.

ಭಟ್ಕಳದಲ್ಲಿ...!

ಅತ್ತ ಹನೀಫ್ ಜೈಲಿನ ಗಾರ್ಡುಗಳು ಮತ್ತು ವಾರ್ಡನ್ ಜೊತೆ ಫೈಟಿಂಗಿಗೆ ಇಳಿಯುತ್ತಿದ್ದಂತೆಯೇ ಹೊರಗಡೆ ಬೈಕೊಂದು ಸ್ಟಾರ್ಟ್ ಆಗುತ್ತದೆ. ಹಾಗೆ ಜೈಲಿನ ಹೊರಗೆ ಬೈಕ್ ಸ್ಟಾರ್ಟ್ ಮಾಡಿಕೊಂಡು ಅಣಿಯಾಗಿದ್ದಾತ ಧಾರವಾಡದ ಕುಖ್ಯಾತ ಬೈಕುಗಳ್ಳ ಸುನೀಲ್ ಮೇಟಿ. ಜೈಲಿನ ಹೆಬ್ಬಾಗಿಲನ್ನೇ ಬೇಧಿಸಿ ಓಡಿಬಂದು ಸ್ಟಾರ್ಟ್ ಆಗಿದ್ದ ಬೈಕಿಗೆ ಹನೀಫ್ ಕೂರುತ್ತಾನೆ. ಕ್ಷಣಾರ್ಧದಲ್ಲೇ ಬೈಕು ಮಾಯವಾಗುತ್ತದೆ. ಅಲ್ಲಿಂದಾಚೆಗೆ ಕಲಘಟಗಿ, ಉತ್ತರ ಕನ್ನಡದ ಮೂಲಕ ರಾಷ್ಟ್ರೀಯ ಹೆದ್ದಾರಿಯನ್ನು ಹಿಡಿದ ಮೇಟಿ ಮತ್ತು ಹನೀಫ್ ಉಡುಪಿಗೆ ಹೋಗುವ ಮಾರ್ಗ ಮಧ್ಯೆ ಭಟ್ಕಳಕ್ಕೆ ಬಂದಾಗ ನಡುರಾತ್ರಿ ಎರಡೂವರೆಯಾಗಿರುತ್ತದೆ. ಅಲ್ಲಿನ ಅಬಾರ್ ಎಂಬ ಏರಿಯಾದ ಪೆಟ್ರೋಲ್ ಬಂಕಿನಲ್ಲಿ ಬೈಕು ನಿಲ್ಲಿಸುತ್ತಾರೆ. ಬಹುಶಃ ಬೈಕಿನ ಪೆಟ್ರೋಲ್ ಖಾಲಿಯಾಗಿರಬೇಕು. ಇನ್ನೇನು ಮುಚ್ಚಿದ್ದ ಪೆಟ್ರೋಲ್ ಬಂಕಿನ ಕಟ್ಟೆ ಮೇಲೆ ಇಬ್ಬರು ಮಲಗಬೇಕೆನ್ನುವಷ್ಟರಲ್ಲಿ ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆಯ ರಾತ್ರಿಗಸ್ತಿನ ಇಬ್ಬರು ಪೇದೆಗಳು ಸಮೀಪಿಸಿದ್ದೇ "ಯಾರು ನೀವು, ಏಕೆ ಮಲಗಿದ್ದೀರಿ? ಬೈಕು ಯಾರದು? ಎಲ್ಲಿಗೆ ಹೋಗಬೇಕು..." ಇತ್ಯಾದಿ ವಿಚಾರಣೆಗಿಳಿಯುತ್ತಿದ್ದಂತೆ ಜೊತೆಗಿದ್ದ ಸುನೀಲ್ ಮೇಟಿ ಓಡಲು ಯತ್ನಿಸಿದ್ದಾನೆ. ಮೊದಲೇ ಅನುಮಾನದಲ್ಲಿದ್ದ ಪೊಲೀಸರು ನೆಗೆದು ಇನ್ನೇನು ಮೇಟಿಯನ್ನು ಹಿಡಿಯಬೇಕೆನ್ನುವಷ್ಟರಲ್ಲಿ ಕಾಳಗಕ್ಕೆ ನಿಂತ ಹನೀಫ಼ ಸೈಜುಕಲ್ಲೊಂದನ್ನು ಎತ್ತಿದ್ದೇ ಪೇದೆಯ ಮೇಲೆ ಹಾಕಿದ್ದಾನೆ. ತಪ್ಪಿಸಿಕೊಂಡ ಮತ್ತೊಬ್ಬ ಪೇದೆ ಹನೀಫನನ್ನು ಹಿಡಿಯಲೆತ್ನಿಸುತ್ತಿದ್ದಂತೆ ಹನೀಫ್ ಪರಾರಿಯಾಗಿಬಿಟ್ಟ.

ಅಷ್ಟರಲ್ಲೇ ಸಿಕ್ಕಿಬಿದ್ದ ಸುನೀಲ್ ಮೇಟಿ ಪರಾರಿಯಾದವನು ಧಾರವಾಡ ಜೈಲಿನಿಂದ ಎಸ್ಕೇಪಾದ ಕಮ್ಮರಡಿ ಹನೀಫ಼ ಎಂದು ಬಾಯಿ ಬಿಟ್ಟಿದ್ದ. ತಕ್ಷಣವೇ ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆಗೆ ವೈರ್‌ಲೆಸ್ ಸಂದೇಶ ಮುಟ್ಟಿದೆ. ಈ ಮಧ್ಯೆ ಪರಾರಿಯಾದ ಹನೀಫ್ ಪಕ್ಕದ ಮಸೀದಿಯೊಂದನ್ನು ಹೊಕ್ಕಿದ್ದಾನೆ. ಏಕಾಏಕಿ ಅಪರಿಚಿತನೊಬ್ಬ ಮಸೀದಿಗೆ ಹೊಕ್ಕಿದ್ದನ್ನು ನೋಡಿದ ಅಕ್ಕಪಕ್ಕದ ಜನರೆಲ್ಲ ಆತನನ್ನು ಸುತ್ತುವರಿದು ಪ್ರಶ್ನಿಸುತ್ತಿದ್ದಂತೆ ಹನೀಫ಼ ತೊದಲತೊಡಗಿದ್ದಾನೆ. ಅಲ್ಲಿಗೆ ಈತ ಯಾರೋ ಕ್ರಿಮಿನಲ್ ಎಂಬುದು ಮಸೀದಿಯವರಿಗೆ ಅರ್ಥವಾಗಿದೆ. ಅದೇ ಹೊತ್ತಿಗೆ ಭಟ್ಕಳ ಗ್ರಾಮಾಂತರದ ಎಸ್.ಐ.ನವೀನ್ ಜೋಗಿ ಮತ್ತು ಟೌನ್ ಪೊಲೀಸ್ ಠಾಣೆಯ ಎಸ್.ಐ. ಪ್ರಕಾಶ್ ದೇವಾಡಿಗ ಸ್ಥಳಕ್ಕೆ ಧಾವಿಸಿದ್ದೇ ಹನೀಫನನ್ನು ವಶಕ್ಕೆ ಪಡೆದಿದ್ದಾರೆ.





ಭಿನ್ನಮಂಗಲ ಕೃಷ್ಣಪ್ಪ



ಬೆತ್ತನಗೆರೆ ಸೀನ

ಜೀವಾವಧಿ ಸಜೆ

ಧಾರವಾಡ ಜೈಲಿನಿಂದ ಪರಾರಿಯಾದ ಹನೀಫ್ ಕೇವಲ ಹತ್ತೇ ಗಂಟೆಯೊಳಗೆ ಮತ್ತೆ ಪೊಲೀಸರ ವಶವಾಗಿದ್ದ. ಭಟ್ಕಳದ ಡಿವೈಎಸ್‌ಪಿ ನಾರಾಯಣ್ ಹನೀಫನ ಬಾಯಿಬಿಡಿಸಲು ಏನೆಲ್ಲಾ ಕಸರತ್ತು ಮಾಡಿದರಾದರೂ ಆತ ನೆಲಮಂಗಲದ ಜೆಡಿಎಸ್ ನಾಯಕ ಕೃಷ್ಣಪ್ಪನವರ ಹತ್ಯೆಯ ಬಗ್ಗೆಯಾಗಲಿ, ಹಂತಕ ಬೆತ್ತನಗೆರೆ ಸೀನನ ಕುರಿತಾಗಲಿ, ಬಂಡೆ ಮಂಜನ ವಿಷಯದಲ್ಲಾಗಲಿ ಏನೇನೂ ಬಾಯಿಬಿಡಲಿಲ್ಲ. ಇತ್ತ ನೆಲಮಂಗಲದ ಪೊಲೀಸರ ತಂಡ ವೊಂದು ಭಟ್ಕಳಕ್ಕೆ ಬಂದು ಗಂಟೆಗಟ್ಟಲೇ ಹನೀಫನ ಬಾಯಿ ಬಿಡಿಸಲು ಯತ್ನಿಸಿತಾದರೂ ತನಗೆ ಸೀನ ಜೈಲಲ್ಲಿ ಪರಿಚಯವೇ ಹೊರತು ಬೆಮೆಲ್ ಕೃಷ್ಣಪ್ಪನವರ ಹತ್ಯೆ ಕುರಿತಂತೆ ತನಗೆ ಏನೇನೂ ಗೊತ್ತಿಲ್ಲ ಎಂದೇ ಗೋಣು ಬಗ್ಗಿಸಿ ನಿಂತಿದ್ದ.

ಅದು ಹನೀಫನ ಕ್ರಿಮಿನಲ್ ಚಾಳಿ. ಶಿವಮೊಗ್ಗದ ತೀರ್ಥಹಳ್ಳಿ ತಾಲ್ಲೂಕು ಕಮ್ಮರಡಿಯ ಬ್ಯಾರಿಯಾದ ಹನೀಫ಼ ಹೇಳಿಕೇಳಿ ಹೆಬ್ಬೆಟ್ಟು ಮಂಜನ ಅತ್ಯಂತ ನಂಬಿಕಸ್ಥ ದೋಸ್ತ್. ಹೊಸಳ್ಳಿಯ ಗ್ರಾಮಪಂಚಾಯ್ತಿ ಸದಸ್ಯ ಹೊಸಳ್ಳಿ ವೆಂಕಟೇಶನ ಕೊಲೆ ಕೇಸೂ ಸೇರಿದಂತೆ ಆತನ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಕೇಸುಗಳ ಒಟ್ಟು ಸಂಖ್ಯೆ ಹದಿನೆಂಟು. ಈತನ ತಮ್ಮ ಹಮ್ಜಾ ಈತನಿಗಿಂತಲೂ ಪಾಖಂಡಿ. ಸದ್ಯ ಶಿವಮೊಗ್ಗ ಜೈಲಿನಲ್ಲಿದ್ದಾನೆ. ಹೊಸಳ್ಳಿ ವೆಂಕಟೇಶನ ಕೊಲೆ ಕೇಸಿನಲ್ಲಿ ಹನೀಫನ ಜೊತೆಗಿದ್ದ ನಾಲ್ಕೂ ಜನಕ್ಕೆ ಈಗಾಗಲೇ ಕೋರ್ಟು ಜೀವಾವಧಿ ಶಿಕ್ಷೆ ವಿಧಿಸಿದೆ. ಇದರ ವಿರುದ್ಧ ಹನೀಫ್ ಹೈಕೋರ್ಟ್‌ಗೆ ಸಲ್ಲಿಸಿದ ಮೇಲ್ಮನವಿ ಕೂಡ ಬರಕತ್ತಾಗದೆ ಆತನ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ಕಾಯಂಗೊಳಿಸಿದೆ. ಇನ್ನು ತನ್ನ ಜೀವನವಿಡೀ ಜೈಲಲ್ಲಿ ಕೊಳೆಯುವುದೊಂದೇ ಗತಿಯೆಂದು ಹತಾಶೆಗೆ ಬಿದ್ದೇ ಹನೀಫ್ ಗುರುವಾರ ಧಾರವಾಡ ಜೈಲಿನಿಂದ ಪರಾರಿಯಾಗಿದ್ದ. ಆತ ಜೈಲಿನಿಂದ ಪರಾರಿಯಾಗುತ್ತಿರುವುದು ಇದೇ ಮೊದಲೇನಲ್ಲ. ಇಲ್ಲಿಗೆ ಐದು ವರ್ಷದ ಹಿಂದೆ ಶಿವಮೊಗ್ಗದ ಜೈಲಿನಿಂದ ಇದೇರೀತಿ ಎಸ್ಕೇಪಾಗಿದ್ದ. ತನಗೆ ಇನ್ನೆಂಥದೋ ಕಾಯಿಲೆಯೆಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಾಗಿ ಅಲ್ಲಿದ್ದ ಕಾವಲು ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ್ದ.

ಹಾಗೆ ಎಸ್ಕೇಪಾದವನು ಇನ್ನಷ್ಟು ಅಟ್ಯಾಕ್, ರಾಬರಿ ಡಕಾಯಿತಿ ನಡೆಸಿ ಪೊಲೀಸರಿಗೆ ತಲೆನೋವು ತಂದಿಟ್ಟಿದ್ದ. ಅವತ್ತೇ ದುಬೈಗೆ ಹಾರುವ ಉದ್ದೇಶವಿತ್ತಾದರೂ ಅಚಾನಕ್ ಪೊಲೀಸರಿಗೆ ಸಿಕ್ಕಿಬಿದ್ದು ಜೈಲುಪಾಲಾಗಿದ್ದ. ಜೈಲಲ್ಲಿದ್ದುಕೊಂಡೇ ತಮ್ಮ ಹಮ್ಜಾನನ್ನು ಮುಂದೆ ಬಿಟ್ಟು ರಿವಾಲ್ವರ್ ದಂಧೆ, ಬಡ್ಡಿ ವಸೂಲಿ, ಗಾಂಜಾ ಸಪ್ಲೈ, ಖೋಟಾನೋಟು ಇತ್ಯಾದಿ ಸಕಲ ಪಾತಕಗಳನ್ನು ನಡೆಸತೊಡಗಿದ. ಅದೇ ಹೊತ್ತಿಗೆ ಅಲ್ಲಿ ಬೆತ್ತನಗೆರೆ ಶಂಕ್ರನೂ ಇದ್ದ. ಯಾವುದೋ

>>>13

ಡಿಸಿಎಂ ಅಶೋಕ್ ಛೇಂಬರಿನಲ್ಲಿ ವಡೇರಹಳ್ಳಿ, ಕರಿವರದಯ್ಯ!

ಹಂತಕ ಬೆತ್ತನಗೆರೆ ಸೀನನನ್ನು ಎನ್‌ಕೌಂಟರ್ ಮಾಡದಂತೆ ಸೇಫಾಗಿ ಪೊಲೀಸರಿಗೆ ಸರೆಂಡರ್ ಮಾಡಿಸುವಲ್ಲಿ ನೆಲಮಂಗಲದ ಬಿಜೆಪಿ ನಾಯಕ ಕರಿವರದಯ್ಯ ಮತ್ತು ಗೋಪಾಲಪುರದ ಜಿಲ್ಲಾ ಪಂಚಾಯ್ತಿ ಸದಸ್ಯ ವಡೇರಹಳ್ಳಿ ಜಯರಾಮ ಸೇರಿಕೊಂಡು ಜಂಟಿ ಕಾರ್ಯಾಚರಣೆಗಿಳಿದಿದ್ದಾರಂತೆ. ಹಾಗಂತ ನೆಲಮಂಗಲದ ಜನ ಪುಕಾರೆಬ್ಬಿಸುವುದಕ್ಕೂ ಕಾರಣವಿದೆ. ಕಳೆದೊಂದು ವಾರದಿಂದ ಕರಿವರದಯ್ಯ ಮತ್ತು ವಡೇರಹಳ್ಳಿ ಪದೇ ಪದೇ ಉಪಮುಖ್ಯಮಂತ್ರಿ ಆರ್.ಅಶೋಕ್‌ರ ಛೇಂಬರಿನಲ್ಲಿ ಕಾಣಿಸಿಕೊಂಡಿದ್ದಾರೆ.





ಭಿನ್ನಮಂಗಲ ಕೃಷ್ಣಪ್ಪರ ಹತ್ಯೆಗೆ ಪ್ರತೀಕಾರವಾಗಿ ಜೈಲಲ್ಲಿರುವ ಬೆತ್ತನಗೆರೆ ಶಂಕ್ರ ಎಮ್ಮೆಲ್ಸಿ ಮುಂಗಾರು ಮಳೆ ಕೃಷ್ಣಪ್ಪನನ್ನು ಟಾರ್ಗೆಟ್ ಮಾಡಿದ್ದಾನೆಂಬುದು ನೆಲಮಂಗಲದ ಲೆಕ್ಕಾಚಾರವಾದರೂ ಶಂಕ್ರನಿಗೆ ಹೆಚ್ಚು ಸಿಟ್ಟಿರುವುದು ಗೋಪಾಲಪುರದ ಜಿ.ಪಂ. ಸದಸ್ಯ ವಡೇರಹಳ್ಳಿ ಜಯರಾಮನ ಮೇಲೆ. ಹಿಂದೊಮ್ಮೆ ಹುಡುಗರನ್ನು ಬಿಟ್ಟು ವಡೇರಹಳ್ಳಿ ಹತ್ಯೆಗೆ ಶಂಕ್ರ ಯತ್ನಿಸಿಯೂ ಇದ್ದ. ಅದೃಷ್ಟವಶಾತ್ ಆವತ್ತು ಬಚಾವಾದ ವಡೇರಹಳ್ಳಿ ಬೆತ್ತನಗೆರೆ ಸೀನನಿಗೆ ಇನ್ನಷ್ಟು ಆತ್ಮೀಯನಾದ.

ಬಹುಶಃ ಎಲ್ಲಿ ತಮ್ಮನ್ನು ಶಂಕ್ರ ಮುಗಿಸುತ್ತಾನೋ ಎಂಬ ಭೀತಿಗೆ ಬಿದ್ದು ರಕ್ಷಣೆ ಕೋರಿ ವಡೇರಹಳ್ಳಿ ಮತ್ತು ಕರಿವರದಯ್ಯ ಮಂತ್ರಿ ಅಶೋಕ್ ಮೊರೆ ಹೊಕ್ಕಿರಲೂಬಹುದು. ಆದರೆ ನೆಲಮಂಗಲದ ಕಣ್ಣಿಗೇ ಗ್ಯಾಂಗ್ ವಾರ್‌ನ ಕಾಮಾಲೆ ಅಂಟಿದೆ. ಪ್ರಾಣರಕ್ಷಣೆ ಕೋರಿ ಅಶೋಕ್ ಮೊರೆ ಹೊಕ್ಕರೂ ಹಂತಕ ಸೀನನನ್ನ ಎನ್‌ಕೌಂಟರ್ ಮಾಡದಂತೆ ಡೀಲು ಕುದುರಿಸಿದಂತೆ ಜನ ಭಾವಿಸುತ್ತಾರೆ.



ಅಷ್ಟಕ್ಕೂ ನೆಲಮಂಗಲದ ರಿಯಲ್ ಎಸ್ಟೇಟ್ ದಂಧೆಯಲ್ಲಿ ಸ್ವತಃ ಅಶೋಕ್ ಸಾಹೇಬರೇ ಆಳವಾಗಿ ಬೇರು ಬಿಟ್ಟಿರುವಾಗ ಪೊಲೀಸರು ಯಾರನ್ನು ಎನ್‌ಕೌಂಟರ್ ಮಾಡಬೇಕು, ಯಾರನ್ನು ಸರೆಂಡರ್ ಮಾಡಿಕೊಳ್ಳಬೇಕೆಂಬುದನ್ನು ನಿರ್ಧರಿಸಲಾಗದಷ್ಟು ಪೆದ್ದರೇನಲ್ಲ ಅಶೋಕ್!

ರಗಾಲದ ಗಾಯಕ್ಕೆ ಪೊಲಿಟಿಕಲ್ ಪಿಕ್‌ನಿಕ್ ಬರೆ



ರ್ನಾಟಕದ ಜನತೆಗೆ ಬರಗಾಲವೆಂಬ ಗಾಯ ಗುವಾಗಲೇ ಬಿಜೆಪಿ ನಾಯಕರು ಅದೇ ರ ಮೇಲೆ ಬರೆ ಹಾಕುತ್ತಿದ್ದಾರೆ.

ರ ಪರಿಹಾರದ ಯಾವ ಕೆಲಸಗಳೂ ಜನರಿಗೆ ದಿದ್ದರೂ ಪುಢಾರಿಗಳ ಬರ ಪ್ರವಾಸ ಮಾತ್ರ ಮೂಲೆಮೂಲೆಗೂ ಈಗ ತಲುಪುತ್ತಿದೆ.

ಮು ಮಗ್ಗುಲಮುಳ್ಳು ಯಡಿಯೂರಪ್ಪ ಮೊನ್ನೆ 22ರಿಂದ ಬರಪ್ರವಾಸ ಶುರು ಮಾಡಿದ್ದಾರೆ. ಆಗಸ್ಟ್ 28 ರಿಂದ ಸದಾನಂದ ಗೌಡ, ಪ್ಪನೂ, ಮತ್ತೊಂದೆಡೆ ಅನಂತ ಕುಮಾರ್, ಕ್ ತಂಡವೂ ಬರ ಪ್ರವಾಸಕ್ಕೆ ರೆಡಿಯಾಗುತ್ತಿದೆ.

ದರೆ ಇವರ್‍ಯಾರು ತಮ್ಮ ಕೈಯಲ್ಲಿ ಜನರಿಗಾಗಿ ಲೋಟ ನೀರನ್ನಾಗಲಿ, ದನಗಳಿಗಾಗಿ ಹಿಡಿ ನ್ನಾಗಲಿ ಕೊಂಡೊಯ್ಯುತ್ತಿಲ್ಲ.

ದು ಹೋಗಲಿ,



ಟ್ಟರ್ ಸರ್ಕಾರ ಏನೋ ಒಂದು ಬರ ಪರಿಹಾರ ಜನೆಗೆ ಚಾಲನೆ ನೀಡಿದೆ. ಅದನ್ನು ಜನರಿಗೆ ಸಲು ಇವರು ಪ್ರವಾಸ ಹೊರಟದ್ದಾರಾ ಎಂದು ದರೆ ಅಂಥದ್ದೇನೂ ಕಾಣುತ್ತಿಲ್ಲ.

ಹಾಗಾದರೆ ಈ ಬರ ಪ್ರವಾಸವಾದರೂ ಯಾತಕ್ಕೆ? ಯಾವ ಪುರುಷಾರ್ಥ ಸಾಧನೆಗೆ?

ಪ್ರಶ್ನೆಗೆ ಉತ್ತರ ಹುಡುಕಲು ಬಹಳ ಶ್ರಮಿಸಬೇಕಿಲ್ಲ.

ರಾಜ್ಯದ ನದಿ-ಕೆರೆಗಳು ತುಂಬದಿದ್ದರೇನಾಯಿತು. ಖಾಲಿಯಾಗಲಿರುವ ತಮ್ಮ ಅಧಿಕಾರವೆಂಬ ಮರುಭರ್ತಿಗಾಗಿ ಇವರು ಟೂರ್ ಎಂತೆ ಕಾಣುತ್ತಿದೆ. ರೈತರ ಹೊಲದಲ್ಲಿ ಬೆಳೆ ಇದ್ದರೆ ತಾನೆ. ಏನು. ನಾಳಿನ ಎಲೆಕ್ಷನ್‌ನಲ್ಲಿ ಓಟಿನ ಬೆಳೆಯನ್ನು ಈಗಲೇ ಟೂರ್ ಹೊರಟದ್ದಾರೆ ಈ ನಾಯಕರು.

ಯಡ್ಡಿ ತಂತ್ರಕ್ಕೆ ಬಿಜೆಪಿ ಪ್ರತಿತಂತ್ರ

ಈಗ ಶುರುವಾಗಿರುವ ಯಡ್ಡಿಯ ಬರ ಪ್ರವಾಸ ವಾಸ್ತವವಾಗಿ ಕಳೆದ ಜುಲೈ ತಿಂಗಳಲ್ಲೆ ಚಾಲೂ ಆಗಬೇಕಿತ್ತು, ಇದರರ್ಥ ಯಡ್ಡಿ ರಾಜ್ಯದ ಜನರ ಕಷ್ಟಗಳ ಬಗ್ಗೆ ಆಗಿನಿಂದಲೇ ಮರುಗುತ್ತಿದ್ದರು ಎಂದೇನಲ್ಲ, ಬದಲಾಗಿ ಬಿಜೆಪಿ ಹೈಕಮಾಂಡ್ ಅನ್ನು ಬೆದರಿಸಲು ಯಡ್ಡಿ ಈ ಟೂರ್ ಪ್ರೋಗ್ರಾಂ ಅನ್ನು ಪ್ಲಾನ್ ಮಾಡಿದ್ದರು. ಸದಾನಂದ ಗೌಡರನ್ನು ಸಿಎಂ ಕುರ್ಚಿಯಿಂದ ಕೆಳಗಿಳಿಸಿ ಆ ಜಾಗಕ್ಕೆ ಜಗದೀಶ ಶೆಟ್ಟರನ್ನು ತಂದು ಕೂರಿಸಲು ಯಡ್ಡಿ ಬರ ಪ್ರವಾಸದ ನೆಪ ಹೇಳುತ್ತಿದ್ದರು. ಆದರೆ ಯಾವಾಗ ಯಡ್ಡಿಯ ಬೇಡಿಕೆ ಈಡೇರಿತೊ ಆಗ ಟೂರ್ ರದ್ದಾಯಿತು. ಆದರೂ ಯಡ್ಡಿಯ ಇನ್ನೊಂದು ಬೇಡಿಕೆ ಈಗಲೂ ಈಡೇರಿಲ್ಲ.

ಅದು

ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನ ಕುರಿತಾದದ್ದು.

ಈಶ್ವರಪ್ಪ ಅಧ್ಯಕ್ಷರಾಗಿ ಮುಂದುವರೆಯುವುದು ಯಡ್ಡಿಗೆ ಬೇಡವಾಗಿದೆ. ನಾಳೆ ಎಲೆಕ್ಷನ್ ಬಂದಾಗ ಅಭ್ಯರ್ಥಿಗಳ ಲಿಸ್ಟ್ ಫೈನಲ್ ಮಾಡಿ ಬಿ ಫಾರಂ ನೀಡುವ ಅಧಿಕಾರ ಅಧ್ಯಕ್ಷರಿಗೆ ಇರುತ್ತಾದ್ದರಿಂದ ಯಡ್ಡಿಗೆ ತಾನೇ ಅಲ್ಲಿರಬೇಕು ಎನಿಸಿದೆ. ಆದರೆ ಹೈಕಮಾಂಡ್ ಇದಕ್ಕೆ ಇನ್ನು ಒಪ್ಪಿಲ್ಲ. ಹಾಗಾಗಿ 'ನೀ ಕೊಡೆ, ನಾ ಬಿಡೆ' ಎನ್ನುವ ಹೊಸ ಜಗಳದಲ್ಲಿ ತಮ್ಮದೇ ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿ ಈ ಗದ್ದಲದಲ್ಲಿ ತನ್ನ ಇಮೇಜ್ ಬೆಳೆಸಿಕೊಳ್ಳಲು ಯಡ್ಡಿ ಈ ಬರ ಪ್ರವಾಸ ಆರಂಭಿಸಿರುವುದು ಎಂತಾ ದಡ್ಡರಿಗೂ ಗೊತ್ತಾಗುತ್ತಿದೆ.

ಯಡ್ಡಿ ಟೂರ್ ಹಾಕುವುದು ಗ್ಯಾರಂಟಿಯಾದಾಗ ಅದಕ್ಕೊಂದು ಪ್ರತಿತಂತ್ರ ಮಾಡಿರುವ ಬಿಜೆಪಿಗಳು ಇನ್ನೆರಡು ಟೀಂ ಮಾಡಿ ರಾಜ್ಯದ ಬರಪೀಡಿತ ಜನರ ಮೇಲೆ ಛೂ ಬಿಡುತ್ತಿದೆ.

ಬಿಜೆಪಿಯೊಳಗೆ ಹೊಗೆಯಾಡುತ್ತಿರುವ ಒಳಜಗಳ ಜನರಿಗೆ ಗೊತ್ತಾಗದಿರಲಿ, ಯಡ್ಡಿಯ ಟೂರ್ ಪಾರ್ಟಿ ಪ್ರೋಗ್ರಾಂ ಆಗಿದೆಯೇ ವಿನಃ ವೈಯಕ್ತಿಕವಾದದ್ದಲ್ಲ ಎಂದು ಬಿಂಬಿಸಲು ಈ ನಾಟಕ ಆಡಲಾಗುತ್ತಿದೆ.

ಹಾಗಾಗಿ ಸದಾನಂದಗೌಡ, ಈಶ್ವರಪ್ಪ, ಅನಂತ್ ಕುಮಾರ್, ಅಶೋಕ್ ಕೂಡ ಬರ ಪ್ರವಾಸ ಹೊರಡಲಿದ್ದಾರೆ. ಇಷ್ಟಾದರೂ ಇವರಿಂದ ಜನರಿಗೆ ಸಿಗುವುದಾದರೂ ಏನು?

ನೀರಿಲ್ಲ, ಮೇವಿಲ್ಲ, ಬೆಳೆ ನಷ್ಟ ಮುಂತಾದ ಸಮಸ್ಯೆಗಳ ಅರ್ಜಿಗಳನ್ನು ನೊಂದ ಜನ ಆಯಾ ತಾಲ್ಲೂಕಿನ ತಹಶೀಲ್ದಾರರಿಗೆ ನೀಡಬಹುದು. ಅದನ್ನು ಯಡ್ಡಿ ಕೈಗೆ ನೀಡಿದಾಕ್ಷಣ ಯಾವ ಪವಾಡಗಳು ಸಂಭವಿಸುವುದಿಲ್ಲ.


ಕೇಂದ್ರಕ್ಕೆ ಮನವಿ ನೀಡೇ ಇಲ್ಲ!

ಬಿಜೆಪಿ ಸರ್ಕಾರದ ಉಡಾಫೆಗೆ ಇದೊಂದೇ ಉದಾಹರಣೆ ಸಾಕು.

ಕಳೆದ ಆಗಸ್ಟ್ 2ರಂದು ಬೆಂಗಳೂರಿಗೆ ಬಂದಿದ್ದ ಕೇಂದ್ರ ಸಚಿವ ಶರದ್ ಪವಾರ್ 'ಬರ ಪರಿಹಾರಕ್ಕೆ ಹೆಚ್ಚಿನ ಹಣ ಬೇಕಿದ್ದರೆ ಸರಿಯಾದ ಮಾಹಿತಿ, ಅಂಕಿ ಅಂಶಗಳಿರುವ ಪರಿಷ್ಕೃತ ವರದಿ ನೀಡಿ ಮನವಿ ಸಲ್ಲಿಸಿ' ಎಂದು ಹೇಳಿಹೋಗಿದ್ದಾರೆ. ಇದಾಗಿ ಮೂರು ವಾರಗಳೇ ಆಗಿಹೋಗಿವೆ. ಆದರೂ ಇದುವರೆಗೂ ರಾಜ್ಯ ಸರ್ಕಾರ ಕೇಂದ್ರಕ್ಕೆ ಪರಿಷತ ವರದಿ ಕಳಿಸಿಲ್ಲ, ಹಾಗಾಗಿ ಹಣ ತಾನೆ ಹೇಗೆ ಬರುತ್ತದೆ?

ಬಿಜೆಪಿಗಳಿಗೆ ಬರಗಾಲ ಎಂಬುದೂ ಸಹ ಅವರ ರಾಜಕೀಯ ಆಟಕ್ಕೆ ಒಂದು ದಾಳವಾಗಿದೆ ಅಷ್ಟೆ. ಕೃಷಿ ಸಚಿವ ಉಮೇಶ ಕತ್ತಿ, ಗ್ರಾಮೀಣಾಭಿವೃದ್ಧಿ ಸಚಿವ ಶೆಟ್ಟರ್, ಜಲಸಂಪನ್ಮೂಲ ಮಂತ್ರಿ ಬಸು ಬೊಮ್ಮಾಯಿ ಹೆಸರಿಗಷ್ಟೇ ಇಂಥ ಪ್ರಮುಖ ಖಾತೆಗಳಿಗೆ ಮಂತ್ರಿಗಳಾಗಿರುವಂತೆ ಕಾಣುತ್ತಿದೆ. ಈ ಮೂವರು ಲಿಂಗಾಯತ ಸಚಿವರಿಗೆ ಯಡ್ಡಿಯ ಟೂರ್‌ನ ರಾಜಕೀಯ ಲಾಭ-ನಷ್ಟಗಳ ಬಗ್ಗೆಯೇ ಹೆಚ್ಚು ಯೋಚನೆಗಳಿವೆಯೇ ವಿನಃ ತಮ್ಮ ತಮ್ಮ ಇಲಾಖೆ ಸಿಬ್ಬಂದಿಯನ್ನು ಬರ ನಿರ್ವಹಣೆಗೆ ಸಜ್ಜುಗೊಳಿಸುವ ಕಿಂಚಿತ್ ಕಾಳಜಿಯೂ ಇಲ್ಲ.

ಹೋಮ ಮಾಡಿಸಿದರೂ ಮಳೆಯಿಲ್ಲ



ಶೆಟ್ಟರ್ ಸರ್ಕಾರ ಬದುಕಿದೆಯಾ?

ಬರಗಾಲ ನಿರ್ವಹಣೆ ಮಾಡಬೇಕಾದ ಜಗದೀಶ್ ಶೆಟ್ಟರ್ ಸರ್ಕಾರ ನಿಜಕ್ಕೂ ಬದುಕಿದೆಯಾ?

ಏಕೆಂದರೆ ಬರಪರಿಹಾರಕ್ಕೆ ಯಾವ ನಿರ್ದಿಷ್ಟ ಕಾರ್ಯಕ್ರಮವನ್ನೂ ಘೋಷಿಸದ ಸರ್ಕಾರ ಹಣಕಾಸಿನ ನಿರ್ವಹಣೆ ಬಗ್ಗೆಯೂ ಗಮನಹರಿಸಿಲ್ಲ.

ರೈತರ ಕೃಷಿ ಸಾಲಮನ್ನಾ ಮಾಡುವುದಾಗಿ ಘೋಷಿಸಿ ಒಂದು ತಿಂಗಳಾಗಿದ್ದರೂ ಇದಕ್ಕೆ ಬೇಕಾದ 3500 ಕೋಟಿ ರೂ.ಗಳನ್ನು ಸ್ಥಳೀಯ ವ್ಯವಸಾಯ ಸೇವಾ ಸಹಕಾರ ಸಂಘಗಳಿಗಾಗಲಿ, ಬ್ಯಾಂಕುಗಳಿಗಾಗಲಿ ಇನ್ನೂ ನೀಡಿಲ್ಲ. ಈ ಸಂಬಂಧ ಈಗಲೂ ಅಧಿಕೃತ ಆದೇಶವನ್ನು ಹೊರಡಿಸಿಲ್ಲ.

ಮತ್ತೊಂದೆಡೆ ರೈತರ ಬಗ್ಗೆ ಕಣ್ಣೀರು ಸುರಿಸುತ್ತಾ ಇದ್ದರೂ ಹಾಲು ಉತ್ಪಾದಕ ರೈತರಿಗೆ ನೀಡಬೇಕಿದ್ದ 2 ರೂ. ಬೆಂಬಲ ಬೆಲೆಯ ಮೊತ್ತವನ್ನು ಮೂರ್ನಾಲ್ಕು ತಿಂಗಳಿಂದಲೂ ಕೊಟ್ಟೇ ಇಲ್ಲ. ಜೊತೆಗೆ ಡೈರಿಗಳಿಗೆ ಹಾಲು ಸರಬರಾಜು ಮಾಡಿದ ಬಾಬ್ತು 250 ಕೋಟಿ ರೂ.ಗಳನ್ನು ರೈತರಿಗೆ ಕೊಡಬೇಕಾಗಿದ್ದು ಅದನ್ನೂ ಕಳೆದ ಮೂರು ತಿಂಗಳಿಂದ ಕೊಟ್ಟೇ ಇಲ್ಲ.

ಹೀಗೆ ಕೊಡಬೇಕಾದ್ದನ್ನೇ ಕೊಡದಿರುವ ಸರ್ಕಾರ ಬೇರೇನನ್ನಾದರೂ ಕೊಟ್ಟೀತೆಂದು ಹೇಗೆ ನಂಬಬೇಕು? ಬೇಕಿದ್ದರೆ ಗಮನಿಸಿ ನೋಡಿ ಯಡ್ಡಿ ತನ್ನ ಬರ ಪ್ರವಾಸದಲ್ಲಿ ಈ ವಿಚಾರಗಳ ಬಗ್ಗೆ ಮಾತೇ ಆಡುತ್ತಿಲ್ಲ.

ಟೂರ್‌ನಲ್ಲೂ ಪಾರ್ಟಿ ಪ್ರಚಾರ

ಇನ್ನಾರು ತಿಂಗಳಲ್ಲಿ ಬರಲಿರುವ ಅಸೆಂಬ್ಲಿ ಎಲೆಕ್ಷನ್‌ಗೆ ತಯಾರಿ ಮಾಡಿಕೊಳ್ಳಲು ಸಹ ಈ ಬರ ಪ್ರವಾಸವನ್ನು ಬಳಸಿಕೊಳ್ಳಲು ಬಿಜೆಪಿಗಳು ಇನ್ನೊಂದು ಪ್ಲಾನ್ ಮಾಡಿಕೊಂಡಿದ್ದಾರೆ.

ರಾಜ್ಯ ಬಿಜೆಪಿಯಲ್ಲಿ ಈಗ 27 ಲಕ್ಷ ಸದಸ್ಯರಿದ್ದಾರೆಂತಲೂ ಅದನ್ನು 50 ಲಕ್ಷಕ್ಕೇರಿಸಲು ನಮ್ಮ ನಾಯಕರು ಪ್ರವಾಸ ಕಾಲದಲ್ಲಿ ಪ್ರಯತ್ನಿಸಲಿದ್ದಾರೆಂತಲೂ ಬಿಜೆಪಿಯ ಧಡವನೊಬ್ಬ ಹೇಳಿದ್ದಾನೆ.

ಅಷ್ಟಲ್ಲದೆ 'ಪ್ರತಿ ಬೂತ್‌ನಲ್ಲೂ ಕನಿಷ್ಠ ಪಕ್ಷ ಐವತ್ತು ಪಾರ್ಟಿ ಸದಸ್ಯರನ್ನು ನಾವು ಮಾಡುತ್ತೇವೆ' ಎಂದೂ ಬಿಜೆಪಿ ಘೋಷಿಸಿಕೊಂಡಿದೆ. ಇದೊಂತರಾ ಬರಗಾಲದಲ್ಲಿ ಬೆಳೆ ತೆಗೆಯುವ ರಾಜಕಾರಣಿಗಳ ಆಟ. ರಾಜ್ಯದ 747 ಹೋಬಳಿಗಳ ಪೈಕಿ 603 ಹೋಬಳಿಗಳಲ್ಲಿ ತೀವ್ರ ಬರಗಾಲ ಕಾಣಿಸಿಕೊಂಡಿದೆಯೆಂದು ಅಧಿಕೃತವಾಗಿಯೇ ಹೇಳಲಾಗುತ್ತಿದೆ. ಆದರೂ ಒಂದೇ ಒಂದು ಸ್ಥಳದಲ್ಲಿ ಕುಡಿಯುವ ನೀರು ರಕ್ಷಣೆ, ಬೆಳೆ ರಕ್ಷಣೆ, ಜಾನುವಾರುಗಳಿಗೆ ಮೇವಿನ ಪೂರೈಕೆಗೆ ಏನೇನೂ ಕ್ರಮ ವಹಿಸುತ್ತಿಲ್ಲ. ಆದರೆ ಬರ ಪ್ರವಾಸ ಮಾತ್ರ ರಭಸದಿಂದ ನಡೆದಿದೆ. ಇದೊಂದು 'ಪೊಲಿಟಿಕಲ್ ಪಿಕ್‌ನಿಕ್' ಅಲ್ಲದೆ ಇನ್ನೇನು?

● ಪಾರ್ವತೀಶ

ಯಡ್ಡಿಯ 'ಜಾತಿಪ್ರವಾಸ'

ಯಡಿಯೂರಪ್ಪನಿಗೆ ಈಗಲೂ ಜಾತಿಯೇ ಟ್ರಂಪ್ ಕಾರ್ಡ್!

ಈತನ ಬರಪ್ರವಾಸದ ನಕ್ಷೆ ಗಮನಿಸಿದರೆ ಅದೂ ಸಹ ಲಿಂಗಾಯತರ ಪ್ರಾಬಲ್ಯವಿರುವ ಪ್ರದೇಶಗಳತ್ತಲೇ ಸುತ್ತುತ್ತಿರುವುದು ಕಾಣುತ್ತದೆ.

ಯಡ್ಡಿಗೆ ಹೇಳಿಕೊಳ್ಳಲು ಈಗ ಏನೂ ಉಳಿದಂತೆ ಕಾಣುತ್ತಿಲ್ಲ. ಸಿಎಂ ಆಗಿದ್ದಾಗ ಕಡಿದು ಕಟ್ಟೆ ಹಾಕಿದ್ದೇನೂ ಇಲ್ಲ. ಹೇಳಿಕೊಳ್ಳುವಂತಹ ಅಭಿವೃದ್ಧಿಯಾಗಲಿ, ಸಾಧನೆಗಳಾಗಲಿ ಮೊದಲೇ ಇಲ್ಲ, ಜೊತೆಗೆ ಭ್ರಷ್ಟಾಚಾರ ಹಗರಣಗಳಿಂದಾಗಿ ಸಾಮಾನ್ಯ ಜನರಿರಲಿ ಸ್ವತಃ ಬಹುತೇಕ ಲಿಂಗಾಯತರೂ ಈಗ ಯಡ್ಡಿಯ ಬಗ್ಗೆ ಮೊದಲಿನ ಜಾತಿ ಪ್ರೇಮ ತೋರಿಸುತ್ತಿಲ್ಲ.

ಟೋಟಲಿ ಯಡ್ಡಿಗೀಗ ಮೊದಲಿದ್ದ ಇಮೇಜ್ ಇಲ್ಲವೇ ಇಲ್ಲ, ಹಾಗಾಗಿ ಇದನ್ನೆಲ್ಲ ರಿಪೇರಿ ಮಾಡಿಕೊಂಡು ತನಗಿದ್ದ ಜಾತಿ ಬೆಂಬಲದ ಬಲವನ್ನು ಮತ್ತೆ ಕಟ್ಟಿಕೊಳ್ಳಲು ಯಡ್ಡಿ ಲಿಂಗಾಯತರೇ ಹೆಚ್ಚಿರುವ ಬರ ಪ್ರದೇಶಗಳತ್ತ ಬರ ಪ್ರವಾಸಕ್ಕೆ ಹೊರಟಿದ್ದಾರೆ. ತುಮಕೂರಿನ ಸಿದ್ಧಗಂಗಾ ಮಠದಿಂದ ಶುರುವಾಗಿರುವ ಯಡ್ಡಿಯ ಪ್ರವಾಸ ರೈತರ ಬಳಿ ತೆರಳುವುದಕ್ಕಿಂತ ಹೆಚ್ಚಾಗಿ ಮಠಗಳು, ದೇವಸ್ಥಾನಗಳ ಸುತ್ತಲೇ ಕೇಂದ್ರೀಕರಣಗೊಳ್ಳುತ್ತಿದೆ.

ಬೇಜವಾಬ್ದಾರಿ ಕಾಂಗ್ರೆಸ್



ಯಡ್ಡಿ ಹಾಗೂ ಬಿಜೆಪಿಗಳ ಬರ ಪ್ರವಾಸ ನೋಡಿ ಕೊಂಚ ಗಾಬರಿಯಾದಂತೆ ಕಾಣುತ್ತಿರುವ ರಾಜ್ಯ ಕಾಂಗ್ರೆಸ್ ಈಗ ತಾನೂ ಸಹ ಸೆಪ್ಟಂಬರ್ 2 ರಿಂದ ಬರ ಪ್ರವಾಸ ನಡೆಸುವುದಾಗಿ ಹೇಳಿದೆ. ಮೊನ್ನೆ ದೆಹಲಿಯಲ್ಲಿ ನಡೆದ ಅರ್ಜೆಂಟ್ ಮೀಟಿಂಗ್‌ನಲ್ಲಿ ಈ ವಿಚಾರ ತೀರ್ಮಾನವಾಗಿದೆ. ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ದೆಹಲಿಯಲ್ಲಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿಯ ಮಧುಸೂದನ್ ಮೇಸ್ತ್ರಿ ವೀರಪ್ಪ ಮೊಯ್ಲಿ ಆಸ್ಕರ್ ಫರ್ನಾಂಡಿಸ್ ಮುಂತಾದವರ ಪ್ಲಾನ್ ಇದು.

ಬರಗಾಲದಲ್ಲಿ ಬಿಜೆಪಿ ಆಡುತ್ತಿರುವ ರಾಜಕೀಯ ನಾಟಕಕ್ಕೆ ಕಾಂಗ್ರೆಸ್ ಸಹ ಇನ್ನೊಂದು ನಾಟಕ ಆಡಿದಂತಿದೆ ಇದು. ಏಕೆಂದರೆ ಬರ ಪರಿಹರಿಸಲಾಗಲಿ ಅಥವಾ ಬರಗಾಲದ ಪರಿಣಾಮಕಾರಿ ನಿರ್ವಹಣೆಗಾಗಲಿ ಈ ರೀತಿಯ ಪ್ರವಾಸಗಳು ಯಾವುದೇ ರಚನಾತ್ಮಕ ಪರಿಹಾರ ನೀಡಲಾರವು. ಕಾಂಗ್ರೆಸಿಗರಿಗೂ ಇದು ಗೊತ್ತಿರುವಂತಿದೆ.

ಇವರಿಬ್ಬರೂ ಸಾಲದೆಂಬಂತೆ ಗಣಿಧಣಿ ರಾಮುಲು ಕೂಡ ಇನ್ನೊಂದು ಸುತ್ತಿನ ಪ್ರವಾಸಕ್ಕೆ ಈಗ ರೆಡಿಯಾಗಿದ್ದಾನೆ. ಈತನ ಹೊಸ ಟೂರ್ ಬೆಳಗಾವಿ ಜಿಲ್ಲೆಯಲ್ಲಂತೆ.







ಹರಕೆಯ ಕುರಿಯಂತೆ ಹೆಣವಾದ ಮೆಂಟಲ್ ಸೀನ

ಶಿವಮೊಗ್ಗೆಯಲ್ಲಿ ಮತ್ತೊಮ್ಮೆ ಲಾಂಗು-ಮಚ್ಚುಗಳು ಆರ್ಭಟಿಸಿವೆ. ಮೊನ್ನಿನ ಸುತ್ತಿನ ಕಾಳಗದಲ್ಲಿ ಸುಮಾರು ಹತ್ತು ರೌಡಿಗಳಿದ್ದ ತಂಡ ದೊಡ್ಡಮ್ಮನ ದೇವಸ್ಥಾನದ ಆವರಣದಲ್ಲೇ ಮೆಂಟಲ್ ಸೀನ ಎಂಬ ಇನ್ನೊಬ್ಬ ರೌಡಿಯನ್ನು ರಕ್ತದ ಮಡುವಿನಲ್ಲಿ ಕೊಂದು ಹಾಕಿದೆ.

ಆಗಸ್ಟ್ 17ರಂದು ಅಮಾವಾಸ್ಯೆ. ಅದಕ್ಕೆ ಹತ್ತು ದಿನಗಳ ಮುನ್ನ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆ ಪಡೆದಿದ್ದ ಮೆಂಟಲ್ ಸೀನ ಅಲಿಯಾಸ್ ಶ್ರೀನಿವಾಸ ಅವತ್ತು ಶಿವಮೊಗ್ಗೆಯ ಹೊಸಮನೆಯಲ್ಲಿರುವ ಜಲದುರ್ಗಮ್ಮ ಅಲಿಯಾಸ್ ದೊಡ್ಡಮ್ಮದೇವರ ಗುಡಿಗೆ ಹೋಗಲು ನಿರ್ಧರಿಸಿದ. ದೊಡ್ಡಮ್ಮ ದೇವರು ಆತನ ಮನೆದೇವರು. ಆದ್ದರಿಂದ ಪ್ರತಿ ಅಮಾವಾಸ್ಯೆಗೆ ಆ ದೇವಸ್ಥಾನಕ್ಕೆ ಹೋಗುವುದು ಸೀನನ ರೂಢಿ ಆಗಿತ್ತು. ಆಗಸ್ಟ್ 17ರಂದು ದೇವಸ್ಥಾನಕ್ಕೆ ಹೋಗಬೇಡವೆಂದು ಅವನ ಮನೆಯವರೆಲ್ಲ ಒತ್ತಾಯ ಮಾಡಿದರೂ ಕೇಳದ ಸೀನ ಬೆಳಗ್ಗೆ 9.30ಕ್ಕೆ ದೇವಸ್ಥಾನವನ್ನು ತಲುಪಿದ.

ಕುಲದೇವತೆಯ ದರ್ಶನಕ್ಕೆಂದು ಹೋದ ಸೀನ ದೇವಸ್ಥಾನದೆದುರು ತನ್ನ ಬೈಕ್ ನಿಲ್ಲಿಸಿ ದೇವಾಲಯವನ್ನು ಪ್ರವೇಶಿಸಿದ. ಗರ್ಭ ಗುಡಿಯಲ್ಲಿರುವ ಕುಲದೇವತೆಗೆ ಕೈಮುಗಿದು ಗರ್ಭಗುಡಿಯ ಸುತ್ತ ಎರಡು ಪ್ರದಕ್ಷಿಣೆ ಹಾಕಿದ. ಆತ ಮೂರನೆ ಪ್ರದಕ್ಷಿಣೆ ಪ್ರಾರಂಭಿಸುವ ಹೊತ್ತಿಗೆ ಹಿಂದಿನಿಂದ ಆತನ ಮೇಲೆ ದಾಳಿಯಾಯಿತು. ಮುಖಕ್ಕೆ ಮಂಕಿ ಕ್ಯಾಪ್‌ಗಳನ್ನು, ಕಣ್ಣಿಗೆ ಕಪ್ಪು ಕನ್ನಡಕಗಳನ್ನು ಧರಿಸಿದ್ದ ಪಡೆ ಲಾಂಗು ಮಚ್ಚುಗಳನ್ನು ಬೀಸಿತು. ಆ ಲಾಂಗು ಮಚ್ಚುಗಳ ಎದುರು ಸೀನನಿಗೆ ಪ್ರಿಯವಾಗಿದ್ದ ರೇಜರ್ ಬ್ಲೇಡ್ ಯಾತಕ್ಕೂ ಉಪಯೋಗವಾಗಲಿಲ್ಲ. ಏನಾಗುತ್ತಿದೆ ಎಂದು ಸೀನನಿಗೆ ಅರ್ಥವಾಗುವ ಮುನ್ನ ಒಬ್ಬ ಬೀಸಿದ ಲಾಂಗಿಗೆ ಮೆಂಟಲ್ ಸೀನನ ಮೈ ಹರಿದುಹೋಯಿತು. ಇನ್ನೊಬ್ಬ ಬೀಸಿದ ಮಚ್ಚಿಗೆ ಸೀನನ ಕತ್ತೇ ಕತ್ತರಿಸಿಹೋಯಿತು. ಕೆಲವೇ ಕ್ಷಣಗಳಲ್ಲಿ ಸೀನ ತನ್ನ ಕುಲದೇವತೆಯ ಎದುರು ಹರಕೆಯ ಕುರಿಯಂತೆ ತುಂಡಾಗಿ ಬಿದ್ದಿದ್ದ.

ಯಾರು ಈ ಮೆಂಟಲ್ ಸೀನ?

ಭೀಕರವಾಗಿ ಹೆಣವಾದ ಮೆಂಟಲ್ ಸೀನ ಶಿವಮೊಗ್ಗೆಯಲ್ಲಿ ಕುಖ್ಯಾತ ರೌಡಿಯೇನಾಗಿರಲಿಲ್ಲ. ಆತ ಕ್ರಿಮಿನಲ್ ಫೀಲ್ಡಿಗೆ ಇಳಿದು ಹೆಚ್ಚು ಕಾಲವೂ ಆಗಿರಲಿಲ್ಲ. ಒಂದು ವರ್ಷ ಹಿಂದೆಯಷ್ಟೇ ಮತ್ತೊಬ್ಬ ರೌಡಿ ತುಳಸಿರಾಮನನ್ನು ಜನನಿಬಿಡ ರಸ್ತೆಯಲ್ಲಿ ಕೊಂದು ಹಾಕುವ ಮೂಲಕ ಈತ ಕುಖ್ಯಾತಿಯನ್ನು ಪಡೆದಿದ್ದ.

ಕ್ರಿಮಿನಲ್ ಲೋಕಕ್ಕೆ ಸೀನ ಎಂಟ್ರಿ ಕೊಡುವ ಮುನ್ನ ಆತ ಶಿವಮೊಗ್ಗೆಯ ನ್ಯಾಷನಲ್ ಕಾಲೇಜಿನಲ್ಲಿ ವಿದ್ಯಾರ್ಥಿ ಆಗಿದ್ದ. ಆದರೆ ಆತನ ಪಾಲಿಗೆ ಓದು ನೈವೇದ್ಯವಾಗಿದ್ದರಿಂದ ಕಾಲೇಜ್ ತೊರೆದು ಆಟೋ ಓಡಿಸಿ ಬದುಕು ಸಾಗಿಸುತ್ತಿದ್ದ.

ಆಗ ಶಿವಮೊಗ್ಗೆಯಲ್ಲಿ ನಟೋರಿಯಸ್ ರೌಡಿ ಆಗಿದ್ದವನು ತುಳಸಿರಾಮ. ಆಜಾನುಬಾಹುವಾಗಿದ್ದ ತುಳಸಿ ಕೂಡ ಇತರೆ ರೌಡಿಗಳೊಂದಿಗೆ ಬಡಿದಾಡಿ ಹೆಸರು ಮಾಡಿದವನಲ್ಲ. ಬದಲಾಗಿ ಬೆಂಗಳೂರು, ಚಿತ್ರದುರ್ಗ, ಬಳ್ಳಾರಿ, ಬೆಳಗಾವಿ ಕಡೆಯೆಲ್ಲ ಸುತ್ತಾಡಿ ಅಲ್ಲೆಲ್ಲ ಕಳ್ಳತನ, ಹಫ್ತಾ ವಸೂಲಿ, ದರೋಡೆ ಎಂದೆಲ್ಲ ಹತ್ತಾರು ಕೇಸುಗಳನ್ನು ಜಡಿಸಿಕೊಂಡು ಶಿವಮೊಗ್ಗೆಗೆ ಹಿಂದಿರುಗಿದ್ದವನು.

ಶಿವಮೊಗ್ಗೆಗೆ ವಾಪಸ್ ಬಂದನಂತರವೂ ತುಳಸಿ ನೆಟ್ಟಗಾಗಲಿಲ್ಲ. ಇಲ್ಲೂ ಕಳ್ಳತನ, ಸುಲಿಗೆ ಮುಂದುವರೆಸಿದ್ದ. ಅಂತಹ ಹಲವು ಕೇಸುಗಳಲ್ಲಿ ಫಿಟ್ ಆಗಿ ಜೈಲನ್ನೂ ಕಂಡುಬಂದಿದ್ದ. ಆದರೆ 1998ರಲ್ಲಿ ಶಿವಮೊಗ್ಗೆಯ ರೈಲ್ವೆ ಸ್ಟೇಷನ್ ಬಳಿ ಮತ್ತೂರಿನ ಬ್ರಾಹ್ಮಣ ದಂಪತಿಗಳನ್ನು ದರೋಡೆ ಮಾಡಲು ಯತ್ನಿಸಿ ಹೆಂಡತಿಯ ಮುಂದೆಯೇ ಗಂಡ ವೆಂಕಟರಾವ್ ಎಂಬುವವರನ್ನು ಕೊಂದುಹಾಕಿದ್ದ.

ಶಿವಮೊಗ್ಗೆಯನ್ನು ಬೆಚ್ಚಿಬೀಳಿಸಿದ್ದ ಈ ಕೊಲೆಯ ನಂತರ ತುಳಸಿ ಮತ್ತೊಮ್ಮೆ ಜೈಲುಪಾಲಾದ. ಆಗ ಚಿಗುರಿಕೊಂಡವನೇ ತುಳಸಿಯ ತಮ್ಮ ಲೋಕೇಶ್ ಅಲಿಯಾಸ್ ಎ ಒನ್ ಲೋಕಿ. ಅಣ್ಣನ ಕ್ರಿಮಿನಲ್ ಕಸುಬನ್ನು ಮುಂದುವರೆಸಿದ ಲೋಕಿ ಕೂಡ ದೊಡ್ಡಣ್ಣನಂತೆ ಪೊಲೀಸ್ ಠಾಣೆಗಳಲ್ಲಿ ರೌಡಿ ಪಟ್ಟ ಪಡೆದ.

ಅದೇ ಹೊತ್ತಿಗೆ ಮೆಂಟಲ್ ಸೀನ ಎಂಬಾತ ತನ್ನ ಗೆಟಪ್ಪು, ಹರೆಯದ ಹುಚ್ಚು ಹುಮ್ಮಸ್ಸಿನೊಂದಿಗೆ ಸಣ್ಣ ಅಲೆಗಳನ್ನೆಬ್ಬಿಸಲಾರಂಭಿಸಿದ್ದ. ಬೈಕ್‌ಗಳ ಬಗ್ಗೆ ಕ್ರೇಜ್ ಹೊಂದಿದ್ದ ಸೀನ ಒಮ್ಮೆ ಸ್ಪೀಡಾಗಿ ಸಹ್ಯಾದ್ರಿ ಕಾಲೇಜಿನೆದುರು ತನ್ನ ಬೈಕಿನಲ್ಲಿ ಹೋಗುತ್ತಿದ್ದಾಗ ಒಂದು ಆಟೋಗೆ ಡಿಕ್ಕಿ ಹೊಡೆದ. ಆ ಅಪಘಾತದಲ್ಲಿ ಸೀನನ ತಲೆಗೆ 18 ಸ್ಟಿಚ್ ಬಿದ್ದಿದ್ದವು. ಆತನ ಇಂತಹ ಹುಚ್ಚು ಹವ್ಯಾಸಗಳಿಂದಲೇ 'ಮೆಂಟಲ್' ಎಂಬ 'ಪದವಿಯೂ' ಆತನ ಹೆಸರಿನೊಂದಿಗೆ ಬೆಸೆದುಕೊಂಡಿತ್ತು.

ಸಹೋದರರ ಸವಾಲ್

ಶಿವಮೊಗ್ಗೆಯ ಮಹಾವೀರ ಸರ್ಕಲ್ ಹತ್ತಿರವೇ ಎ.ಟಿ.ಎನ್.ಸಿ.ಸಿ. ಎಂಬ ಕಾಲೇಜಿದೆ. ಈ ಕಾಲೇಜಿನ ಎದುರು ತುಳಸಿರಾಮನ ತಮ್ಮ ಲೋಕಿ ಅಡ್ಡೆ ಹಾಕಿದ್ದ. ಈ ಕಾಲೇಜಿಗೆ ಬರುತ್ತಿದ್ದ ಹುಡುಗರಿಂದ ದುಡ್ಡು ಕೀಳುತ್ತಿದ್ದ. ಸೀನನ ತಮ್ಮ ವೆಂಕಟೇಶನೂ ಇದೇ ಕಾಲೇಜಿನ ವಿದ್ಯಾರ್ಥಿಯಾಗಿದ್ದ. ಒಂದು ದಿನ ಲೋಕಿ ವೆಂಕಟೇಶನಿಗೆ ಧಮಕಿ ಹಾಕಿ ಹಣ ವಸೂಲಿ ಮಾಡಲು ಪ್ರಯತ್ನಿಸಿದ್ದ. ಲೋಕಿಯ ಅಣ್ಣ ತುಳಸಿರಾಮನಾಗಿದ್ದರೇನು, ತನ್ನ ಅಣ್ಣ ಸೀನನಿಗೆ 'ಮೆಂಟಲ್' ಎಂಬ 'ಬಿರುದು' ಸಿಕ್ಕಿದೆ ಎಂಬ ಧಿಮಾಕಿನಲ್ಲಿ ವೆಂಕಟೇಶ ಕೂಡ ಲೋಕಿಯ ಧಮಕಿಗೆ ಬೆದರದೆ ಪ್ರತಿಯಾಗಿ ಆವಾಜ್ ಹಾಕಿದ್ದ.

ನಟೋರಿಯಸ್ ರೌಡಿಯಾಗಿದ್ದ ತುಳಸಿರಾಮನ ತಮ್ಮನಾದ ತನಗೇ ಧಮಕಿ ಹಾಕುತ್ತಾನಲ್ಲ ವೆಂಕಟೇಶ ಎಂದು ಕೋಪಗೊಂಡ ಲೋಕಿ ಆ ಯುವಕನಿಗೆ ಎರಡು ಬಿಗಿದು ಅಟ್ಟಿದ. ಸಹಜವಾಗಿಯೇ ಈ ಸುದ್ದಿ ಸೀನನನ್ನು ತಲುಪಿ ಆತ ನಿಜವಾಗಲೂ 'ಮೆಂಟಲ್' ಆದ. ಲೋಕಿಯೊಂದಿಗೆ ಮುಖಾಮುಖಿಯಾದ ಸೀನ ಆತನಿಗೇ ಧಮಕಿ ಹಾಕಿದ. ಈ ಸುದ್ದಿಯೂ ಸಹಜವಾಗಿಯೇ ಜೈಲಿನಲ್ಲಿದ್ದ ತುಳಸಿಯ ಕಿವಿ ತಲುಪಿತು. ಆಗ ಆತ ಜೈಲಿನಿಂದಲೇ ಸೀನನಿಗೆ ಫೋನ್ ಮಾಡಿ ಎಚ್ಚರಿಕೆ ಕೊಟ್ಟ. ಆದರೆ ಸೀನ ಮೊದಲೇ 'ಮೆಂಟಲ್' ಗಿರಾಕಿ. ಆದ್ದರಿಂದ ಆತ ತುಳಸಿಯ ಎಚ್ಚರಿಕೆಗೆ ಸೊಪ್ಪು ಹಾಕಲಿಲ್ಲ.

ಇದು ತುಳಸಿಯನ್ನು ಕೆರಳಿಸಿತು. ಆಗ ತುಳಸಿಯೊಂದಿಗೆ ಜೈಲಿನಲ್ಲಿದ್ದವನು ನಟೋರಿಯಸ್ ರೌಡಿಗಳಾಗಿದ್ದ ಲವ-ಕುಶ ಎಂಬ ಸಹೋದರರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಬಿ ಎಣಿಸುತ್ತಿದ್ದ ಹಂದಿ ಅಣ್ಣಿ. ಹಲವೇ ದಿನಗಳಲ್ಲಿ ಹಂದಿ ಅಣ್ಣಿ ಜೈಲಿನಿಂದ ಬಿಡುಗಡೆ ಹೊಂದುವವನಿದ್ದ. ಅದು ಗೊತ್ತಾಗಿದ್ದೇ ಅಣ್ಣಿಯ ಎದುರು ತುಳಸಿ ಒಂದು ಡೀಲ್ ಇಟ್ಟ. ಅದೇನೆಂದರೆ ಅಣ್ಣಿ ಜೈಲಿನಿಂದ ಹೊರಬೀಳುತ್ತಿದ್ದಂತೆ ಮೆಂಟಲ್ ಸೀನನನ್ನು ಫಿನಿಶ್ ಮಾಡುವುದು. ಶಿವಮೊಗ್ಗೆಯವನೇ ಆದ ಅಣ್ಣಿಗೂ ತನ್ನೆದುರು ಮೆಂಟಲ್ ಸೀನ ಎಂಬ ಹುಡುಗನ ಹವಾ ಹೆಚ್ಚಾಗುವುದು ಬೇಕಿರಲಿಲ್ಲ. ಆ ಕಾರಣಕ್ಕೆ ಸೀನನನ್ನು ಮುಗಿಸಲು ಅಣ್ಣಿ ಒಪ್ಪಿಕೊಂಡ.

ಒಂದು ದಿನ ಗೋಪಿ ಸರ್ಕಲ್ ಬಳಿಯಿರುವ ಹೆಚ್.ಪಿ.ಸಿ. ಟಾಕೀಸಿನಲ್ಲಿ 'ಜಾನಿ ಮೇರಾ ನಾಮ್' ಸಿನಿಮಾ ನೋಡಲು ಸೀನ ಬಂದಿದ್ದಾನೆ ಎಂದು ಅಣ್ಣಿಗೆ ಮಾಹಿತಿ ಸಿಕ್ಕಿತು. ಕೂಡಲೆ ಅಣ್ಣಿ ಒಂದು ಸ್ಕೆಚ್ ರೂಪಿಸಿದ. ತನ್ನ ತಂಡ ಸಿನಿಮಾ ಥಿಯೇಟರ್ ಮೇಲೆ ದಾಳಿ ಇಡುತ್ತಿದ್ದಂತೆ ಸೀನ ತಪ್ಪಿಸಿಕೊಳ್ಳದಂತೆ ಗೇಟ್‌ಗಳನ್ನು ಮುಚ್ಚುವುದೆಂದೂ, ಎಸ್ಕೇಪ್ ಆಗಲು ದಾರಿ ಇಲ್ಲದೆ ಸೀನನನ್ನು ಬಲಿಹಾಕುವುದೆಂದೂ ನಿರ್ಧರಿಸಿದ. ಆದರೆ ಅವತ್ತು ಸೀನನ ನಸೀಬು ಗಟ್ಟಿ ಇತ್ತು.

ಸೀನ ಆಜಾನುಬಾಹು ಅಲ್ಲದಿದ್ದರೂ ಕಟ್ಟುಮಸ್ತಾದ ವ್ಯಕ್ತಿ. ಒಂಟಿಯಾಗಿ ಬಡಿದಾಡುವ ತಾಕತ್ತಿದ್ದವನು. ಎಲ್ಲಕ್ಕಿಂತ ಮುಖ್ಯವಾಗಿ ಅವನ ಕೈಯಲ್ಲಿ ಒಂದು ರೇಜರ್ ಕಾಣಿಸಿಕೊಂಡರೆ ಸಾಕು ಅವನ ಎದುರಾಳಿಗಳೂ ತತ್ತರಿಸುತ್ತಿದ್ದರು. ಅವತ್ತು ಹೆಚ್.ಪಿ.ಸಿ. ಟಾಕೀಸಿನಲ್ಲಾದದ್ದೂ ಅದೇ. ಅಣ್ಣಿಯ ಕಡೆಯವರು ಸೀನನ ಮೈಮೇಲೆ ಬಿದ್ದಾಗ ಸೀನನ ಕೈಲಿದ್ದ ರೇಜರ್ ಝಳಪಿಸಿತು. ಏಳೆಂಟು ಹುಡುಗರು ತನ್ನ ಮೇಲೆ ದಾಳಿ ಮಾಡಿದರೂ ಸೀನ ಅ… ಏಕಾಂಗಿಯಾಗಿಯೇ ಎದುರಿಸಿದ್ದ. ಕೊನೆಗೆ … ಗೋಡೆ ಹಾರಿ ಪರಾರಿ ಆಗಿದ್ದ. ಆ ದಾಳಿಯ … ಸೀನ ಟೋಟಲಿ ಮೆಂಟಲ್ ಆಗಿಬಿಟ್ಟ. ತನ್ನ … ದಾಳಿಯ ಹಿಂದೆ ತುಳಸಿರಾಮನ ಹಿಕಮತ್ತು ಇದೆ … ಗೊತ್ತಾದ ನಂತರವಂತೂ ತುಳಸಿಯನ್ನು ಕೊಂದು… ನಿರ್ಧರಿಸಿದ.

ಇದಾದ ಸ್ವಲ್ಪ ದಿನಗಳ ನಂತರ ತುಳಸಿರಾಮ… ಜೈಲಿನಿಂದ ಹೊರಬಿದ್ದ. ಹಾಗೆ ಹೊರಬಿದ್ದವನೇ ಸೀ… ಮುಗಿಸುವುದಾಗಿ ಶಪಿಸುತ್ತಿದ್ದ. ಸೀನನ ಮೊಬೈಲ್ ಫೋ… ಕರೆ ಮಾಡಿ ಆತನ ಹೆಣ ಉರುಳಿಸುವ ಧಮಕಿ … ಅಷ್ಟೇ ಅಲ್ಲ, ಒಮ್ಮೆ ಸೀನನ ಮನೆಗೆ ನುಗ್ಗಿ ಆತ… ತಡಕಾಡಿದ್ದ. ಹೀಗೆ ತುಳಸಿ ತನ್ನ ಮನೆಯ ಮೇಲೆ … ಮಾಡಲಿದ್ದಾನೆ ಎಂಬ ಸುಳಿವು ಸಿಕ್ಕಿದ್ದ ಸೀನ … ಮುನ್ನವೇ ಜಾಗ ಖಾಲಿ ಮಾಡಿದ್ದ.

ಇದಾದನಂತರ ಸೀನ ಮತ್ತಷ್ಟು ವ್ಯಗ್ರನಾದ. ತುಳ… ಮುಗಿಸಬೇಕೆಂದು ನಿರ್ಧರಿಸಿದ. 2011ರ ಸೆಪ್… 17ರಂದು ಶಿವಮೊಗ್ಗೆಯ ಸವರ್ ಲೇನ್ ರಸ್ತೆಯಲ್ಲಿ… ಬೈಕಿನಲ್ಲಿ ಹೋಗುತ್ತಿದ್ದಾಗ ಸೀನನ ತಂಡ ಆತನ … ಖಾರಾಪುಡಿ ಎರಚಿತು. ತುಳಸಿ ಕಣ್ಣುಜ್ಜಿಕೊಂಡು … ಸುತ್ತ ಏನಾಗುತ್ತಿದೆ ಎಂದು ಅರ್ಥಮಾಡಿಕೊಳ್ಳುವ … ಸೀನ ತನ್ನ ಕೈಯಲ್ಲಿದ್ದ ಲಾಂಗನ್ನು ಬೀಸಿದ. ಅದರ ಹೊ… ತುಳಸಿ ಸ್ಥಳದಲ್ಲಿಯೇ ಹೆಣವಾದ. ತು… ಕೊಲೆಯೊಂದಿಗೆ ಸೀನನೂ ಕುಖ್ಯಾತಿ ಪಡೆದ. ಕುಖ್ಯಾ… ಖ್ಯಾತಿ ಎಂದು ತಿಳಿದಿದ್ದ ಸೀನ "ನನಗೂ ತು… ಕಿರಿಕ್ ಆಗಿತ್ತು, ಅದಕ್ಕೇ ಅವನನ್ನು ಕೊಂದೆ" ಒಂದು ಟಿವಿ ಚಾನೆಲ್ ಮುಂದೆ ಒದರಿದ್ದ.

ಅವತ್ತು ತುಳಸಿಯನ್ನು ಕೊಂದಿದ್ದಕ್ಕೆ … ಪ್ರತೀಕಾರವಾಗಿ ತುಳಸಿಯ ತಮ್ಮ ಲೋಕಿ ಸೀ… ಹಾಡುಹಗಲೇ ದೇವಸ್ಥಾನವೊಂದರಲ್ಲಿ ಮುಗಿಸಿದ…

ಕ್ರಿಮಿನಲ್‌ಗಳ ಲೋಕದಲ್ಲಿ ಒಂದು ಅ… ನಿಯಮವಿದೆ. ಅದೇನೆಂದರೆ ಒಬ್ಬ ಕುಖ್ಯಾತ ರೌ… ಹೆಣ ಬಿದ್ದರೆ ಅದು ಭೂಗತಲೋಕದ ಒಂದು … ಅಂತ್ಯ ಎಂಬುದಲ್ಲ, ಬದಲಾಗಿ ಮುಂದೆ ಯಾರ… ಬೀಳುತ್ತದೆ ಎಂಬ ಇನ್ನೊಂದು ಅಧ್ಯಾಯದ ಪ್ರಾರಂ…

ಆ ಅಲಿಖಿತ ನಿಯಮದ ಪ್ರಕಾರ ಬರುವ ದಿ… ಯಾರ ಹೆಣ ಬೀಳಲಿದೆ ಎಂಬ ಕುತೂಹಲ ಈ… ಶಿವಮೊಗ್ಗೆಯ ಜನರನ್ನು ಕಾಡಲಾರಂಭಿಸಿದೆ.

● ಟಿ.ಎನ್.ಪ…



ಹುಚ್ಚುಹುಡುಗರ ಹುಚ್ಚು ಹೆಸರುಗಳು

ಮೆಂಟಲ್ ಸೀನನ ಕೊಲೆ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು ಈಗ ಪೊಲೀಸರ ಅತಿಥಿಗಳಾಗಿರುವ ಹತ್ತು ಜನರ ವಯಸ್ಸು 18ರಿಂದ 28 ಅಷ್ಟೇ. ಅದಕ್ಕಿಂತಲೂ ಅಚ್ಚರಿ ಮೂಡಿಸುವ ಅಂಶ ಯಾವುದೆಂದರೆ ಸೀನನನ್ನು ಕೊಲೆ ಮಾಡಿರುವವರು ಹೊಂದಿರುವ ವಿಚಿತ್ರ ಅಡ್ಡ ಹೆಸರುಗಳು. ಅವುಗಳಲ್ಲಿ ಹಲವನ್ನು ಇಲ್ಲಿ ನೀಡಿದ್ದೇವೆ:

ಲೋಕೇಶ್ ಯಾನೆ ಎ 1 ಲೋಕಿ (20), ಅಜೇಯ ಯಾನೆ ಕರೆಂಟ್ (19), ಮಂಜುನಾಥ ಯಾನೆ ಒಲಂಗಾ, ದೀಪಕ್ ಯಾನೆ ಡಿಂಗಾ (21), ವಿನಯಾ ಯಾನೆ ಕರಿಯಾ (19), ಪ್ರತಾಪ ಯಾನೆ ಹಾಲು ಮಜ್ಜಿಗೆ (19), ಅಂಕುಶ್ ಯಾನೆ ಅಂಕು, ಚೇತನ್ ಯಾನೆ ಬ್ರಿಟಿಷ್ (20), ಮಾರುತಿ ಯಾನೆ ಹುಲಿ (19), ಗೋಪಾಳದ ಅಣ್ಣಪ್ಪ (19), ಬೊಮ್ಮನಕಟ್ಟೆ ಆಶ್ರಯ ಬಡಾವಣೆಯ ಸಂದೀಪ್ (19) ಹಾಗೂ ಅದೇ ಬಡಾವಣೆಯ ಕಾಂತರಾಜ್ ಅಲಿಯಾಸ್ ಕಾಂತಾ (20) ಬಂಧಿತ ಆರೋಪಿಗಳೆಂದು ಗುರುತಿಸಲಾಗಿದೆ.

ರೌಡಿ ಸಂಗ, ಜೈಲು ಭಂ…

ಮೆಂಟಲ್ ಸೀನನ ಕೊಲೆ ಆರೋಪ ಹೊತ್ತು ಈಗ ಪೊಲೀಸರ ಅತಿಥಿಗಳಾಗಿರುವ ಹತ್ತು ಮಂದಿಯಲ್ಲಿ … ಇನ್ನೂ ಕಾಲೇಜುಗಳಲ್ಲಿ ಓದುತ್ತಿರುವ ಯುವಕರು. ಇವರಿಗೂ ಭೂಗತ ಲೋಕಕ್ಕೂ ಎತ್ತಿಂದೆತ್ತಣ ಸಂಬಂಧ … ನೋಡಿದರೆ ಇವತ್ತು ಬಹಳಷ್ಟು ಚಿಕ್ಕಪುಟ್ಟ ನಗರಗಳಲ್ಲಿ ಯುವಕರು ಕ್ರಿಮಿನಲ್ ಕೃತ್ಯಗಳತ್ತ ಆಕರ್ಷಿತರಾಗುತ್ತಿ… ಗೊತ್ತಾಗುತ್ತದೆ.

ಶಿವಮೊಗ್ಗ ಸೇರಿದಂತೆ ರಾಜ್ಯಾದ್ಯಂತ ನೂರಾರು ನಗರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ಹೊಸ … ಇತ್ತ ತಮ್ಮ ತಂದೆತಾಯಿಯರ ಹೊಲಗಳಲ್ಲಿ ಮೈಬಗ್ಗಿಸಿ ಕೆಲಸ ಮಾಡುವ ಆಸಕ್ತಿಯೂ ಇಲ್ಲ, ಅತ್ತ ಅಪ್ಪ… ಒತ್ತಡ ತಾಳಲಾರದೆ ಕಾಟಾಚಾರಕ್ಕೆಂದು ಅವರು ಪಡೆದ ಪಿಯುಸಿ, ಡಿಗ್ರಿಗಳನ್ನು ಆಧರಿಸಿ ಚೆನ್ನದಾಗ ಕೆ… ಸಿಗೊಲ್ಲ, ಅವರ ಸುತ್ತಮುತ್ತ ನೈತಿಕತೆ, ಆದರ್ಶಗಳನ್ನು ಹೊಂದಿರುವ ಜನರೂ ಇರುವುದಿಲ್ಲ. ಆಗ ಯು… 'ಹೀರೋ'ಗಳಂತೆ ಕಾಣುವುದು ಚಿಕ್ಕಪುಟ್ಟ ರೌಡಿಗಳು. ಒಂದಷ್ಟು ನಟೋರಿಟಿ ಪಡೆದಿರುವವರೊಂದಿಗೆ ಸ… ಇಟ್ಟುಕೊಂಡರೆ ತಮಗೂ ಒಂದಿಷ್ಟು ಕುಖ್ಯಾತಿ ಸಿಗುತ್ತದೆ ಎಂಬ ಆಶೆ ಈ ಯುವಕರದ್ದು.

ಮೆಂಟಲ್ ಸೀನನ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಿರುವ, ಶಿವಮೊಗ್ಗೆಯ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾ… ಅಜೇಯ್‌ಕುಮಾರ್, ವಿನಯ್, ಅಂಕುಶ್ ಹಾಗೂ ಮಾರುತಿ ಅಂತಹ ಮನೋಭಾವದ ಹುಡುಗರು. … ತಮಗೆ ರೌಡಿಗಳ ಪರಿಚಯವಿದೆ ಎಂದು ಕಾಲೇಜಿನಲ್ಲಿ ಹೇಳಿಕೊಂಡು ತಿರುಗಾಡುತ್ತಿದ್ದರು. ಅಷ್ಟೇ ಅಲ್ಲ, ರೌ… ಸಂಪರ್ಕ ಇದ್ದಿದ್ದರಿಂದ ಇತರೆ ವಿದ್ಯಾರ್ಥಿಗಳನ್ನು ಹೆಸರಿಸಿ, ಬೆದರಿಸಿ ಹಣ ಕೀಳುತ್ತಿದ್ದರಲ್ಲದೆ, ತಮ್ಮ ಕಾಲೇಜಿನ… ಒಂದು ತರಹದ ಹಿಡಿತವನ್ನು ಸಾಧಿಸಿದ್ದರು.

"ಪೊಲೀಸರು ಬಂಧಿಸಿರುವವರಲ್ಲಿ ನಾಲ್ವರು ವಿದ್ಯಾರ್ಥಿಗಳು ಇದ್ದಾರೆ. ಅವರು ರೌಡಿಗಳ ಸಹವಾಸ ಮಾಡಿ… ಇವತ್ತು ಜೈಲು ಸೇರಿದ್ದಾರೆ. ಯುವಕರು ಕ್ರಿಮಿನಲ್‌ಗಳೊಂದಿಗೆ ಸ್ನೇಹ ಬೆಳೆಸುವ ಮುನ್ನ ತಮ್ಮ ಭವಿಷ್ಯ… ಯೋಚಿಸಬೇಕು" ಎಂದು ಶಿವಮೊಗ್ಗೆಯ ಎಸ್‌ಪಿ ರಮಣ್ ಗುಪ್ತಾ ಅವರು ಯುವಕರಿಗೆ ಕಿವಿಮಾತು ಹೇ…

ಯುವಕರು ಈ ಬಗ್ಗೆ ನಿಜವಾಗಲೂ ಯೋಚಿಸಬೇಕು.

...ನೆಲಮಂಗಲದ ಕೊಲೆಗಡುಕರಿಗೆ ದುಬೈ ಲಿಂಕ್?

<<<

...ವಿಷಯಕ್ಕೆ ಶಂಕ್ರನ ಶಿಷ್ಯನೊಬ್ಬ ಹನೀಫನ ಕಡೆಯ ...ನನೊಬ್ಬನನ್ನು ಹಿಡಿದುಬಡಿದು ಬಿಟ್ಟ. ಅದನ್ನು ... ಹನೀಫನ ಮೇಲೆ ಶಂಕ್ರ ಜೈಲಲ್ಲೇ ಅಟ್ಯಾಕ್ ...

ಶಿವಮೊಗ್ಗ ಜೈಲಲ್ಲಿ

...ಮ ನೆಲಮಂಗಲದ ಕಿಲ್ಲರ್ ಚಿತ್ತನಗೆರೆ ಶಂಕ್ರ ಮತ್ತು ...ಗ್ಗದ ಪಾತಕಿ ಹನೀಫನ ಜಿದ್ದಾಜಿದ್ದಿಯ ಮೂಲ. ...ರಣಕ್ಕೆ ಚಿತ್ತನಗೆರೆ ಸೀನನಿಗೆ ಹನೀಫ್ ಮತ್ತಾತನ ...ತಮ್ಮಾ ಹತ್ತಿರವಾದರು. ಇಲ್ಲಿಗೆ ವರ್ಷದ ಹಿಂದೆ ...ರ ಸೀನ ನೆಲಮಂಗಲದಿಂದ ಪರಾರಿಯಾಗಿದ್ದಾಗ ... ದಿನಗಳ ಕಾಲ ಶಿವಮೊಗ್ಗ ಮತ್ತು ಭದ್ರಾವತಿ ...ಯಲ್ಲಿ ಓಡಾಡಿಕೊಂಡಿದ್ದನೆಂಬ ಮಾಹಿತಿಯಿತ್ತು. ... ಶಿವಮೊಗ್ಗ ಜೈಲಲ್ಲಿದ್ದ ಹನೀಫನ ತಮ್ಮ ಹಮ್ಜಾನ ...ಯಲ್ಲಿ ಸೀನ ಆಶ್ರಯ ಪಡೆದಿರಬೇಕು. ಹಾಗೇ ...ಗ್ಗದ ಆಸುಪಾಸಿನಲ್ಲಿದ್ದುಕೊಂಡೇ ಜೈಲಲ್ಲಿದ್ದ ಹಮ್ಜಾನ ...ಸಂಪರ್ಕ ಸಾಧಿಸಿ ಭಿನ್ನಮಂಗಲ ಕೃಷ್ಣಪ್ಪನವರ ಹತ್ಯೆಗೆ ... ಕೊಟ್ಟಿರಬೇಕು.

...ಡರ್‌ವರ್ಲ್ಡ್ ಮೂಲಗಳೇ ಹೇಳುವಂತೆ ಸದಾಕಾಲ ...ತ್ತ ಬಂದೂಕುಧಾರಿ ಪೊಲೀಸರನ್ನಿಟ್ಟುಕೊಂಡು ... ತನ್ನ ಬಳಿಯೂ ರಿವಾಲ್ವರ್ ಒಂದನ್ನು ಇಟ್ಟುಕೊಂಡಿ... ಭಿನ್ನಮಂಗಲ ಕೃಷ್ಣಪ್ಪರನ್ನು ತಮ್ಮ ಪ್ರಾಣದ ...ಸೂರೆದು ಮುಗಿಸುವಷ್ಟು ಛಾತಿ ಮತ್ತು ಪರಿಣತಿ ...ಗಲದ ಬಂಡೆ ಮಂಜನಿಗಾಗಲಿ, ಚಿತ್ತನಗೆರೆ ...ಗಲಿ ಇಲ್ಲ. ಅಂಥಾದ್ದೊಂದು ರಣ ಧೈರ್ಯವಿರು... ಕಮ್ಮರಡಿಯ ಕಿಲ್ಲರ್ ಸಹೋದರರಿಗೆ ಮಾತ್ರ!

...ಷ್ಣಪ್ಪರ ಹತ್ಯೆಗೂ 15 ದಿನಗಳ ಮುನ್ನ ಹ್ಯಾಡಾಳು ... ಮಗ ಹರ್ಷ ಕ್ವಾಲೀಸ್ ಗಾಡಿಯೊಂದರಲ್ಲಿ ... ರೂಪಾಯಿಗಳಷ್ಟು ದುಡ್ಡೆತ್ತಿಕೊಂಡು ಹೊರನಾಡು ...ಹೋದ ಬಗ್ಗೆ ಪೊಲೀಸರಿಗೆ ಮಾಹಿತಿಯಿತ್ತು. ಅಲ್ಲಿ ... ಮತ್ತು ಹನೀಫನ ಕಡೆಯ ಹಂತಕರ ಜೊತೆ ...ರೆ ಸೀನ ಕಾರ್ಯತಂತ್ರ ರೂಪಿಸಿಕೊಂಡಿದ್ದನೆ?

...ನ್ನಮಂಗಲದ ಕೃಷ್ಣಪ್ಪರ ಹತ್ಯೆಯಲ್ಲಿ ಕಮ್ಮರಡಿ ...ಸದ್ದಾಗಲಿ ಆತನ ತಮ್ಮ ಹಮ್ಜಾನದ್ದಾಗಲಿ ಪ್ರತ್ಯಕ್ಷ ...ಪಾರಿಕೆಯಿಲ್ಲ ನಿಜ. ಏಕೆಂದರೆ ಆ ಹೊತ್ತಿಗೆ ಹನೀಫ ...ಡ ಜೈಲಲ್ಲಿದ್ದರೆ ಹಮ್ಜಾ ಶಿವಮೊಗ್ಗ ಜೈಲಲ್ಲಿದ್ದ. ...ಪ್ರಶಾಂತ ಗೌಡ ಎಂಬ ಚಿಕ್ಕಮಗಳೂರಿನ ಕಾಫಿ ... ಧಣಿ ಮತ್ತು ರಿಯಲ್ ಎಸ್ಟೇಟ್ ಕುಳನನ್ನು ...ರಿನ ಸಿಸಿಬಿ ಇನ್ಸ್‌ಪೆಕ್ಟರ್ ರಾಮಚಂದ್ರರ ತಂಡ



ಬಸವನಗುಡಿಯ ಅಪಾರ್ಟ್‌ಮೆಂಟ್ ಒಂದರಿಂದ ಬಂಧಿಸಿ ಕರೆದೊಯ್ದು ಭಿನ್ನಮಂಗಲ ಕೃಷ್ಣಪ್ಪ ಹತ್ಯೆಯ ಕೇಸಿನಲ್ಲಿ ಬಾಯಿಬಿಡಿಸಲೆತ್ನಿಸಿದ್ದು ಮಾತ್ರ **once again** ಕಮ್ಮರಡಿ ಸಹೋದರರತ್ತಲೇ ಬೆಟ್ಟು ಮಾಡಿ ತೋರಿಸುತ್ತಿದೆ!

ಪ್ರಶಾಂತ್ ಗೌಡ?

ಇಲ್ಲಿಗೆ ಹದಿನೈದು ದಿನಗಳ ಹಿಂದೆ ಮಾಹಿತಿಯೊಂದನ್ನು ಆಧರಿಸಿದ ಸಿಸಿಬಿ ಪೊಲೀಸರು ಬಸವನಗುಡಿಯ ಅಪಾರ್ಟ್‌ಮೆಂಟ್ ಒಂದಕ್ಕೆ ದಾಳಿಯಿಡುತ್ತಾರೆ. ಅಲ್ಲಿ ಮೂವರ ಪೈಕಿ ಪ್ರಮುಖನೇ ಚಿಕ್ಕಮಗಳೂರಿನ ಪ್ರಶಾಂತ್‌ಗೌಡ. ಒಂದು ಮೂಲದ ಪ್ರಕಾರ ಈತನಿಗೆ ಚಿಕ್ಕಮಗಳೂರಿನಲ್ಲಿದ್ದಾಗ ಕಮ್ಮರಡಿ ಹನೀಫನ ಜೊತೆ ಲಿಂಕಿತ್ತು. ಈತನ ಕಾಫಿ ಎಸ್ಟೇಟಿನಲ್ಲೇ ಒಂದಷ್ಟು ದಿನಗಳ ಕಾಲ ಚಿತ್ತನಗೆರೆ ಸೀನ ಅವಿತುಕೊಂಡಿದ್ದ. ಈತನಿಗೂ ಸೀನನಿಗೂ ಪರಿಚಯ ಕಲ್ಪಿಸಿದ್ದು ಹನೀಫನ ತಮ್ಮ ಹಮ್ಜಾ!

ಪ್ರಶಾಂತ್ ಗೌಡನ ಜೊತೆಗೂಡಿ ಸಿಕ್ಕಿಬಿದ್ದ ಇನ್ನೂ ಇಬ್ಬರೆಂದರೆ ಬಿಡದಿ ಸಮೀಪದ ಮಧು ಮತ್ತು ನವೀನ. ಇವರ ಪೈಕಿ ನವೀನ ಬಂಡೆ ಮಂಜನ ಪತ್ನಿ ಕಡೆಯ ಸಂಬಂಧಿ. ಇವರಿಬ್ಬರಿಗೆ ಕಾರುಗಳನ್ನು ಒದಗಿಸಿಕೊಟ್ಟವನು ರಾಮನಗರದ ಜೆಡಿಎಸ್ ನಾಯಕ ಸುರೇಶ. ಈತ ಮಾಜಿ ಪಂಚಾಯ್ತಿ ಮೆಂಬರ್. ತನ್ನ ಚೇಲಾಗಳಾದ ರಮೇಶ ಮತ್ತು ನಾರಾಯಣ ಎಂಬಿಬ್ಬರಿಂದ ಒಂದು ಇನ್ನೋವಾ ಮತ್ತೊಂದು ಸಿಯಲೋ ಕಾರನ್ನು ಈಸಿಕೊಂಡು ಅದನ್ನು ಬೆಮೆಲ್ ಹತ್ಯೆಗೆಂದೇ ಪ್ರಶಾಂತ್ ಗೌಡನ ಪಡೆಗೆ ಸುರೇಶ ಒದಗಿಸಿಕೊಟ್ಟಿದ್ದ.

ಹೀಗೆ ಬಿಡದಿ-ರಾಮನಗರದ ಬಿಲ್ಲಕೆಂಪನಹಳ್ಳಿಯ ಮಧು ಮತ್ತು ನವೀನ ಜೊತೆಗೆ ಮಾಜಿ ಪಂಚಾಯ್ತಿ ಸದಸ್ಯ ಸುರೇಶ ಇತ್ಯಾದಿಗಳಿಗೂ ದೂರದ ಚಿಕ್ಕಮಗಳೂರಿನ ಪ್ರಶಾಂತ್ ಗೌಡನಿಗೂ ಎಲ್ಲಿಂದೆಲ್ಲಿಯ ಸಂಬಂಧ? ಪ್ರಶಾಂತ್ ಗೌಡನನ್ನು ಇವರಿಗೆ ಚಿತ್ತನಗೆರೆ ಸೀನ ತಾನೇ ಪರಿಚಯಿಸಿ ಕೊಡಬೇಕು? ಮತ್ತು ಚಿತ್ತನಗೆರೆ ಸೀನನಿಗೆ ಪ್ರಶಾಂತ್ ಗೌಡನನ್ನು ಕಮ್ಮರಡಿ ಸಹೋದರರಲ್ಲದೆ ಬೇರೆ ಯಾರು ಪರಿಚಯಿಸಲು ಸಾಧ್ಯ?

ಸದ್ಯ ನೆಲಮಂಗಲದ ತುಂಬ ಹಂತಕರಾದ ಸೀನ, ಮಂಜ, ಹಾಡ್ಯಾಳು ಹರ್ಷ, ವೆಂಕಟೇಶ್ ಅಲಿಯಾಸ್ ಅಂಟಿ ಮತ್ತು ಶಿವು ಅಲಿಯಾಸ್ ಕರಿಯರ ಫೋಟೋಗಳಿರುವ ಫ್ಲೆಕ್ಸ್-ಬ್ಯಾನರುಗಳನ್ನು ಪೊಲೀಸರು ಹಾಕಿದ್ದಾರೆ. ಇವರ ಬಗ್ಗೆ ಯಾರೇ ಮಾಹಿತಿ ಕೊಟ್ಟರೂ ಅಂಥವರಿಗೆ ಸೂಕ್ತ ಬಹುಮಾನವನ್ನು ಘೋಷಿಸಿದ್ದಾರೆ. ತನಿಖೆಯ ನೇತೃತ್ವ ವಹಿಸಿರುವ ಅಡಿಷನಲ್ ಎಸ್ಪಿ ಎಸ್. ನಾಗರಾಜ್ ಬೆಂಗಳೂರು ಕಂಡ ಡೈನಾಮಿಕ್ ಪೊಲೀಸ್ ಇನ್ಸ್‌ಪೆಕ್ಟರುಗಳ ಪೈಕಿ ಪ್ರಮುಖರು. ಆ ಕಾಲಕ್ಕೇ ಘಟಾನುಘಟಿ ರೌಡಿಗಳನ್ನೆಲ್ಲ ಎಳೆದೊಯ್ದು ಹಗ್ಗ ಹಾಕಿದವರು. ಬದುಕಿಯವರ ಜೊತೆ ವೀರಪ್ಪನ್ ಕಾರ್ಯಾಚರಣೆಗೆ ನಿಂತು ವರ್ಷಗಟ್ಟಲೇ ಕಾಡುಮೇಡು ಅಲೆದ ನಾಗರಾಜ್ ಇಲ್ಲದಿದ್ದರೆ ವೀರಪ್ಪನ್ ತಂಡದ ಸಂಖ್ಯೆ ನೂರರಿಂದ ಮೂರಕ್ಕೆ ಇಳಿಯುತ್ತಿರಲಿಲ್ಲ.

ಕೇರಳದಲ್ಲಿ...!

ಇಂಥ ಖಡಕ್ ಅಧಿಕಾರಿ ನಾಗರಾಜ್ ಈಗ ಅಡಿಷನಲ್ ಎಸ್ಪಿಯಾಗಿ ಸೀನ ಮತ್ತು ಬಂಡೆ ಮಂಜರ ಬೇಟೆಗೆ ನಿಂತಿದ್ದಾರೆಂದರೆ ಅದು ಯಾರಾದರೂ ಒಬ್ಬ ಪಾತಕಿಯ ಹೆಣ ಬೀಳುತ್ತದೆ ಎಂದೇ ಅರ್ಥ. ಈ ನಿಟ್ಟಿನಲ್ಲಿ ಚಿಕ್ಕಮಗಳೂರಿನ ಕಾಫಿ ಧಣಿ ಪ್ರಶಾಂತ್ ಗೌಡ ಬೆಂಗಳೂರಿನ ಬಸವನಗುಡಿಯ ಅಪಾರ್ಟ್‌ಮೆಂಟಿನಲ್ಲಿ ಸಿಕ್ಕಿಬಿದ್ದಿರುವುದು ಇಡೀ ತನಿಖೆಗೊಂದು ಹೊಸ ಆಯಾಮವನ್ನೇ ಕಲ್ಪಿಸಿದೆ.

ಇತ್ತ ಪ್ರಶಾಂತ್ ಗೌಡ ಬೆಂಗಳೂರಿನಲ್ಲಿ ಬಲೆಗೆ ಬೀಳುವುದಕ್ಕೂ ಅತ್ತ ಧಾರವಾಡ ಜೈಲಿನಿಂದ ಹನೀಫ ಎಸ್ಕೇಪಾಗುವುದಕ್ಕೂ ಸಂಬಂಧವಿದೆಯೆ? ಹಾಗೆ ನೋಡಿದರೆ ಧಾರವಾಡ ಜೈಲಿಂದ ಎಸ್ಕೇಪಾದ ಹನೀಫನಿಗೆ ಗೋವಾ ಹತ್ತಿರವಿತ್ತು. ಆ ಮೂಲಕ ಮುಂಬಯಿಯಲ್ಲೂ ಆತನಿಗೆ ಲಿಂಕುಗಳಿದ್ದವು. ಆದರೆ ಹನೀಫ ಅದಕ್ಕೆ ವ್ಯತಿರಿಕ್ತವಾಗಿ ಉಡುಪಿ-ಮಂಗಳೂರಿನ ಹಾದಿ ಹಿಡಿಯುತ್ತಾನೆಂದರೆ ಆತನ ಗುರಿ ಕೇರಳ ಸೇರಿಕೊಳ್ಳುವುದಾ? ಕೇರಳದಲ್ಲಿ ನಕಲಿ ಪಾಸ್‌ಪೋರ್ಟ್ ಬಳಸಿ ದುಬೈಗೆ ಹಾರುವುದು ಆತನ ಉದ್ದೇಶವಾಗಿತ್ತಾ? ಈಗಾಗಲೇ ದುಬೈನಲ್ಲಿರುವ ಹೆಬ್ಬಟ್ಟು



ಬಂಡೆ ಮಂಜ ಸುನೀಲ್ ಮೇಟಿ

ಮಂಜನ ಜೊತೆ ಸೇರಿಕೊಳ್ಳಲು ಹನೀಫ ಲೆಕ್ಕ ಹಾಕಿದ್ದನೆ?

ಹಾಗಿದ್ದರೆ ಆತ ಕೇರಳಕ್ಕೇ ಏಕೆ ಬರಬೇಕು? ಅದರರ್ಥ ನೆಲಮಂಗಲದ ಹಂತಕರಾದ ಸೀನ ಮತ್ತು ಬಂಡೆ ಮಂಜ ಸದ್ಯ ಕೇರಳದಲ್ಲಿ ತಲೆಮರೆಸಿಕೊಂಡಿದ್ದಾರಾ? ಹನೀಫನ ಜೊತೆಗೂಡಿ ದುಬೈಗೆ ಹಾರುವುದು ನೆಲಮಂಗಲದ ಹಂತಕರ ಹುನ್ನಾರವೆ? ಈ ಬಗ್ಗೆ ಭಟ್ಕಳದ ಪೊಲೀಸರು ಸರಿಯಾಗಿ ಬಾಯಿ ಬಿಡಿಸಿದಂತಿಲ್ಲ. ಕನಿಷ್ಠ ಅಡಿಷನಲ್ ಎಸ್ಪಿ ನಾಗರಾಜ್ ಆದರೂ ಬಾಯಿಬಿಡಿಸಬೇಕಲ್ಲವೆ?

● ರಾ.ಸೋಮನಾಥ್

...ಧಾರವಾಡ ಜಿಲ್ಲೆಗೆ ಮತ್ತೊಂದು ಗೂಟದ ಕಾರು

...ಮುಖ್ಯಮಂತ್ರಿಯಾಗಿ ಜಗದೀಶ್ ಶೆಟ್ಟರ್ ...ಕಾರ ಸ್ವೀಕರಿಸಿದ ಸಂದರ್ಭದಲ್ಲಿ ಧಾರವಾಡ ಜಿಲ್ಲೆಗೆ ...ರೆಯಬಹುದಾಗಿದ್ದ ಮತ್ತೊಂದು ಗೂಟದ ಕಾರಿಗೆ ...ಕ್ ಹಾಕಿದ್ದರು. ತಮ್ಮದೇ ಕುರ್ಚಿ ಗಟ್ಟಿಯಾದ ...ರ ಮತ್ತೊಬ್ಬರ ಬಗ್ಗೆ ಸದಾ ಯೋಚಿಸುವ ಶೆಟ್ಟರ್‌ಗೆ ...ಗ ಯಾವುದೇ ಕಂಟಕಗಳು ಕಾಣದ ಕಾರಣ ಧಾರವಾಡ ...ಗೆ ಮತ್ತೊಂದು ಗೂಟದ ಕಾರಿಗೆ ಹಸಿರು ನಿಶಾನೆ ...ರಿದ್ದಾರೆ. ಅದರ ಮೂಲಕ ಮತ್ತೊಮ್ಮೆ ...ನಸೌಧಕ್ಕೆ ಲಿಂಗಧಾರಣೆ ಮಾಡಿದಂತಾಗಿದೆ.





...ಹಿಂದಿನ ಸರಕಾರಗಳಲ್ಲಿ ಕಾಣದ ಚಮತ್ಕಾರಗಳು ...ಟ್ಟರ್ ಸರಕಾರದಲ್ಲಿ ಜರುಗಿವೆ. ಮೊದಲ ಬಾರಿಗೆ ...ದಲ್ಲಿ ಎರಡು ಡಿಸಿಎಂ ಹುದ್ದೆಗಳು ಸೃಷ್ಟಿಯಾಗಿವೆ. ...ತ್ತವಲ್ಲ, ಅವರಿಬ್ಬರಿಗೂ ಎರಡೆರಡು ಖಾತೆಗಳನ್ನು ...ಪಾಲಿಸಲಾಗಿದೆ. ಇದು ಸಾಲದೆಂಬಂತೆ ಈಗ ...ರ್ ಇಬ್ಬಬ್ಬರನ್ನು ತಮ್ಮ ರಾಜಕೀಯ ...ರ್ಯದರ್ಶಿಗಳನ್ನಾಗಿ ನೇಮಕ ಮಾಡಿಕೊಂಡಿದ್ದಾರೆ.

...ಡಿಯೂರಪ್ಪ ಮತ್ತು ಸದಾನಂದ ಗೌಡ ಟೂಬಿಟ್ಟು ಹಾದಿರಂಪಬೀದಿರಂಪ ...ರಿಕೊಂಡಾಗ ತಾನು ಮುಖ್ಯಮಂತ್ರಿ ಆಗದಿದ್ದರೂ ತನ್ನ ಮುಂದೆ ಕೋಲೆ ...ಬಸವನಂತೆ ತಲೆ ಆಡಿಸುವ ಶೆಟ್ಟರ್‌ರನ್ನು ಯಡ್ಡಿ ಮುಂದೆಬಿಟ್ಟರು. ಶೆಟ್ಟರ್ ...ಮೂಲಕ ಮತ್ತೊಮ್ಮೆ ವಿಧಾನಸೌಧಕ್ಕೆ ಲಿಂಗಧಾರಣೆ ಮಾಡಿಸಲು ಯಡ್ಡಿ ...ದಲ್ಲಿದ್ದ ಭರ್ಜರಿ ಆದಾಯ ತರುವ ಇಲಾಖೆಗಳು ತನ್ನ ...ಂಗೋಚಿಗಳಾದ ಬಸವರಾಜು ಬೊಮ್ಮಾಯಿ, ಮುರುಗೇಶ್ ನಿರಾಣಿ, ...ಂಥ ತರಹದ ಲಿಂಗವಂತರಿಗೇ ಸಿಗಬೇಕೆಂದು ಹಟಹಿಡಿದರು.

...ನೂತನ ಸಚಿವ ಸಂಪುಟದಲ್ಲಿ ಯಾರು ಇರಬೇಕು, ಯಾರು ಇರಬಾರದು ...ಚೌಕಾಸಿ ನಡೆಯುತ್ತಿದ್ದಾಗ ಶೆಟ್ಟರ್ ಹಾಗೂ ಅನಂತಕುಮಾರ ಮಧ್ಯೆ ...ಗಳ ಸಾರಥಿಯಾಗಿ ತೆರೆಮರೆಯಲ್ಲಿ ಕೆಲಸ ಮಾಡಿದ್ದು ನವಲಗುಂದದ ...ಶಂಕರ ಪಾಟೀಲ ಮುನೇನಕೊಪ್ಪ. ಈ ನೆರವಿಗೆ ಪ್ರತಿಫಲದೆಂಬಂತೆ ...ಮೊದಲಿಗೆ ಒಮ್ಮೆ ಮಂತ್ರಿಗಳ ಪಟ್ಟಿಯಲ್ಲಿ ಮುನೇನಕೊಪ್ಪನ ಹೆಸರನ್ನು ಸೇರಿಸಿದ್ದರು. ಆದರೆ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡು ಬುಸುಗುಡುತ್ತಿದ್ದ ಸದಾನಂದ ಗೌಡ "ಈಗಾಗಲೇ ಸಾಕಷ್ಟು ಲಿಂಗಾಯತರು ಸಚಿವರ ಪಟ್ಟಿಯಲ್ಲಿದ್ದಾರೆ. ಅದರಲ್ಲೂ ಲಿಂಗಾಯತ ಸಮುದಾಯದಲ್ಲಿ ಪ್ರಬಲವಾದ ಪಂಚಮಸಾಲಿ ಜನಾಂಗದ ಮುರುಗೇಶ ನಿರಾಣಿಗೆ ಮಂತ್ರಿ ಪದವಿ ನೀಡಿದ್ದು ಸಾಕು. ಹೆಚ್ಚಿನ ಲಿಂಗಾಯತರಿಗೆ ಗೂಟದ ಕಾರು ಕೊಡುವುದು ಬೇಡ" ಎಂದು ವಾದಿಸಿದರು. ಜೊತೆಗೆ ಬ್ಲೂಫಿಲಂ ಕುಖ್ಯಾತಿಯ ಸಿ.ಸಿ.ಪಾಟೀಲ್‌ಗೆ ಯಾವುದೇ ಕಾರಣಕ್ಕೂ ಮಂತ್ರಿ ಸ್ಥಾನ ನೀಡಬಾರದು ಎಂದು ಪಟ್ಟು ಹಿಡಿದರು. ಹಾಗಾದರೆ ಗದಗ ಜಿಲ್ಲೆಯ ಪ್ರಾತಿನಿಧ್ಯವನ್ನು ಯಾರಿಗೆ ನೀಡಬೇಕು ಎಂಬ ಪ್ರಶ್ನೆ ಉದ್ಭವಿಸಿತು. ಕೊನೆಗೆ ಪಂಚಮಸಾಲಿ ಜನಾಂಗದ ಹಾಗೂ ಹಳೇ ಶಾಸಕನಾದ ಕಳಕಪ್ಪ ಬಂಡಿ ಹೆಸರು ಸಚಿವರ ಪಟ್ಟಿಯಲ್ಲಿ ಸೇರ್ಪಡೆಗೊಂಡು ಶಂಕರ ಪಾಟೀಲ ಮುನೇನಕೊಪ್ಪ ಹೆಸರು ಬಿದ್ದು ಹೋಯಿತು.

ಶೆಟ್ಟರ್‌ಗೆ ತಾನು ಮುಖ್ಯಮಂತ್ರಿ ಆಗಲು ತೆರೆಮರೆಯಲ್ಲಿ ನೆರವು ನೀಡಿದ ಮುನೇನಕೊಪ್ಪನಿಗೆ ಗೂಟದ ಕಾರು ಕೊಡಲಾಗಲಿಲ್ಲವಲ್ಲ ಎಂಬ ಬೇಸರ ಒಂದೆಡೆಯಾದರೆ, ಇನ್ನೊಂದೆಡೆ ಬಸು ಬೊಮ್ಮಾಯಿಯನ್ನು ಹಣಿಯಲು ಮತ್ತೊಬ್ಬ ಪಂಚಮಸಾಲಿ ಲಿಂಗಾಯತನನ್ನು ಬೆಳೆಸುವ ಆಸೆಯೂ ಇತ್ತು. ಹೇಗಾದರೂ ಮಾಡಿ ಮುನೇನಕೊಪ್ಪನಿಗೆ ಯಾವುದಾದರೂ ಸಂಪುಟ ದರ್ಜೆಯ ಸ್ಥಾನಮಾನ ನೀಡಿದರೆ ಇತ್ತ ಉತ್ತರ ಕರ್ನಾಟಕದ ಲಿಂಗಾಯತರ ಓಟ್ ಬ್ಯಾಂಕ್ ಭದ್ರವಾಗಿಯೂ ಇರುತ್ತೆ, ಅತ್ತ ಆ ಪ್ರದೇಶದಲ್ಲಿ ಬಸು ಬೊಮ್ಮಾಯಿಯ ಪ್ರಾಬಲ್ಯ ಕುಗ್ಗಿಸಲೂ ನೆರವಾಗುತ್ತೆ ಎಂಬ ಲೆಕ್ಕಾಚಾರದಲ್ಲಿ ಶೆಟ್ಟರ್ ತೊಡಗಿದರು.





ಈ ಮಧ್ಯೆ ಶೆಟ್ಟರ್ ವಿರುದ್ಧ ಆಗಾಗ್ಗೆ ಸಿಡಿಮಿಡಿಗೊಳ್ಳುತ್ತಿದ್ದ 12 ಬಿಜೆಪಿ ಶಾಸಕರ ಗುಂಪಿನಲ್ಲಿ ದೊಡ್ಡ ತಲೆನೋವಾಗಿದ್ದವನು ಶಿವನಗೌಡ ನಾಯಕ. ಒಂದೆಡೆ ಈತನನ್ನು ಸಮಾಧಾನ ಮಾಡುವುದೂ ಮುಖ್ಯವಾಗಿತ್ತು ಇನ್ನೊಂದೆಡೆ ನಾಯಕ ಜನಾಂಗದಲ್ಲಿ ಶ್ರೀರಾಮುಲುಗೆ ಪರ್ಯಾಯವಾಗಿ ಮತ್ತೊಬ್ಬರನ್ನು ಬೆಳೆಸುವ ಅಗತ್ಯವೂ ಇತ್ತು. ಪ್ರಬಲ ಕೋಮಿನ ನಾಯಕ ಜನಾಂಗವನ್ನು ಬಿಜೆಪಿಯ ತೆಕ್ಕೆಯಲ್ಲಿ ಉಳಿಸಿಕೊಳ್ಳಬೇಕಾದರೆ ಶಿವನಗೌಡ ನಾಯಕನಿಗೆ ಸಚಿವ ದರ್ಜೆಯ ಸ್ಥಾನಮಾನ ನೀಡುವುದು ಬೆಡ್ಡಿಗಳಿಗೂ ಬೇಕಾಗಿತ್ತು.

ಆಗ ಶೆಟ್ಟರ್ ಅವರಿಗೆ ಹೊಳೆದದ್ದೇ ಸಂಪುಟ ದರ್ಜೆಯ ರಾಜಕೀಯ ಕಾರ್ಯದರ್ಶಿಯ ಹುದ್ದೆ. ಎರಡು ಹಕ್ಕಿಗಳನ್ನು ಒಂದೇ ಕಲ್ಲಿನಲ್ಲಿ ಹೊಡೆಯುವ ಉದ್ದೇಶದಿಂದ ಶೆಟ್ಟರ್ ಈಗ ಶಂಕರ ಪಾಟೀಲ ಮುನೇನಕೊಪ್ಪ ಹಾಗು ಶಿವನಗೌಡ ನಾಯಕ ಇಬ್ಬರನ್ನೂ ಆ ಹುದ್ದೆಗೆ ಆಯ್ಕೆ ಮಾಡಿಕೊಂಡಿದ್ದಾರೆ.

ರಾಜಕೀಯ ಕಾರ್ಯದರ್ಶಿ ಹುದ್ದೆ ಸಿಕ್ಕಿದ್ದೇ ತಡ ಮುನೇನಕೊಪ್ಪ ಮತ್ತು ಶಿವನಗೌಡ ನಾಯಕ ಇಬ್ಬರೂ ಪೊಲೀಸ್ ಅಧಿಕಾರಿಗಳ ಬದಲಾವಣೆ, ಆಫೀಸರ್‌ಗಳ ವರ್ಗಾವಣೆ ಎಂದೆಲ್ಲ 'ಭೋಜನ' ಪ್ರಾರಂಭಿಸಿದ್ದಾರೆ.

ಮುಖ್ಯಮಂತ್ರಿ ಶೆಟ್ಟರ್ ತಮ್ಮ ಆಡಳಿತದಲ್ಲಿ ಒಂದೊಂದು ಹುದ್ದೆಗೆ ಇಬ್ಬಿಬ್ಬರನ್ನು ನೇಮಿಸುವ ಮೂಲಕ "ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು" ಎಂಬ ಪಾಲಿಸಿಯನ್ನು ಜಾರಿಗೆ ತಂದಂತಿದೆ.


● ಹುಬ್ಬಳ್ಳಿಯಾಂವ

ಅಸಹಾಯಕ ವಲಸಿಗರು ಮತ್ತು ಬಿಜೆಪಿಯ ನೀಚತನ

ಒಂದು ಪತ್ರ

ಭಯದ ಸಮೂಹ ಸನ್ನಿಗೆ ಒಳಗಾಗಿ ಬೆಂಗಳೂರಿನಿಂದ ತಮ್ಮ ಹುಟ್ಟೂರಿಗೆ ಮರಳಿದ ಅಸ್ಸಾಂನ ವಲಸಿಗರ ಬಗ್ಗೆ ಕಳೆದವಾರದ ಸಂಚಿಕೆಯಲ್ಲಿ ಪ್ರಕಟವಾದ ಗೌರಿ ಲಂಕೇಶ್ ಬರಹಕ್ಕೆ ಪ್ರತಿಕ್ರಿಯೆಯಾಗಿ ಕೆಳಗಿನ ಎರಡು ನಿರೂಪಣೆಗಳನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ.

"... ಬೆಂಗಳೂರಿನಿಂದ ಅಸ್ಸಾಂ ರಾಜಧಾನಿ ಗೌಹಾಟಿಗೆ ರಾತ್ರಿ 8 ಹಾಗೂ 11 ಗಂಟೆಗೆ ಎರಡು ರೈಲುಗಳು ಮೆಜೆಸ್ಟಿಕ್‌ನಿಂದ ಪ್ರಯಾಣ ಬೆಳೆಸಿದ್ದು ಇದರಲ್ಲಿ ಸುಮಾರು 5 ಸಾವಿರ ಜನರು ಟಿಕೆಟ್ ಖರೀದಿಸಿದ್ದಾರೆ ಎಂದು ಪೊಲೀಸರು ತಿಳಿಸಿದರು.



ತವರು ರಾಜ್ಯಗಳಿಗೆ ಹೊರಟವರಿಗೆ ಸಿಟಿ ರೈಲ್ವೆ ನಿಲ್ದಾಣದಲ್ಲಿ ಹಿಂದೂ ಜಾಗರಣಾ ವೇದಿಕೆ, ಎಬಿವಿಪಿ, ಆರ್.ಎಸ್.ಎಸ್. ಸೇರಿದಂತೆ ಸಂಘ ಪರಿವಾರದ ಸಂಘಟನೆಗಳು ಊಟೋಪಚಾರದ ವ್ಯವಸ್ಥೆ ಮಾಡಿದ್ದವು.

ಅಲ್ಲದೆ ಹಿಂದೂ ಜಾಗರಣಾ ವೇದಿಕೆಯ ರಾಜ್ಯ ಸಂಚಾಲಕ ಜಗದೀಶ್ ಕಾರಂತ್.... ಮತ್ತಿತರರು ವಲಸಿಗರಲ್ಲಿ ಮೂಡಿರುವ ಜೀವಭಯದ ಆತಂಕವನ್ನು ದೂರಮಾಡುವ ನಿಟ್ಟಿನಲ್ಲಿ ಸಮಾಲೋಚನೆ ನಡೆಸಿದರು."


(ಉದಯವಾಣಿ, ಮಣಿಪಾಲ ಆವೃತ್ತಿ, ತಾ: 17-08-2012, ಪುಟ 7).

"ಗಲಭೆಕೋರರು ರೈಲನ್ನು ತಡೆದು ನಿಲ್ಲಿಸಿ, ಅದರಲ್ಲಿ ಪ್ರಯಾಣ ಮಾಡುತ್ತಿದ್ದವರ ಪೈಕಿ ಮತ್ತೊಂದು ಧರ್ಮಕ್ಕೆ ಸೇರಿದ ಎಲ್ಲರನ್ನೂ ಹುಡುಕಿ ಹುಡುಕಿ ಕೊಂದು ಹಾಕಿದರು. ಆ ಕೆಲಸ ಮುಗಿದ ಮೇಲೆ ಅವರು ಉಳಿದ ಪ್ರಯಾಣಿಕರಿಗೆ ಹಾಲು ಹಣ್ಣು ಹಂಚಿದರು.

ರೈಲು ಹೊರಡಲು ಸಿದ್ಧವಾಗುತ್ತಿದ್ದಂತೆ ಕೊಲೆಗಾರರ ತಂಡದ ನಾಯಕ, ಪ್ರಯಾಣಿಕರಿಗೆ ಒಂದು ಪುಟ್ಟ ಬೀಳ್ಕೊಡುಗೆ ಭಾಷಣ ಮಾಡಿದ, "ಆತ್ಮೀಯ ಬಂಧುಭಗಿನಿಯರೆ, ನಿಮ್ಮ ರೈಲು ಇಲ್ಲಿಗೆ ಎಷ್ಟು ಹೊತ್ತಿಗೆ ಬರುತ್ತದೆ ಎಂದು ನಮಗೆ ಸರಿಯಾಗಿ ಗೊತ್ತಿರಲಿಲ್ಲ, ಹಾಗಾಗಿ ನಿಮಗೆ ಹೆಚ್ಚಿಗೆ ಏನೂ ಕೊಡಲು ಸಾಧ್ಯವಾಗಿರಲಿಲ್ಲ, ಆದರೆ ನಿಮ್ಮನ್ನು ಇನ್ನೂ ಚೆನ್ನಾಗಿ ಸತ್ಕರಿಸಬೇಕು ಎಂಬುದು ನಮ್ಮ ಆಶೆಯಾಗಿತ್ತು..."

ಮೇಲಿನ ಎರಡು ಉದ್ಧೃತಗಳಲ್ಲಿ ಮೊದಲನೆಯದ್ದು ವಾಸ್ತವ ಘಟನೆಯೊಂದನ್ನು ಕುರಿತ ಪತ್ರಿಕಾ ವರದಿ; ಎರಡನೆಯದ್ದು ಲೋಕಖ್ಯಾತ ಕತೆಗಾರ ಸಾದತ್ ಹಸನ್ ಮಾಂಟೋನ ಕತೆಯೊಂದರ ಅನುವಾದ. 47ರ ಸ್ವಾತಂತ್ರ್ಯ ತನ್ನೊಟ್ಟಿಗೆ ತಂದ ದೇಶವಿಭಜನೆಯ ಕೋಮುಹಿಂಸೆ ಈ ಕತೆಗೆ ವಸ್ತು ಮತ್ತು ಸಂದರ್ಭ ಎರಡೂ ಆಗಿದೆ. ಕಲೆ ಬದುಕಿನ ವಾಸ್ತವವನ್ನು ಅನುಕರಿಸುತ್ತದೆ ಅಥವಾ ಅನುಕರಿಸಬೇಕು ಎಂಬ ವಾದವೊಂದಿದೆ. ಮೇಲಿನ ಎರಡು ಉದ್ಧೃತಗಳಲ್ಲಿ ಅದು ತಿರುವುಮುರುವಾಗಿದೆ. ಅಸ್ಸಾಂ ವಲಸಿಗರು ಬೆಂಗಳೂರು ತೊರೆಯುತ್ತಿರುವ ವಾಸ್ತವ ವಿದ್ಯಮಾನ ಕುರಿತ [illegible] ವರದಿಯಲ್ಲಿ ಮಾಂಟೋ ಕತೆಗಿಂತಲೂ ಹೆಚ್ಚು ವ್ಯಂಗ್ಯವಿದೆ. 47ರ ಕೋಮುಹಿಂಸೆ ಕುರಿತ ತನ್ನ ಇತರ ಹಲವು ಕತೆಗಳಲ್ಲಿ ಹೇಗೋ ಹಾಗೆ ಈ ಕತೆಯಲ್ಲೂ ಮಾಂಟೋ ಎರಡು ಸಮುದಾಯಗಳ ಮುಖಾಮುಖಿಯನ್ನು ವರ್ಣಿಸುತ್ತಾನೆ; ಅದರ ಹಿಂಸೆಯನ್ನೂ ಯಥಾವತ್ತಾಗಿ ನಿರೂಪಿಸುತ್ತಾನೆ. ಆದರೆ ಹಿಂಸೆ ಎಸಗಿದವರು ಯಾವ ಧರ್ಮಕ್ಕೆ ಸೇರಿದವರು, ಹಿಂಸೆಗೆ ಬಲಿಯಾದವರು ಯಾವ ಧರ್ಮದವರು ಎಂದು ಹೇಳುವುದಿಲ್ಲ. ಆ ದಿನಗಳಲ್ಲಿ ಹಿಂದೂಗಳು ಮತ್ತು ಸಿಖ್ಖರು ಹಾಗೂ ಅವರಿಗೆ ಪ್ರತಿಯಾಗಿ ಮುಸ್ಲಿಮರು ಪರಸ್ಪರರನ್ನು ಸಮಾನವಾಗಿ ಹಿಂಸೆಗೆ ಒಳಪಡಿಸುತ್ತಿದ್ದರು; ತಾವೂ ಹಿಂಸೆಗೆ ಬಲಿಯಾಗುತ್ತಿದ್ದರು. ಶಬ್ದಗಳಿಗೆ ಮೀರಿದ ಹಿಂಸೆಯೊಂದೇ ಆ ಸನ್ನಿವೇಶದ ಸತ್ಯವಾಗಿತ್ತು. ಆದರೆ ಮತಾಂಧರು ಮಾತ್ರ ಆ ಹಿಂಸೆಗೆ ಮತ ಧರ್ಮಗಳ ಲೇಬಲ್ಲು ಹಚ್ಚುವ ಕೆಲಸದಲ್ಲಿ ನಿರತರಾಗಿದ್ದರು. ಮಾಂಟೋ ತನ್ನ ಕತೆಗಳಲ್ಲಿ ಕಾಣಿಸಿದ್ದು ಇದನ್ನೇ.


ಆದರೆ ಇದಕ್ಕೆ ವ್ಯತಿರಿಕ್ತವಾಗಿ 47ರಿಂದ ಈಚೆಗೆ ಸಂಘಪರಿವಾರ ನಿರಂತರವಾಗಿ ಮುಸ್ಲಿಮ್ ಸಮುದಾಯದ ವಿರುದ್ಧ ಹಿಂಸೆ ನಡೆಸುವುದರ ಜೊತೆಗೆ ಆ ಸಮುದಾಯವನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಇತ್ತೀಚಿಗಿನ ವರ್ಷಗಳಲ್ಲಿ ಅದು ತನ್ನ ಈ ದ್ವೇಷದ ಅಭಿಯಾನಕ್ಕೆ ಕ್ರೈಸ್ತ ಸಮುದಾಯವನ್ನು ಸಹ ಗುರಿಯಾಗಿಸಿದೆ. ಈ ಹಿನ್ನೆಲೆಯಲ್ಲಿ ಹಿಂದೂ ಜಾಗರಣ ವೇದಿಕೆ, ಎಬಿವಿಪಿ, ಆರ್.ಎಸ್.ಎಸ್.ನಂತಹ ಸಂಘಪರಿವಾರದ ಸಂಘಟನೆಗಳು, ಅಸ್ಸಾಂನ ಕಾರ್ಮಿಕರಿಗೆ ಬೆಂಗಳೂರು ರೈಲು ನಿಲ್ದಾಣದಲ್ಲಿ



ಊಟೋಪಚಾರದ ವ್ಯವಸ್ಥೆ ಮಾಡಿದ್ದು ಮಾಂಟೋ ಕತೆಯ ವ್ಯಂಗ್ಯಕ್ಕಿಂತಲೂ ಹೆಚ್ಚು ವಿಕಟವಾಗಿದೆ. ಜಗದೀಶ ಕಾರಂತನಂತಹವರನ್ನಂತೂ ಮಾಂಟೋ ತನ್ನ ಕನಸಿನಲ್ಲೂ ಕಲ್ಪಿಸಿಕೊಂಡಿರಲಾರ. ಕೆಲವು ದಿನಗಳ ಹಿಂದೆ ಇದೇ ಜಗದೀಶ ಕಾರಂತ, ಮಂಗಳೂರಿನ ಹೋಮ್ ಸ್ಟೇ ಪ್ರಕರಣದಲ್ಲಿ ಪೆಟ್ಟು ತಿಂದ ಯುವತಿಯರ ಬಗ್ಗೆ ಆಡಿದ ಮಾತುಗಳನ್ನು ನೆನಪಿಸಿಕೊಳ್ಳಿ. ತನ್ನ ಬೆಂಕಿಭಾಷಣಗಳಿಂದ ಕರಾವಳಿಯ ಕೋಮುದ್ವೇಷದ ವಾತಾವರಣವನ್ನು ಇನ್ನಷ್ಟು ಉಲ್ಬಣಗೊಳಿಸಿದವರಲ್ಲಿ ಈ ಜಗದೀಶ ಕಾರಂತನೂ ಒಬ್ಬ


ಅಸ್ಸಾಂ ಮೂಲದ ಕಾರ್ಮಿಕರು ಬೆಂಗಳೂರು ಬಿಟ್ಟು ಹೋಗುತ್ತಿರುವುದಕ್ಕೆ ತಕ್ಷಣದ ಕಾರಣ ಏನೇ ಇರಲಿ ಅದರ ಹಿನ್ನೆಲೆಯಲ್ಲಿರುವುದು ಅಸ್ಸಾಂನ ಬಹುಕಾಲದ ಜನಾಂಗೀಯ ಸಂಘರ್ಷ. ಆ ರಾಜ್ಯದ ಕೊಕ್ರೊಜ್ಞಾರ್ ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ ಬಾಂಗ್ಲಾ ವಲಸಿಗರು ಮತ್ತು ಬೋಡೋ ಮೂಲ ನಿವಾಸಿಗಳ ನಡುವೆ ನಡೆಯುತ್ತಿರುವ ಸಂಘರ್ಷದ ಬಗ್ಗೆ ದೇಶದ ಎಲ್ಲ ರಾಜಕೀಯ ಪಕ್ಷಗಳೂ ಕಳವಳ ಮತ್ತು ವಿಷಾದ ವ್ಯಕ್ತಪಡಿಸಿದರೆ, ಬಿ.ಜೆ.ಪಿಯ ನಾಯಕರು ಮಾತ್ರ ಇದಕ್ಕೇ ಕಾದುಕೂತವರ ಹಾಗೆ 'ಬಾಂಗ್ಲಾ ದೇಶದ ಮುಸ್ಲಿಂ ವಲಸಿಗರೇ ಅಸ್ಸಾಂನ ಹಿಂಸೆಗೆ ಕಾರಣ' ಎಂದು ಹೇಳಿ ಅಲ್ಲಿ ದ್ವೇಷ ಮತ್ತು ಅಪನಂಬಿಕೆಗಳನ್ನು ಇನ್ನಷ್ಟು ಹೆಚ್ಚಿಸಿದರು. ಅಸ್ಸಾಂನಲ್ಲಿ ಮಾತ್ರವಲ್ಲ ಭಾರತದ ಇನ್ನೂ ಹಲವೆಡೆ ಬಾಂಗ್ಲಾ ಮತ್ತು ಇತರ ವಿದೇಶಿ ಮೂಲದ ಅಕ್ರಮ ನಿವಾಸಿಗಳನ್ನು ವಿರೋಧಿಸುವ ನೆವದಲ್ಲಿ ಬಿ.ಜೆ.ಪಿ. ಮುಸ್ಲಿಮ್ ಪ್ರಜೆಗಳ ವಿರುದ್ಧ ಜನಸಾಮಾನ್ಯರಲ್ಲಿ ಸಂಶಯ ಮತ್ತು ದ್ವೇಷ ಬೆಳೆಸುತ್ತಿದೆ. ಮುಂಬೈ ನಗರದ ಬಾಂಗ್ಲಾ ಭಾಷಿಕ ಮುಸ್ಲಿಮರ ವಿರುದ್ಧ ಬಿ.ಜೆ.ಪಿ.ಯ ಸಹವರ್ತಿ, ಶಿವಸೇನೆ ಕಳೆದ 10 ವರ್ಷಗಳಿಂದ ಹಗೆ ಸಾಧಿಸುತ್ತಿದೆ. ಮುಂಬೈಯ ಬಾಂಗ್ಲಾ ಭಾಷಿಕರಲ್ಲಿ ಪಶ್ಚಿಮ ಬಂಗಾಳದಿಂದ ವಲಸೆ ಬಂದ ಹಿಂದೂ ಕೂಲಿಗಳ ಜೊತೆಗೆ ಮುಸ್ಲಿಮ್ ಕೂಲಿಗಳೂ ಇದ್ದಾರೆ. ಹಾಗೆಯೇ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಬಾಂಗ್ಲಾ ದೇಶದಿಂದ ವಲಸೆ ಬಂದ ಬಾಂಗ್ಲಾ ಭಾಷಿಕ ಮುಸ್ಲಿಮರ ಜೊತೆ ಬಾಂಗ್ಲಾ ಭಾಷಿಕ ಹಿಂದೂಗಳೂ ಇದ್ದಾರೆ. ಬಾಂಗ್ಲಾ ಬಾಂಗ್ಲಾ ದೇಶದ ಭಾಷೆಯೂ ಹೌದು; ಭಾರತದ ಭಾಷೆಯೂ ಹೌದು. ಆದರೆ ಭಾರತ ಉಪಖಂಡದಲ್ಲಿ ಈ ಧರ್ಮ, ಜನಾಂಗ, ಭಾಷೆ ಮತ್ತು ರಾಷ್ಟ್ರೀಯತೆಗಳ ಗೋಜಲುಗೋಜಲಾಗಿರುವ ಸಮಸ್ಯೆಗೆ ಅಂತಃಕರಣ, ಸಹಾನುಭೂತಿಗಳ ಮಾನವೀಯ ನೆಲೆಯಲ್ಲಿ ಪರಿಹಾರ ಸೂಚಿಸುವ ಬದಲು ಬಿ.ಜೆ.ಪಿ ಅದನ್ನು ಇನ್ನಷ್ಟು ಗೋಜಲುಗೊಳಿಸುತ್ತಿದೆ. ಜೊತೆಗೆ ದೇಶದ ಎಲ್ಲೆಡೆ ಸಾಮಾನ್ಯ ಜನರನ್ನು ಅಸಾಮಾನ್ಯ ಹಿಂಸೆಗೆ ಪ್ರಚೋದಿಸುತ್ತಿದೆ. ಬೆಂಗಳೂರು ರೈಲು ನಿಲ್ದಾಣದಲ್ಲಿ ಅಸ್ಸಾಂನ ಅಸಹಾಯಕ ವಲಸೆಕಾರ್ಮಿಕರನ್ನು ಸಂಘಪರಿವಾರ ಸತ್ಕರಿಸಿದ್ದು ಅದರ ನೀಚತನಕ್ಕೆ ಒಪ್ಪುವಂತಹದ್ದಾಗಿದೆ.

• ಜೆ. ರಾಜಶೇಖರ



ಹೇಗಿದ್ದು ಹೇಗಾದ್ರು! ಚಿಕ್ಕವರಾಗಿದ್ದಾಗ-ಹೃತಿಕ್ ರೋಷನ್, ಅಮಿತಾಬ್ ಬಚ್ಚನ್, ಶಾರೂಕ್ ಖಾನ್, ಅಮೀರ್ ಖಾನ್ ಹಾಗೂ ಶ್ರೀದೇವಿ

ಸಂತೆ ಪೇಟೆ



ರುಗರುಗ ಹೊಳೆವ ಬರೀ ಹೊಳೆ ಹೊಳೆವ
ನಾಗಲೋಕವಿದೆಯಂತೆ ಒಳಗೆ
ಮುಳುಗಿದರೆ ಫಜೀತಿ, ಕಣ್ಣು ಕುಕ್ಕುವುದು ಬೆಳಕ
ಕಾಣುವುದೇ ನೀರ ಮರೆಯಲ್ಲಿರುವ ಬಾಗಿಲು?
ಪಾದ ಮುಳುಗುವ ನೀರಿಗಿಳಿದರೂ ಬುಗಿಲುಟ್ಟಿದ
ನಿದ್ದೆಯಲೂ ಕಥೆಗೆ ಮುದುಡಿ ಮುದುಡಿ
ಮಿಂಚುಹುಳ ನೋಡುತ್ತ ಕಣ್ಣಾಲಿ ಪಿಳುಕಿಸಿ
ಜಗ್ಗಿ ಹೊದೆಯುತ್ತಿದ್ದೆ ಆ ಹಳೆ ಸೀರೆ
ಈಗ ಈ ಪೇಟೆ ಹೊಕ್ಕರೆ
ಯಾವ ನೀರಬಾಗಿಲು ತೆರೆದು ಒಳಗಿಳಿದೆ
ಈ ಸರ್ಪಲೋಕದಲಿ ಎಂಬ ಬುಗಿಲು
ಮುದುಡಲಾರದೆ, ಹೊದೆಯಲಾರದೆ
ಮಿಂಚುಹುಳುವೂ ಕಾಣದೆ
ಪಾಪಾತ್ರಳೇ ನಾನು?
ಸಂತೆಪೇಟೆಯಲಿ ಸರ್ಪಕುಣ್ಣಿನ
ಉರಿಹೊತ್ತಿ ಒರಲುತ್ತಿರುವೆ
ಗಣಗಣ ತಿರುಗುತ್ತಿದೆ ಗಣ.
ದಿಗಿಣ ದಿಗಿಣ ಧಣ ಧಣ ಧಣ

2

ಸೀರೆಯಂಗಡಿಯಲ್ಲಿ ಅಕ್ಕ ನೆನಪಾಗುತ್ತಾಳೆ
ಸುತ್ತ ಸವೀಕರು. ಕೀಲಿಸಲಾರೆ ಕಣ್ಣು
ದರವೇಶಿತನದಲಿ ಬಣ್ಣಗಳನೆಲ್ಲ ಒತ್ತಿ ಒತ್ತಿ
ಕಪ್ಪು ಸೀರೆಯನೆತ್ತಿಕೊಂಡೆ

3

ಸೀರೆಯಂಗಡಿಯ ಹುಡುಗ
ನೀರೆಯರೆದುರು ಜಗ ಮರೆತ
ಬಿಂಕ ಬೆಡಗಿಗೆ ಬೆರಗಾಗಿ
ತಾಸೊತ್ತು ತಾಸೊತ್ತು ತಪಿಸಿದ
ಗಲ್ಲಾಪೆಟ್ಟಿಗೆಯ ಮಾಲಿಕ ಗಮನಿಸುತ್ತಿದ್ದ
ಮಾರುವ ಕಟ್ಟೆಯ ಕಲ್ಲಾದವನ

4

ಹುಡುಕುತ್ತಿದ್ದೇನೆ ಅವತ್ತಿನಿಂದಲೂ
ಐದಡಿಯ ಹತ್ತಿಯ ಸೂಲ ಸೀರೆ
ತಿಳಿಗೆಂಪು ಬಣ್ಣ, ಕಪ್ಪು ಕೆಂಪಿನ ದಡಿ
ಮುಟ್ಟಿದರೆ ಕೋಳಿಮರಿ ಮೈ ಮೆತ್ತೆ
ಪಿಸಿದರೂ ಮೈ ಹಾಯಿಸದು.
ಅಂಟವಾಳದ ಗಮಲು, ಕಣ್ಣೀರ ಪಸೆ
ಗುರುತು ಹೇಳುತ್ತ ಅಲೆದರೂ ಇಲ್ಲ
ಯಾವ ಅಂಗಡಿಯಲ್ಲೂ
ಬೇಕಾದ್ದ ಕೊಡುವೆವೆಂಬವರ ಜಾಹೀರಿಗೆ ತೋ
ಮನಸಿನಲ್ಲೇ ಮಡಚಿ ಮಡಚಿ ಸುಕ್ಕು ನೇವರಿಸು

• ಡಾ. ವಿನ

ಬರಗೂರರ ಕಾವ್ಯದ ಕೋಮುವಾದ ವಿರೋಧಿ ನೆಲೆಯ ಸ್ವರೂಪ

ಎಡಪಂಥೀಯ ನೆಲೆ

...ವಲು ಕನ್ನಡದ ಪ್ರಗತಿಶೀಲ ಸಾಹಿತ್ಯದಲ್ಲಿ ಕಂಡುಬಂದ ಈ ದೃಷ್ಟಿಕೋನ ನಂತರ ದಲಿತ ಬಂಡಾಯ ಕಾವ್ಯದಲ್ಲಿ ...ವ್ಯಕ್ತಿಯನ್ನು ಪಡೆಯಿತು. ಕನ್ನಡ ಸಾಹಿತ್ಯದುದ್ದಕ್ಕೂ ವಿಜೃಂಭಿಸಿದ ಮತೀಯ ರೂಪಕಗಳನ್ನು ಭಗ್ನಗೊಳಿಸುವ ...ನಶೀಲ ಪ್ರಕ್ರಿಯೆ ನಡೆಯಿತು. ಅದು ನಾಸ್ತಿಕತೆ ಹಾಗೂ ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ಪ್ರತಿಪಾದಿಸಿತು. ...ರ್ಮದ ಹೆಸರಿನಲ್ಲಿ ನಡೆಯುವ ವರ್ತಮಾನದ ಎಲ್ಲ ವಿಕಾರಗಳನ್ನು ಬಯಲು ಮಾಡುವ ಉತ್ಸಾಹವನ್ನು ತೋರಿತು. ...ರತೀಯ ಸಂದರ್ಭದಲ್ಲಿ ಹಿಂದೂ ಧರ್ಮವು ದಲಿತ, ಬಡವರ, ಮಹಿಳೆಯರ ಪಾಲಿನ ಅವಕಾಶಗಳನ್ನು ಕಿತ್ತುಕೊಳ್ಳುವ ...ಚನೆಯ ವಿರುದ್ಧ ಬಂಡಾಯ ಸಾರಿತು. ಆ ಮೂಲಕ ಅಲ್ಪಸಂಖ್ಯಾತ ಸಂವೇದನೆಯ ಸಂಗಾತಿಯಾಯಿತು.

...ರಿವಿನ ಮೂಲಕ ಇರುವನ್ನು ಗುರುತಿಸುವುದು ...ವಾದ. ಇರುವಿನ ಮೂಲಕ ಅರಿವನ್ನು ಗುರುತಿಸು... ಭೌತವಾದ. ವರ್ಗದೃಷ್ಟಿಕೋನದಿಂದ ಮಾನವ ...ದ ಚರಿತ್ರೆಯನ್ನು ಪುನರ್ ರೂಪಿಸುವುದರ ಮೂಲಕ ...ವಾದವು ಧರ್ಮವನ್ನು ಕುರಿತಾಗಿ ಭಾವನಾವಾದಿ ...ಗಳು ರೂಪಿಸಿದ ವೈಚಾರಿಕ ಆಕೃತಿಗಳನ್ನು ...ತು. "ಶ್ರಮಜೀವಿ ವರ್ಗಕ್ಕೂ ಬೂರ್ಜ್ವಾಸಿಗೂ ... ವರ್ಗ ವೈಷಮ್ಯಗಳು ತೀವ್ರ ಸ್ವರೂಪ ತಳೆದ ...ೇ ಬೂರ್ಜ್ವಾಸಿಯು ತನ್ನ ಹಿಂದಿನ ಮುಕ್ತ ...ಯನ್ನು ಬಿಟ್ಟುಕೊಟ್ಟು ಧರ್ಮವನ್ನು ಜನಸಮೂಹ ...ಚಾರಶಕ್ತಿಯನ್ನು ನಾಶಗೊಳಿಸುವ ಅಫೀಮನ್ನಾಗಿ ...ಡಿಸತೊಡಗಿತು"27 ಎನ್ನುವ ವರ್ಗ ದೃಷ್ಟಿಕೋನ ...ಮಾಜದ ಹಿತರಕ್ಷಣೆಗೆ ಎಲ್ಲ ಚಾರಿತ್ರಿಕ ಸಂದರ್ಭ... ಧರ್ಮ ಜನತೆಯನ್ನು ಬಂಧನದಲ್ಲಿಡಲು ...ಾದ ಬಗೆಯನ್ನು ವಿವರಿಸಿತು. ಧರ್ಮ ಜನರ ... ಸಂತೋಷವಾಗಿದ್ದು ನಿಜವಾದ ಸಂತೋಷಕ್ಕಾಗಿ ... ತೊಡೆದು ಹಾಕಬೇಕೆಂದು ಚಿಂತಿಸಿತು. "ಧರ್ಮವು ... ವ್ಯಕ್ತಿಯ ನಿಡುಸುಯಿಲು, ಹೃದಯರಹಿತ ಜಗತ್ತಿನ ..., ಚೇತನಾರಹಿತ ಪರಿಸ್ಥಿತಿಗಳ ಚೇತನ"28 ಎನ್ನುವಲ್ಲಿ ... ಸ್ಥಿತಿಯಲ್ಲಿಯೂ ಬದುಕಲು ಮನುಷ್ಯನಿಗೆ ಧರ್ಮ ...ಡೆಯ ದಾರಿಯಾಗಿರುವುದನ್ನು ಗುರುತಿಸಿತು. ...ಥೀಯ ದೃಷ್ಟಿಕೋನ ಜಗತ್ತಿನಾದ್ಯಂತ ಕೋಮುವಾದೀ ...ಗಳನ್ನು ಬುಡಮೇಲು ಮಾಡಲು ಸಹಾಯಕ ...ತು. ಭಾರತದ ಚರಿತ್ರೆಯ ಪುನರ್ನಿರ್ಮಾಣ, ...ನ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಪುನರ್ ...ಕರಣಗಳೊಂದಿಗೆ ಹೊಸ ಆಶಯದ ಚರಿತ್ರೆ ಹಾಗೂ ...ಸೃಷ್ಟಿ ನಡೆಯಿತು. ಆರ್ಥಿಕ ಸಮಾನತೆಯನ್ನು ...ದಿಸುವ ಎಡಪಂಥವೇ ಕೋಮುವಾದಕ್ಕೆ ಆತ್ಯಂತಿಕ ...ವಿರಬಹುದೋ ಏನೋ.


...ದಲು ಕನ್ನಡದ ಪ್ರಗತಿಶೀಲ ಸಾಹಿತ್ಯದಲ್ಲಿ ಕಂಡು... ಈ ದೃಷ್ಟಿಕೋನ ನಂತರ ದಲಿತ ಬಂಡಾಯ ...ದಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು. ಕನ್ನಡ ...ದುದ್ದಕ್ಕೂ ವಿಜೃಂಭಿಸಿದ ಮತೀಯ ರೂಪಕಗಳನ್ನು ...ಳಿಸುವ ಸೃಜನಶೀಲ ಪ್ರಕ್ರಿಯೆ ನಡೆಯಿತು. ಅದು ... ಹಾಗೂ ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ...ದಿಸಿತು. ಧರ್ಮದ ಹೆಸರಿನಲ್ಲಿ ನಡೆಯುವ ವರ್ತ... ಎಲ್ಲ ವಿಕಾರಗಳನ್ನು ಬಯಲು ಮಾಡುವ ಉತ್ಸಾಹ ...ತೋರಿತು. ಭಾರತೀಯ ಸಂದರ್ಭದಲ್ಲಿ ಹಿಂದೂ ...ವು ದಲಿತ, ಬಡವರ, ಮಹಿಳೆಯರ ಪಾಲಿನ ಅವಕಾಶ... ಕಿತ್ತುಕೊಳ್ಳುವ ವಂಚನೆಯ ವಿರುದ್ಧ ಬಂಡಾಯ .... ಆ ಮೂಲಕ ಅಲ್ಪಸಂಖ್ಯಾತ ಸಂವೇದನೆಯ ...ತಿಯಾಯಿತು. 80ರ ದಶಕದಲ್ಲಿ ಆದೇತಾನೇ ...ವಾದಿ ಶಕ್ತಿಗಳು ಕಾಂಗ್ರೆಸ್ ಹಾಗೂ ಸಮಾಜವಾದಿ ... ರಾಜಕಾರಣದ ಫಲವಾಗಿ ಬಲಾಢ್ಯಗೊಳ್ಳುತ್ತಿರುವಾಗ ...ವಾದ ವಿರೋಧಿ ತಾತ್ವಿಕತೆಯನ್ನು ಪ್ರತಿಪಾದಿಸಿತು.

...ಸಿಸಂ, ನಾಝಿಸಂ ಹಾಗೂ ಭಾರತದ ಕೋಮು... ನಡುವಿನ ಸಮಾನತೆಯನ್ನು ಕನ್ನಡ ಸಂವೇದನೆಗೆ ... ಸಾಧ್ಯವಾಗಿದ್ದು ಈ ಎಡಪಂಥೀಯ ನೆಲೆಯಿಂದ. ...ನೆಯಲ್ಲಿ ಬರಗೂರು ರಾಮಚಂದ್ರಪ್ಪನವರ 'ಮಗು' ...ವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ಕವಿತೆಯಲ್ಲಿ ...ಸು ಸನಾತನ ವ್ಯವಸ್ಥೆಯ ವಿಕಾರಗಳ ಆಧುನಿಕ ... ನಿರಾಕರಣೆ ಇದೆ.

...ಡಪಂಥೀಯ ನೆಲೆ, ಕಾವ್ಯಕ್ಕೆ ಪೂರಕವೂ ಹೌದು, ...ಕವೂ ಹೌದು. ಅದು ಕವಿಯ ಪ್ರತಿಭಾ ...ವನ್ನು ಅವಲಂಬಿಸಿರುತ್ತದೆ. ಸಮಾಜವನ್ನು ...ಾಗಿ ಗ್ರಹಿಸಲು ಸಾಧ್ಯವಾಗುವುದರಿಂದ ಹೊಸತನ ...ಗುತ್ತದೆ. ಆದರೆ ಬದುಕಿನ ಚೌಕಟ್ಟಿನಲ್ಲಿ ಹಾಗೂ ... ತುದಿತದ ನೆಲೆಯಲ್ಲಿ ಸಂವೇದನೆಯಾಗಿ ...ದ್ದರೆ ಸಿದ್ಧಾಂತದ ಭಾರದಲ್ಲಿ ಕಾವ್ಯ ಕುಸಿಯುತ್ತದೆ.

...ಬರಗೂರು ರಾಮಚಂದ್ರಪ್ಪನವರ ಮಗುವಿನ ಹಾಡು

...ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳ ಅಗತ್ಯವನ್ನು ...ಗಿ ಚಿಂತನೆ ಮಾಡಿದ ಬರಗೂರು ರಾಮಚಂದ್ರಪ್ಪ ...ರು ಸಾಹಿತ್ಯ ಮತ್ತು ಚಳವಳಿಯ ಮುಂಚೂಣಿ ...ನಾಯಕರು. ತಮ್ಮ ಚಿಂತನೆಗಳನ್ನು ವಿವಿಧ ಸೃಜನಶೀಲ ...ಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರ ಕಾವ್ಯ ಕೂಡ ಇಂತಹ ...ಚಿಂತನೆಯ ಮೂರ್ತರೂಪಗಳು. ಎಪ್ಪತ್ತರ ದಶಕದ ...ಕಾವ್ಯದಲ್ಲಿ ವ್ಯಕ್ತಿನಿಷ್ಠತೆಯ ಮಾದರಿಗಿಂತ ಬೇರೆಯಾದ ಸಮುದಾಯದ ಗುರುತುಗಳನ್ನು ಮೂಡಿಸುತ್ತ ಇವರ ಕವಿತೆಗಳು ಆರಂಭವಾದವು. ಮುಂದೆ ಎಡಪಂಥೀಯ ಆಲೋಚನೆಗಳ ತಾತ್ವಿಕ ಬದ್ಧತೆಯನ್ನು ಒಳಗೊಂಡವು.



ಬರಗೂರರ ಕವಿತೆಗಳಲ್ಲಿ ಮುಖ್ಯವಾಗಿ ಎರಡು ಮಾದರಿಗಳಿವೆ. ಮೊದಲನೆಯದು, ಮೇಲ್ನೋಟಕ್ಕೆ ನವ್ಯದ ಕವಿತೆಗಳನ್ನು ಹೋಲುವ ವ್ಯಕ್ತಿನಿಷ್ಠ ಅಭಿವ್ಯಕ್ತಿಗಳು, ಇವು ತಮ್ಮ ಸುತ್ತಲಿನ ಪರಿಸರದ ಒಟ್ಟಿಗೆ ವ್ಯಕ್ತಿಯ ವೈಯಕ್ತಿಕ ತಲ್ಲಣಗಳನ್ನು ಗಮನಿಸುವುದರಿಂದ ನವ್ಯದ ವ್ಯಕ್ತಿಕೇಂದ್ರಿತ ನಿಲುವುಗಳಿಗಿಂತ ಬೇರೆಯಾಗಿವೆ. ಎರಡನೆಯದು, ಎಡಪಂಥೀಯ ತಾತ್ವಿಕತೆಯಿಂದ ಬದುಕನ್ನು ನೋಡುತ್ತ ಸೃಜನಶೀಲತೆಯನ್ನು ಸಾಂಸ್ಕೃತಿಕ ಜವಾಬ್ದಾರಿ ಎಂಬ ಅರಿವಿನಿಂದ ನೋಡಿರುವಂಥವು. ಇವು ಸಮಕಾಲೀನ ಸಮಾಜದ ಎಲ್ಲ ಬಗೆಯ ದುರವಸ್ಥೆಗಳಿಗೆ ಮಿಡಿಯುವ ವಿಶೇಷ ನೈತಿಕ ಕಳಕಳಿಯನ್ನು ಒಳಗೊಂಡಿದೆ.

'ಮಗುವಿನ ಹಾಡು' ಎಂಬ ಕವನಸಂಕಲನವು ಕೋಮುವಾದವನ್ನು ಮುಖ್ಯವಾಗಿ ಚರ್ಚೆಗೆ ಎತ್ತಿಕೊಳ್ಳುತ್ತದೆ. ಸಾಹಿತ್ಯ ಕಲೆಗಳು ಬದುಕಿನ ಇನ್ನಿತರ ಅಂಶಗಳಿಗಿಂತ ಅತೀತವಾದದ್ದು ಎಂಬ ಭ್ರಮೆಯನ್ನು ಕಳಚುತ್ತದೆ. ಪ್ರಸ್ತುತ ಸಂಕಲನದಿಂದ 'ಮಗುವಿನ ಹಾಡು' ಎಂಬ ಕವಿತೆಯನ್ನು ವಿಶ್ಲೇಷಣೆಗೆ ತೆಗೆದುಕೊಳ್ಳಲಾಗಿದೆ. ಈ ಕವಿತೆಯು ಮಗುವಿನ ಸಂವೇದನೆಯಿಂದ ಕೋಮುಹಿಂಸೆಯ ಸಾಮಾಜಿಕ ವಾಸ್ತವವನ್ನು ಹೇಳುತ್ತದೆ.

ಜಗತ್ತನ್ನು ಕಾಣಲು ಮತ್ತು ತಿಳಿಯಲು ಮಗು ಮಾಧ್ಯಮವಾಗುತ್ತದೆ. ಪರಂಪರೆಯ ಕುರಿತ ನಿಲುವುಗಳನ್ನು ಶೋಧಿಸಲಾಗಿದೆ. ಜಾತಿ-ಮತ-ಧರ್ಮಗಳಿಂದ ಛಿದ್ರವಾಗಿರುವ, ದ್ವೇಷ ಹಿಂಸೆಯಿಂದ ಕೊಳೆತು ಹುಣ್ಣಾದ ಮಣ್ಣು ಇದು ಎನ್ನುವುದು ಈ ಕವಿತೆ ಚರ್ಚಿಸುವ ಮೊದಲ ಸಂಗತಿ. ಪರಂಪರೆಯನ್ನು ಭವ್ಯ-ದಿವ್ಯ ಎಂದು ಹೊಗಳುತ್ತ ಭ್ರಮಿಸುತ್ತ ಬಂದ ನಿಲುವು ಬದಲಾಗಿದೆ. ರಾಷ್ಟ್ರೀಯವಾದಿ ಚಳವಳಿಗಳ ಸಂದರ್ಭದಲ್ಲಿ ಮಣ್ಣಿನ ಪವಿತ್ರೀಕರಣ ನಡೆದಿತ್ತು. ಈ ಮಣ್ಣು ತಾಯಿಯಾಗಿ ದೇವಿಯಾಗಿ ಪ್ರತಿನಿಧಿತವಾಗಿತ್ತು. ಸ್ವಾತಂತ್ರ್ಯಾನಂತರದ ಸಾಮಾಜಿಕ ರಾಜಕೀಯ ಭ್ರಮನಿರಸನಗಳು ಚರಿತ್ರೆಯನ್ನು ಪುನರ್ ಪರಿಶೀಲಿಸುವ ಅಗತ್ಯವನ್ನು ಹೇಳಿದ್ದವು.

ಚರಿತ್ರೆಯ ಸರಿಯಾದ ತಿಳಿವಳಿಕೆ ಮನುಷ್ಯರನ್ನು ವಿವೇಕಿಗಳನ್ನಾಗಿ ಮಾಡುತ್ತದೆ ಎನ್ನುವ ಎಡಪಂಥೀಯ ಚಿಂತನಧಾರೆಯು ಚರಿತ್ರೆಯ ಪುನರ್‌ಶೋಧವನ್ನು ಆರಂಭಿಸಿತು. ಈ ಶೋಧವು ವರ್ತಮಾನದಲ್ಲಿ ಕಾಣಿಸಿಕೊಂಡ ಕೋಮುವಾದಿ ಕಾಯಿಲೆಯ ಕಾರಣವನ್ನು ಕಂಡುಹಿಡಿಯುವ ವಿಧಾನವೂ ಆಗಿತ್ತು. ಪ್ರಭುತ್ವ, ಅಧಿಕಾರಗಳು ಮತ-ಧರ್ಮಗಳೊಂದಿಗೆ ಶಾಮೀಲಾಗಿ ಬಂದದ್ದರಿಂದ ಅದೊಂದು ಛಿದ್ರ ಬಿಂಬವಾಗಿಯೇ ಉಳಿದುಬಿಟ್ಟಿತು. ರಾಜಕೀಯ ಅಧಿಕಾರವನ್ನು ಪಡೆಯಲು, ಸಾಮಾಜಿಕವಾಗಿ ಬೇರೂರುವ ಕೋಮುವಾದವು 80-90ರ ದಶಕದಲ್ಲಿ ಫ್ಯಾಸಿಸಂನ ರಂಗತಾಲೀಮು ನಡೆಸುತ್ತಿತ್ತು. ಇಂತಹ ಭೂತ-ವರ್ತಮಾನದ ಅಶುದ್ಧತೆಯನ್ನು ಕವಿತೆ ಪ್ರಸ್ತಾಪಿಸುತ್ತದೆ.

ಈ ಕವಿತೆ ಭವಿಷ್ಯತ್ತಿನ ಕಡೆ ಮುಖಮಾಡುತ್ತದೆ. ಮಾರ್ಕ್ಸ್‌ವಾದಿ ಚಿಂತನೆಯು ನಿಷ್ಠುರ ತಾತ್ವಿಕತೆಯ ಮೂಲಕ ಸಮಾಜವನ್ನು ವಿಶ್ಲೇಷಿಸುತ್ತದೆ. ಆದರೆ ಅದರ ಒಳಕಾಳಜಿ ಮಾತ್ರ ಜೀವಪರವಾದದ್ದು, ಸಾಮಾನ್ಯರ ಪರವಾದದ್ದು. ಹೊಟ್ಟೆಯೊಳಗಿನ ಮಗು ತಾನು ಚಕ್ರವ್ಯೂಹ ಭೇದದ ರಹಸ್ಯ ಕೇಳಿಸಿಕೊಳ್ಳುತ್ತಿರುವ ಅಭಿಮನ್ಯುವಾಗುತ್ತಿದ್ದೇನೆ ಎನ್ನುತ್ತದೆ. ವರ್ತಮಾನವನ್ನು ಮಗುವಿನ ಮೂಲಕ ನೋಡುವ ಕವಿತೆ ಯುದ್ಧೋನ್ಮಾದದ, ಅಂತಃಕಲಹದ ಅಸ್ವಸ್ಥ ಸ್ಥಿತಿಯನ್ನು ಕಾಣಿಸುತ್ತದೆ. ಹೊಟ್ಟೆಯೊಳಗೇ ಹೋರಾಟದ, ಯುದ್ಧದ, ಉನ್ಮಾದದ ಪಾಠ ಕೇಳಿಸುವ ಪ್ರಪಂಚವಿದು. ಸಮಾಜ ಎನ್ನುವುದು ಒಳಹೊಕ್ಕರೆ ಹೊರಬರಗೊಡದ ಚಕ್ರವ್ಯೂಹ. ಅಲ್ಲಿ ನೀತಿ-ನಿಯಮಗಳಿಗೇನೂ ಅವಕಾಶವಿಲ್ಲ, ಗೆಲುವು ಒಂದೇ ನೀತಿ. ಇಂತಹ ಸ್ಥಿತಿಯಲ್ಲಿ ಬದುಕು ಸಾಧ್ಯವಿಲ್ಲ, ಸಾವು ಗೌಣವಾಗುವ ನೆಲದಲ್ಲಿ ಹುಟ್ಟು ಅರ್ಥಹೀನವಾಗುತ್ತದೆ. ಈ ಸಮಾಜದ ಮತ-ಧರ್ಮದ ಹುಣ್ಣು ದೃಷ್ಟಿಕಾಣದೆ ಕೀವಾಡಿಸುತ್ತಿದೆ. ಇಂತಹ ದುರ್ಭರ ಸ್ಥಿತಿಯಲ್ಲಿ ಹುಟ್ಟಿಗೇನರ್ಥ? ಭವಿಷ್ಯತ್ತೆನ್ನುವುದು ಎಲ್ಲಿದೆ? ಸಾವಿನ ಉದ್ದೇಶಕ್ಕಾಗಿಯೇ ಹುಟ್ಟಬೇಕು ಯಾಕೆ? ಮತೀಯವಾದದ ಮನಸ್ಸು ಎಷ್ಟು ರಾಡಿಯಾಗಿದೆಯೆಂದರೆ "ಮಗುವನ್ನು ಮಗುವೆಂದು ಎದೆತುಂಬಿ ಕರೆಯದೆ ಮತಧರ್ಮ ಬೆರೆಸಿದರೆ ಏನು ಬಂತು?" ಇಂತಹುದೇ 'ಮಗುವಿನ ಪ್ರಶ್ನೆ' ಎಂಬ ಇನ್ನೊಂದು ಕವಿತೆಯಲ್ಲಿ ಮಗು ಗೋಡೆಗಳ ಸಮಾಜದಲ್ಲಿ ಆಡಲು, ಮಾತಾಡಲು ಯಾರೂ ಇಲ್ಲದ ಒಬ್ಬಂಟಿತನವನ್ನು ಹೇಳುತ್ತದೆ.

ಕೋಮುವಾದಿ ಕಲ್ಲುಗಳಿಂದ ನಿರ್ಮಾಣವಾದ ಈ ಗೋಡೆ ಬರಿಗೋಡೆಯಲ್ಲ, ಸರ್ಪಹುಣ್ಣಿನ ಉರಿ ಕೀವಿನ ಗೋಡೆ. ಇದು ಮಗುವಿನ ಭವಿಷ್ಯತ್ತನ್ನೇ ನಾಶಮಾಡುವಂಥದ್ದು.

ಪ್ರಸ್ತುತ ಕವಿತೆಯು ಮಾನವಿಕಶಾಸ್ತ್ರದ ಸಹಜ ತಿಳಿವಿನಿಂದ ಕೋಮುವಾದವನ್ನು ತೋರುತ್ತದೆ. ಮಗು ಮಗುವಾಗಿ ಜನಿಸುತ್ತದೆ. ಮನುಷ್ಯ ರಕ್ತಕ್ಕೆ, ಜೈವಿಕತೆಗೆ ಜಾತಿಯ, ಧರ್ಮದ ಐಡೆಂಟಿಟಿಗಳಿರುವುದಿಲ್ಲ, ಆದರೆ ಸಮಾಜ ಮಗುವನ್ನು ಧರ್ಮದ ಕುರುಹಾಗಿ ಸ್ವೀಕರಿಸುತ್ತದೆ. ಅದರ ಅಸ್ತಿತ್ವವನ್ನು ಧರ್ಮದ ಜಾತಿಯ ಸುಪರ್ದಿಯೊಳಗಿಡಲಾಗುತ್ತದೆ. ಒಂದು ಮಗುವನ್ನು ಮಗುವಾಗಿ ನೋಡಲಾಗದ ಧರ್ಮದ ಗ್ರಹೀತಗಳು ನಮ್ಮ ಪ್ರಜ್ಞೆಯನ್ನು ಆವರಿಸಿಕೊಂಡುಬಿಟ್ಟಿದೆ. ಇಂತಹ ಸ್ಥಿತಿಯಲ್ಲಿ ಬದುಕಿನಲ್ಲಿ ಕೊಡಲಾಗಲಿ, ಪಡೆಯಲಾಗಲಿ ಏನೂ ಉಳಿದಿರುವುದಿಲ್ಲ.

ಅಭಿವ್ಯಕ್ತಿ ವಿಧಾನ

ಬರಗೂರರ ಕವಿತೆಗಳಲ್ಲಿ ಜಾಲಿಮರ, ಮರಕುಟಿಗಗಳಂತೆ ಮಗುವೂ ಒಂದು ಸಶಕ್ತ ರೂಪಕವಾಗಿ ಆವರ್ತನಗೊಳ್ಳುತ್ತದೆ. ಮಗುವೇ ತನ್ನ ಒಳದನಿಯನ್ನು ಬಿಚ್ಚಿಡುವುದು ಸಂವೇದನೆಯ ಮಾರ್ದವತೆಗೆ ಕಾರಣವಾಗಿದೆ. 'ಮಗು' ಮನುಷ್ಯಜನ್ಮದ ಒಳಿತಿನ ರೂಪಕ. ಹಾಗಾಗಿ ಮಗುವಿನ ಸಂಕಟ ಹೆಚ್ಚು ಯಾತನೆಯದ್ದು. ಭಾರತದಲ್ಲಿ ಇಂದು ಬೆಳೆಯುತ್ತಿರುವ ಕೋಮುಹಿಂಸೆಯ ಶಕೆ ಇಲ್ಲಿಯ ಒಟ್ಟು ಶ್ರಮಸಂಸ್ಕೃತಿಯನ್ನು ನಿರ್ನಾಮ ಮಾಡಿ ಮತ್ತೊಂದು ಸೋಮಾಲಿಯಾವೊ ಲೆಬನಾನೊ ಆಗಲು ಹೊರಟಿರುವಂಥದ್ದು. ಇದನ್ನು ಭವಿಷ್ಯ ಕಾಣದ ಮಗುವಿನ ರೂಪಕದಲ್ಲಿ ಹೇಳಲಾಗಿದೆ.

ಮೇರೆ ಮೀರಿವೆ ಇಲ್ಲಿ ಜಾತಿ-ಮತ ಧರ್ಮಗಳು
ಹೇಗೆ ಹುಟ್ಟಲಿ ನಾನು ಈ ಹುಣ್ಣಿನಲ್ಲಿ?

ನಮ್ಮ ಮಣ್ಣನ್ನು, ಬದುಕನ್ನು ಹುಣ್ಣು ಮಾಡಿಕೊಂಡರೆ ಮನುಷ್ಯ ಹುಳದಂತಾಗಿಬಿಡುತ್ತಾನೆ. ಆಗ ಹುಟ್ಟಿಗೂ ಸಾವಿಗೂ ಅಸ್ತಿತ್ವಕ್ಕೂ ಯಾವುದಕ್ಕೂ ಬೆಲೆಯಿಲ್ಲವಾಗುತ್ತದೆ. ಅದು ಕಾಫ್ಕಾನ 'ರೂಪಾಂತರ' ಕಥೆಯಲ್ಲಿ ವ್ಯಕ್ತಿ ಹುಳುವಾಗುವ ಹಾಗೆ ನಡೆಯುವ ಮತ್ತೊಂದು ಸಾಮೂಹಿಕ ಪರಿವರ್ತನೆಯಾದೀತು ಅಷ್ಟೇ.

ಮಗುವಿನ ರೂಪಕ ಇನ್ನೊಂದು ನೆಲೆಯಿಂದಲೂ ಮಹತ್ವದ್ದು, ಜಾನಪದ ಜಗತ್ತಿನಲ್ಲಿ ಬತ್ತಲೆ ರಾಜನನ್ನು ಕಂಡು ಚಪ್ಪಾಳೆ ತಟ್ಟಿ ನಕ್ಕು ಸತ್ಯ ಹೇಳುವ ಮಗುವಿದೆ. ಅಲ್ಲಿ ಭೋಗಸಂಸ್ಕೃತಿಯ ರಾಜನನ್ನು ಮಗು ಅನಾವರಣಗೊಳಿಸುವ ಹಾಗೆ ಇಲ್ಲಿ ಭೋಗಪ್ರಧಾನ ಸಮಾಜದ ಹಿಂಸಾರತಿಯನ್ನು ಮಗು ಅನಾವರಣಗೊಳಿಸುತ್ತದೆ. ಪ್ರಭುತ್ವದ ದೌರ್ಬಲ್ಯವನ್ನು ದುರಹಂಕಾರವನ್ನು ಆಕ್ಷೇಪಿಸಬೇಕಾದ ಸುಶಿಕ್ಷಿತ ನಾಗರಿಕರು ಜವಾಬ್ದಾರಿಗೆ ಹಿಂದೇಟು ಹಾಕಿದಾಗ, ಮಗು ಮಾತನಾಡುವ ಜರೂರು ಹುಟ್ಟಿಕೊಳ್ಳುತ್ತದೆ.

ಆದರೆ ಕವಿತೆಯ ಒಳಗಿನ ಸಾವಯವ ಸಂಬಂಧ ಸರಿ ಎನಿಸುವುದಿಲ್ಲ, 'ಮಗುವಿನ ಮಾತು' ಎಂಬ ವಾಸ್ತವಿಕತೆಗೂ ಕವಿತೆಯೊಳಗಿನ ರೂಪಕಕ್ಕೂ ವ್ಯತ್ಯಾಸ ಕಾಣುತ್ತದೆ. ಇದೊಂದು ಭಾವನಾಸತ್ಯವಾಗಿ ಗ್ರಹಿಸುವ ಜರೂರನ್ನು ಓದುಗ ಪಾಲಿಸಬೇಕಾಗುತ್ತದೆ. ಹಾಗಾದಾಗ ಕವಿತೆ ಪ್ರಸ್ತಾಪ ಮಾಡುವ ಗಂಭೀರ ಸಂಗತಿಗಳು ಅಷ್ಟೇ ತೀವ್ರವಾಗಿ ಓದುಗನಿಗೆ ತಲುಪದೇ ಹೋಗಬಹುದಾದ ಸಾಧ್ಯತೆಯಿದೆ.

ಈ ಕವಿತೆಯ ಸೌಂದರ್ಯ ಕಾಣವುದು ರೂಪಕಗಳ ಸರಪಳಿ ರಚನೆಯಲ್ಲಿ, ಒಂದರಿಂದ ಒಂದು ಪೂರಕವಾಗುತ್ತ ಸಮರ್ಥನೆಗೊಳ್ಳುತ್ತ ಚಲಿಸುತ್ತವೆ. ವರ್ತಮಾನದ ಕೋಮುಹಿಂಸೆಯನ್ನು 'ಹಸಿರು ಹಕ್ಕಿಯ ಬಸಿರ ಕುಕ್ಕಿತಿನ್ನುವ ಹದ್ದು' ಎಂಬ ರೂಪಕ ಹೇಳುತ್ತದೆ. ಹಸಿರು ಎಂಬ ಶಬ್ದ ಮುಸ್ಲಿಂ ಸಮುದಾಯವನ್ನು ಸಂಕೇತಿಸುತ್ತ, ಹಕ್ಕಿ-ಹದ್ದು ಎಂಬ ಹೋಲಿಕೆಯು ಸ್ವಾತಂತ್ರ್ಯದ ನಂತರ ನಡೆದ ಕೋಮುಹಿಂಸೆಯ ಸ್ವರೂಪವನ್ನು ಸೂಚಿಸುತ್ತದೆ. ಅಭಿಮನ್ಯು ಚಕ್ರವ್ಯೂಹ ಎಂಬ ಶಬ್ದಗಳು, ದಾಯಾದಿಕಲಹ ಅಭಿಮನ್ಯುವಿನಂತಹ ಎಳೆಯರ ಬದುಕನ್ನು ನಿರ್ನಾಮಮಾಡಿದ ನೆನಪನ್ನು ಮಾಡಿ, ಕಲಹಪ್ರಿಯ ಮತಾಂಧರಿಗೆ ಎಚ್ಚರಿಸುವಂತಿದೆ. ಇನ್ನೊಂದು ದೃಷ್ಟಿಯಿಂದ, ಸಮಕಾಲೀನ ಸಂಕಟಗಳಿಗೆ ಕಾರಣಕರ್ತರೂ ಪಾಲುದಾರರೂ ಆದವರನ್ನು ಮಗುವೆಂಬ ಮುಂದಿನ ತಲೆಮಾರು ಪ್ರಶ್ನಿಸುವಂತಿದೆ.

ಪ್ರಸ್ತುತ ಕವಿತೆಯು ಸಾಮಾಜಿಕ ಬದ್ಧತೆಗಾಗಿ ರಚಿತವಾಗಿದೆ. ನಿರ್ದಿಷ್ಟ ಸಂಗತಿಯೊಂದನ್ನು ಅನುಸಂಧಾನಗೊಳಿಸುವ ಉದ್ದೇಶವನ್ನು ಹೊಂದಿದೆ. ಈ ಉದ್ದೇಶವೇ ಕವಿತೆಯ ಕಲಾತ್ಮಕತೆಯನ್ನು ನಿರ್ಧರಿಸಬೇಕಿಲ್ಲ, ಉದ್ದೇಶವೇ ಇಲ್ಲದ ಕಾವ್ಯ ಇದೆಯೇ? ಬದ್ಧತೆಯನ್ನು ರಾಜಕೀಯ ಧೋರಣೆಯ ತಾತ್ವಿಕ ಬದ್ಧತೆ ಎಂದು ಮಿತಗೊಳಿಸಿಕೊಂಡಾಗಲೂ ರಾಜಕೀಯ ಪ್ರಜ್ಞೆಯಿಲ್ಲದ ನಿಲುವು ಇರಲು ಸಾಧ್ಯವೇ? ಚೆರ್ನಿಶೆವಸ್ಕಿ "ಕಲೆಗಾಗಿ ಕಲೆ ಎನ್ನುವುದು ಸಂಪತ್ತಿಗಾಗಿ ಸಂಪತ್ತು, ವಿಜ್ಞಾನಕ್ಕಾಗಿ ವಿಜ್ಞಾನ ಎನ್ನುವಷ್ಟೇ ವಿಚಿತ್ರ. ಮನುಷ್ಯನ ಎಲ್ಲಾ ಚಟುವಟಿಕೆಗಳು ಮಾನವಕೋಟಿಯ ಒಳಿತನ್ನು ಸಾಧಿಸಬೇಕು. ಇಲ್ಲದಿದ್ದರೆ ಅಂಥ ಚಟುವಟಿಕೆಗಳು ನಿಷ್ಪ್ರಯೋಜಕ ಮತ್ತು ನಿರರ್ಥಕ ಕಸುಬುಗಳಾಗುತ್ತವೆ" ಎನ್ನುತ್ತಾನೆ. ಕಲೆಗಾಗಿ ಕಲೆ ಎನ್ನುವುದು ಕಲಾಕಾರನು ತನ್ನ ಸಾಮಾಜಿಕ ಸಂದರ್ಭಕ್ಕೆ ಹೊಂದಿಕೊಳ್ಳಲಾಗದೆ ಚಡಪಡಿಸುವ ಸನ್ನಿವೇಶದಲ್ಲಿ ಹುಟ್ಟುವ ವ್ಯಾಖ್ಯಾನ. ವಸ್ತುಸ್ಥಿತಿಯನ್ನು ಎದುರಿಸುವುದು ಅಶಕ್ಯವಾದಾಗ ಅದನ್ನು ಮರೆಮಾಚುವುದೇ ಸುಲಭವಾಗಿ ತೋರುತ್ತದೆ. ಇದನ್ನು ಹೀಗೂ ವಿಸ್ತರಿಸಬಹುದು. ಸಾಮಾಜಿಕ ಪ್ರಭುತ್ವವನ್ನು ಎದುರು ಹಾಕಿಕೊಳ್ಳುವ ರಿಸ್ಕನ್ನು ಹೊರುವುದು ಬೇಡವಾದಾಗ, ಆ ಮೂಲಕ ಅವಕಾಶಗಳಿಂದ ವಂಚಿತವಾಗಬಹುದಾದ ಸಂಭವ ಕಾಡಿದಾಗ ಉಳಿದುಕೊಳ್ಳುವ ಉಪಾಯವಾಗಿ ಇದು ಬಳಕೆಯಾಗುತ್ತಿದೆ. ಯಾವುದೇ ಕಲೆ ಜೀವನದ ಸಂಬಂಧದಿಂದಾಚೆ ಉಳಿಯುವುದು ಸಾಧ್ಯವಿಲ್ಲ, ಬದ್ಧತೆ ತನ್ನಿಂದ ತಾನೇ ಕವಿತೆಯನ್ನು ಉತ್ತಮಗೊಳಿಸುವ ಸಾಧನವೂ ಅಲ್ಲ, ಬರಗೂರರ ಎಷ್ಟೋ ಕವಿತೆಗಳಿಗಿಂತ ಅವರ ಭಾಷಣಗಳೇ ಆಪ್ಯಾಯ ಎನ್ನಿಸುವುದು ಇದೇ ಸಮಸ್ಯೆಗಾಗಿ. ಬದ್ಧತೆ ಹೊರ ತೋರಿಕೆಯಾಗದೆ ಒಳ ಸಂವೇದನೆಯಾದಾಗ ಅದು ಅಭಿವ್ಯಕ್ತಿಯಲ್ಲಿಯೂ ತೀವ್ರ ಮತ್ತು ಪರಿಣಾಮಕಾರಿ ಯಾಗುತ್ತದೆ. ತಾತ್ವಿಕಬದ್ಧತೆ ಕಲಾತ್ಮಕತೆಗೆ ತಡೆಯಾಗುತ್ತದೆ ಎನ್ನುವುದಾದರೆ 'ಜನರ ಕೈಯ ಅಲಗು ಮತ್ತು ಕರಮುಷ್ಟಿಯಾಗಲು ನನ್ನ ನಮ್ರಕಾವ್ಯ ಬಯಸುತ್ತದೆ' ಎಂದ ಪಾಬ್ಲೊ ನೆರೂಡನ ಕವಿತೆಗಳನ್ನು ಯಶಸ್ವಿಯಲ್ಲದ ಕವಿತೆಗಳು ಎನ್ನಬೇಕಾದೀತು.

• ಡಾ.ಎಂ.ಡಿ. ಒಕ್ಕುಂದ


ಬರಗೂರು ರಾಮಚಂದ್ರಪ್ಪನವರ [illegible] ಕವಿತೆಯೊಂದನ್ನು [illegible] ಅಭಿನಂದನೆಗಳನ್ನು [illegible]

ಅಮೆರಿಕಾದ ಬಂದೂಕು ಭಯೋತ್ಪಾದನೆ



ಅಮೆರಿಕವು ಜಗತ್ತಿನ ದೊಡ್ಡಣ್ಣ ಎಂದು ಎಷ್ಟೇ ಬೀಗಿದರೂ ಪೋಲೀಸಪ್ಪನಾಗಿ ದೊಣ್ಣೆ ಹಿಡಿದುಕೊಂಡು ಜಗತ್ತಿನ ಎಲ್ಲಾ ದೇಶ-ಮನೆಗಳನ್ನು ತನ್ನ ಒರಟು ಬೂಟುಕಾಲಿನಿಂದ ಅಪವಿತ್ರಗೊಳಿಸುತ್ತಾ ಪ್ರಪಂಚದಾದ್ಯಂತ ರಕ್ತದ ಕಾಲುವೆಯನ್ನು ಹರಿಸುತ್ತಾ ಹೋದರೂ ಅದರ ಆತ್ಮಕ್ಕೆ ಶಾಂತಿ ದೊರಕುತ್ತಿಲ್ಲ; ತನ್ನ ಮನೆಯನ್ನೇ ಇದುವರೆವಿಗೂ ನೇರ ಮಾಡಿಕೊಳ್ಳಲು ಅಸಮರ್ಥವಾದ ಅಮೆರಿಕ ಇಡೀ ಪ್ರಪಂಚದ ಹುಳುಕುಗಳ ಬಗ್ಗೆ ದೊಣ್ಣೆ ತಿರುವುತ್ತಿರುವುದು ಅದರ ಹೀನಬುದ್ಧಿಯ ದ್ಯೋತಕವಾಗಿದೆ.


2012ನೇ ಆಗಸ್ಟ್ 5 ರಂದು ಅಮೆರಿಕಾದ ವಿಸ್ಕಾನ್ಸಿನ್‌ನ ಓಕ್‌ಕ್ರೀಕ್‌ನ ಗುರುದ್ವಾರದಲ್ಲಿ ಅಲ್ಲಿ ವಾಸವಾಗಿದ್ದ 400 ಸಿಖ್ ಕುಟುಂಬಗಳ ಸದಸ್ಯರು ಸೇರಿದ್ದರು. ಧಾರ್ಮಿಕ ಉತ್ಸವದ ಸಲುವಾಗಿ ಸಿಖ್ ಸಮುದಾಯದ ಸದಸ್ಯರು ಸಾಮೂಹಿಕ ಭೋಜನದ ತಯಾರಿಗಾಗಿ ಲಂಗರ್‌ನಲ್ಲಿ (ಅಡುಗೆ ಮನೆ) ಅಡುಗೆಯ ಕೆಲಸದಲ್ಲಿ ನಿರತರಾಗಿದ್ದರು. ಬೆಳಗ್ಗೆ 10 ಗಂಟೆಯ ಸಮಯ ಅಲ್ಲಿಗೆ ಬಂದವನು ವೇಡ್ ಮೈಕೇಲ್ ಪೇಜ್ ಎಂಬ 40 ವರ್ಷ ವಯಸ್ಸಿನ ಅಮೆರಿಕನ್ ಮಾಜಿ ಸೈನಿಕ. ಆತ ಅತ್ಯಂತ ಸುಸಜ್ಜಿತವಾದ ಗನ್ ಹಿಡಿದು ಗುರುದ್ವಾರದೊಳಗೆ ನುಗ್ಗಿದ. ಹಾಗೂ ಅಡುಗೆ ಕೆಲಸದಲ್ಲಿ ನಿರತರಾಗಿದ್ದ ಸಮುದಾಯದ ಮುಖ್ಯಸ್ಥ ಸತ್ವಂತ್ ಸಿಂಗ್ ಕಲೇಕಾನನ್ನು ತನ್ನ ಆಧುನಿಕ ರೈಫಲ್‌ನಿಂದ ಎದುರಿಸಿದಾಗ ಸತ್ವಂತ್ ಸಿಂಗ್ ಕೈಯಲ್ಲಿದ್ದದ್ದು ತರಕಾರಿ ಕತ್ತರಿಸುವ ಚಾಕು. ಅವರಿಬ್ಬರ ಸೆಣೆಸಾಟವನ್ನು ಕಂಡ ಅಭಯ್ ಮತ್ತು ಅಮಾನತ್ ಎಂಬ ಮಕ್ಕಳು ಕೂಡಲೇ ಗುರುದ್ವಾರದ ಉದ್ದಗಲಕ್ಕೂ ಸುದ್ದಿಯನ್ನು ಹರಡಿದರು. ಜನರೆಲ್ಲರೂ ಅಲ್ಲಲ್ಲಿಯೇ ಅಡಗಿದರು. ಪುಟ್ಟ ಕೋಣೆಯೊಂದರಲ್ಲಿ 12 ಜನರು ಕಿಕ್ಕಿರಿದು ತುಂಬಿದ್ದರು. ಸಕಾಲದಲ್ಲಿ ಎಚ್ಚರಿಕೆ ದೊರಕಿದ್ದರಿಂದ ಬಹುತೇಕ ಜನರು ಬಚಾವಾದರು. ಆದರೂ ಕೂಡಾ ಮಹಿಳೆಯೊಬ್ಬಳು ಸೇರಿದಂತೆ 6 ಮಂದಿ ಸಿಖ್ಖರು ಕೊಲೆಗೀಡಾಗಿ ಇಬ್ಬರು ತೀವ್ರವಾಗಿ ಗಾಯಗೊಂಡರು. ಅಲ್ಲಲ್ಲಿ ಅಡಗಿದ್ದ ಜನರು ಸಹಾಯಕ್ಕಾಗಿ ಪೋಲೀಸರನ್ನು ಸಂಪರ್ಕ ಮಾಡಿದಾಗ ಕೂಡಲೇ ಬಂದ ಪೋಲೀಸರ ಮೇಲೆ ಕೂಡ ಪೇಜ್ ಗುಂಡಿನ ದಾಳಿಯನ್ನು ನಡೆಸಿ ಒಬ್ಬ ಪೋಲೀಸ್ ಅಧಿಕಾರಿಯನ್ನು ತೀವ್ರವಾಗಿ ಗಾಯಗೊಳಿಸಿದ. ಇಂತಹ ಮಾರಣಹೋಮದ ಸುದ್ದಿಯನ್ನು ಕೇಳಿದರೂ ಕೂಡಾ ಅಮೆರಿಕ ಒಂದುಕ್ಷಣ ನಿಲ್ಲಲಿಲ್ಲ; ಮತ್ತು ತನ್ನ ಆತ್ಮವಿಮರ್ಶೆಯನ್ನು ಮಾಡಿಕೊಳ್ಳಲಿಲ್ಲ.




ಈ ಸುದ್ದಿಯಿಂದ ಸ್ಥಳೀಯ ನಾಗರಿಕ ಸಮಾಜದವರು ಮಾತ್ರ ಘಾಸಿಗೊಂಡರು. 'ಆರ್ಡಿನರಿ ಹೀರೋಸ್' ಎಂಬ ಗುಂಪು ಕೂಡಲೇ ಸಕ್ರಿಯವಾಗಿ ಮೃತರ ಸಂಸ್ಕಾರ ಮತ್ತು ಗಾಯಾಳುಗಳ ವೈದ್ಯಕೀಯ ವೆಚ್ಚದ ಸಲುವಾಗಿ ಹಣವನ್ನು ಶೇಖರಿಸತೊಡಗಿತು. ಮೃತರ ಶವಸಂಸ್ಕಾರದಲ್ಲಿ ಅಪಾರ ಸಂಖ್ಯೆಯ ಅಮೆರಿಕನ್ ಪ್ರಜೆಗಳು ಭಾಗವಹಿಸಿದರು ಮತ್ತು ತಮಗೆ ಆಗಿರುವ ಅತೀವ ದುಃಖವನ್ನು ತೋಡಿಕೊಂಡರು. ಒಬ್ಬ ಜನಾಂಗದ್ವೇಷಿಯ ಹಸಿಹಸಿ ದ್ವೇಷವನ್ನು ತೊಡೆಯಲು ಆತನ ದೇಶದ ಅಪಾರ ಜನರು ಶ್ರಮಿಸುತ್ತಿದ್ದಾರೆ.

ವೇಡ್ ಮೈಕೇಲ್ ಪೇಜ್ ಎಂಬ ಕೊಲೆಗಡುಕ ಜನಾಂಗ ದ್ವೇಷದಿಂದ ತುಂಬಿತುಳುಕುತ್ತಿದ್ದ ಹಾಗು ಬಿಳಿಯರ ಶ್ರೇಷ್ಠತಾವಾದದ ಬೆಂಬಲಿಗನಾಗಿದ್ದ. ಶ್ರೇಷ್ಠತಾವಾದವನ್ನು ಎತ್ತಿ ಹಿಡಿಯುವ ರಾಕ್ ಬ್ಯಾಂಡ್‌ನ ಸದಸ್ಯನಾಗಿದ್ದ. 1992 ರಿಂದ 98ರವರೆಗೆ ಅಮೆರಿಕದ ಸೇನೆಯಲ್ಲಿ ಕ್ಷಿಪಣಿ ರಿಪೇರಿ ವಿಭಾಗದಲ್ಲಿ ಉದ್ಯೋಗಿಯಾಗಿದ್ದು, ನಂತರ ಮನಃಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡಿ ಸೇನೆಯಿಂದ ಹೊರಹಾಕಲ್ಪಟ್ಟಿದ್ದ. ತೀರಾ ಮದ್ಯವ್ಯಸನಿಯಾಗಿದ್ದ ಆತ ಕುಡಿದು ವಾಹನ ಚಾಲನೆ ಮಾಡಿದ ಅಪರಾಧದ ಮೇಲೆ ಅನೇಕ ಸಾರಿ ಬಂಧನಕ್ಕೊಳಗಾಗಿದ್ದ. ಕೊನೆಗೂ ಹೊಟ್ಟೆಪಾಡಿಗಾಗಿ ಮಾಡುತ್ತಿದ್ದ ಲಾರಿ ಚಾಲಕನ ಕೆಲಸವನ್ನೂ ಕಳೆದುಕೊಂಡಿದ್ದ. ನಿರುದ್ಯೋಗಿಯಾಗಿದ್ದ ಆತನ ಮನೆಯನ್ನು ಬ್ಯಾಂಕಿನವರು ವಶಪಡಿಸಿಕೊಂಡಿದ್ದರು. ಆತ ಪೋಲೀಸ್ ಕಡತಗಳಲ್ಲಿ ಅಪರಾಧಿಯೆಂದು ಅನೇಕ ಬಾರಿ ದಾಖಲಾಗಿದ್ದ. ಇಂತಹ ಚಾರಿತ್ರ್ಯವನ್ನು ಹೊಂದಿದ್ದ ವೇಡ್ ಮೈಕೇಲ್ ಪೇಜ್ ಕೂಡಾ ಸುಲಭವಾಗಿ ಬಂದೂಕನ್ನು ಖರೀದಿಸಬಲ್ಲವನಾಗಿದ್ದ. ಅಷ್ಟೇ ಅಲ್ಲದೆ ಆತ ನಿಯೋ- ನಾಜಿ ಗುಂಪಿಗೆ ಸೇರಿದವನಾಗಿದ್ದ. ಬಲಪಂಥೀಯ ಜನಾಂಗದ್ವೇಷಿಯಾಗಿದ್ದ. ಇಂತಹ ಪೇಜ್ ಯಾವುದೇ ನಿರ್ಬಂಧಗಳಿಲ್ಲದೆ ಕಾನೂನುರೀತ್ಯಾ ತನ್ನ ಹಕ್ಕು ಎಂದು ಸಾಧನೆ ಮಾಡಿ ಅತ್ಯಂತ ಸುಲಭವಾಗಿ ಬಂದೂಕನ್ನು ಖರೀದಿಸುವ ಹಕ್ಕನ್ನು ಅಮೆರಿಕದ ಸಂವಿಧಾನ ಆತನಿಗೆ ನೀಡಿದೆ.

ಅಮೆರಿಕನ್ ವ್ಯವಸ್ಥೆಯ ಕ್ರೂರ ವ್ಯಂಗ್ಯವೆಂದರೆ ಪೇಜ್ ಸಿಖ್ಖರ ಕಗ್ಗೊಲೆ ಮಾಡಿದ ಎರಡು ದಿನಗಳ ನಂತರ ಇತರೆ 6 ಜನರನ್ನು ಈಗಾಗಲೇ ಕೊಲೆ ಮಾಡಿದ್ದ ಜೇರ್ಡ್ ಲೊಹ್ನರ್ ನ್ಯಾಯಾಲಯಕ್ಕೆ ಹಾಜರಾಗಿ ಸದರಿ ಕೊಲೆಗಳ ಆರೋಪವನ್ನು ಒಪ್ಪಿಕೊಂಡ. ಕೊಲೆಗೀಡಾದವರಲ್ಲಿ ಅತ್ಯಂತ ಪ್ರಭಾವೀ ರಾಜಕಾರಣಿಗಳೂ ಇದ್ದರು. ಆದರೆ ಆರೋಪಿಯಾದ ಜೇರ್ಡ್ ಲೊಹ್ನರ್ ಶಿಜುಫ್ರೇನಿಯಾ ಮಾನಸಿಕ ರೋಗದಿಂದ ಬಳಲುತ್ತಿದ್ದಾನೆ ಎಂದು ನ್ಯಾಯಾಲಯವು ಪರಿಗಣಿಸಿ ಅವನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಅಮೆರಿಕದ ಈ ಎಲ್ಲಾ ಕಗ್ಗೊಲೆಗಳ ನಂತರ ಬಂದೂಕು ನಿರ್ಬಂಧ ಕಾಯ್ದೆ ಎಂಬ ಮರೀಚಿಕೆ ಚರ್ಚೆಗೆ ಬಂದು ಮಾಯವಾಗುತ್ತದೆ... ಮತ್ತೊಂದು ಕಗ್ಗೊಲೆಯವರೆಗೆ!



ಅಮೆರಿಕದ ರಾಜಕೀಯದಲ್ಲಿ ಅತ್ಯಂತ ವಿವಾದಾತ್ಮಕ ವಾದ ವಿಷಯವೆಂದರೆ ಬಂದೂಕಿನ ರಾಜಕೀಯ. ಕಳೆದ ಹಲವು ದಶಕಗಳಿಂದ ಬಂದೂಕು ಮತ್ತಿತರೆ ಮಾರಕ ಅಸ್ತ್ರಗಳ ಸುಲಭ ಲಭ್ಯತೆ ಮತ್ತು ಅವುಗಳ ಮೇಲಿನ ನಿರ್ಬಂಧ ಚರ್ಚಾಸ್ಪದ ವಿಷಯವಾಗಿದೆ. ಅಮೆರಿಕಾದ ಸಂವಿಧಾನದ 2ನೆಯ ತಿದ್ದುಪಡಿಯು ಅಸ್ತ್ರಗಳ ಮೇಲೆ ಇರುವ ವ್ಯಕ್ತಿಗತ ಹಕ್ಕನ್ನು ಮಾನ್ಯ ಮಾಡಿದ್ದು, ಈ ಹಕ್ಕು ಹಾಗೂ ಕ್ರಿಮಿನಲ್ ಕೃತ್ಯಗಳಿಂದ ನಾಗರಿಕರ ಸುರಕ್ಷತೆ ಮತ್ತು ಕಾನೂನು ವ್ಯವಸ್ಥೆಯ ನಿರ್ವಹಣೆಯ ಬಗ್ಗೆ ಸರ್ಕಾರಕ್ಕೆ ಇರುವ ಜವಾಬ್ದಾರಿ - ಇವುಗಳ ನಡುವೆ ನಿರಂತರ ಸಂಘರ್ಷವು ನಡೆಯುತ್ತಾ ಬಂದಿದೆ. ಮೇಲೆ ಹೇಳಿದ ಸಿಕ್ ಸಮುದಾಯದವರ ಕಗ್ಗೊಲೆ ಇಂತಹ ಪ್ರಕರಣಗಳಲ್ಲಿ ಒಂದು. ಅಮೆರಿಕಾದ ಜನರು ಗನ್ ಸಂಸ್ಕೃತಿಯಡಿಯಲ್ಲಿ ಬೆಳೆದು ಬಂದಿದ್ದು, ಬಂದೂಕು ಮತ್ತು ಮಾರಕಾಸ್ತ್ರಗಳ ಬಗ್ಗೆ ವಿಪರೀತ ವ್ಯಾಮೋಹವನ್ನು ಬೆಳೆಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಬಂದೂಕನ್ನು ಹೊಂದುವುದು ಸಂಸ್ಕೃತಿಯ ಪ್ರತೀಕ ಎಂದು ಅವರು ಪರಿಭಾವಿಸಿದ್ದಾರೆ. ಬಂದೂಕನ್ನು ಹೊಂದುವುದು ಕೇವಲ ತಮ್ಮ ಆತ್ಮ ರಕ್ಷಣೆಗೆ ಮಾತ್ರ ಎಂದು ಭಾವಿಸುವುದಕ್ಕೆ ಬದಲಾಗಿ ಅಮೆರಿಕನ್ ಅಸ್ತಿತ್ವದ ಸಂಕೇತವಾಗಿ ಬಳಸುತ್ತಾರೆ.



ಅಮೆರಿಕದ ಚರಿತ್ರೆ ಕೂಡಾ ಬಂದೂಕು ಸಂಸ್ಕೃತಿಯ ಪರವಾಗಿದೆ. ಅಮೆರಿಕ ವಿಸ್ತರಣೆಯ ದಾಹಕ್ಕೆ ಪ್ರತಿರೋಧವನ್ನೊಡ್ಡಿದ ಮೂಲನಿವಾಸಿಗಳ ವಿರುದ್ಧ ಯಶಸ್ವಿಯಾಗಿ ಬಂದೂಕನ್ನು ಬಳಸಿದ ಅಮೆರಿಕವು, ಈ ಸಂಸ್ಕೃತಿಯನ್ನು ಸಿನೆಮಾ, ಟೆಲಿವಿಷನ್, ಸಂಗೀತ, ಸಾಹಿತ್ಯ ಮತ್ತು ಪತ್ರಿಕೆಗಳ ಮೂಲಕ ಜನಪ್ರಿಯಗೊಳಿಸುತ್ತಿದೆ. ಹೀಗಾಗಿಯೇ ವೇಡ್ ಮೈಕೇಲ್ ಪೇಜ್ ಒಂದು ಬಿಸ್ಕೆಟ್ ಪ್ಯಾಕೇಟನ್ನೋ ಅಥವಾ ಬಾಳೆಹಣ್ಣನ್ನೋ ಖರೀದಿಸಿದಷ್ಟು ಸುಲಭವಾಗಿ ಪಿಸ್ತೂಲನ್ನು ಖರೀದಿಸಿ ಅಮಾಯಕರಾದ ಹಾಗೂ ತಮ್ಮ ಪಾಡಿಗೆ ತಾವು ಧಾರ್ಮಿಕ ಸಭೆಯಲ್ಲಿ ಭಾಗವಹಿಸುತ್ತಿದ್ದ ಸಿಖ್ ಸಮುದಾಯದವರ ಮೇಲೆ ಆಕ್ರಮಣಕಾರಿ ಹಲ್ಲೆಯನ್ನು ನಡೆಸಿ ಕೊಲೆ ಮಾಡಿದ. ಅಮೆರಿಕನ್ನರು ಕ್ರೀಡೆಯೆಂದು ಭಾವಿಸುವ ಹುಚ್ಚು ಹವ್ಯಾಸವಾದ ಪ್ರಾಣಿ ಬೇಟೆ ಇಂದಿಗೂ ಪ್ರಚಲಿತವಾಗಿದೆ. ಈ ಕಾರಣಕ್ಕಾಗಿಯೂ ಅಮೆರಿಕನ್ ಜನತೆಯು ನಿರಾಯಾಸವಾಗಿ ಬಂದೂಕನ್ನು ಹೊಂದುವ ತಮ್ಮ ಹಕ್ಕನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ. ಪ್ರಾಣಿ ಬೇಟೆಯಾಡುತ್ತಾ ಅದೇ ಮನಃಸ್ಥಿತಿಯ ಮುಂದುವರೆದ ಭಾಗವಾಗಿ ಜಾಗತಿಕ ಮಟ್ಟದಲ್ಲಿ ಮನುಷ್ಯ ಬೇಟೆಯಾಡುತ್ತಿರುವ ಅಮೆರಿಕಾ ವಿಚಿತ್ರ ರೀತಿಯಲ್ಲಿ ತನ್ನ ಬಂದೂಕು ಸಂಸ್ಕೃತಿಯನ್ನು ಸಮರ್ಥಿಸಿಕೊಳ್ಳುತ್ತಿದೆ.


ಬಂದೂಕು ಎಂಬುದು ಅಧಿಕಾರ ಮತ್ತು ಪುರುಷತ್ವದ ಸಂಕೇತ. ಹೀಗಾಗಿ ಹತ್ತೊಂಭತ್ತನೆಯ ಶತಮಾನದಲ್ಲಿ ಕೌಬಾಯ್ ಸಂಸ್ಕೃತಿಯು ಅಮೆರಿಕನ್ ಸಾಂಸ್ಕೃತಿಕ ಸಂಕೇತವಾಗಿ ಇಂದಿಗೂ ನಿರಂತರವಾಗಿ ಚಲನಚಿತ್ರಗಳಲ್ಲಿ ಮೂಡಿಬರುತ್ತಿದೆ. ಹಾಗೂ ಕೌಬಾಯ್ ಸಾಹಿತ್ಯವು ಇಂದಿಗೂ ವಿಜೃಂಭಿಸುತ್ತಿದೆ. ಈ ನಿಟ್ಟಿನಲ್ಲಿ ಯಾವುದೇ ಕಾನೂನು ರಚನೆಯಾದರೂ ಫಲಕಾರಿಯಾಗುತ್ತಿಲ್ಲ.

1929ರ ಚಳಿಗಾಲದಲ್ಲಿ ಅತ್ಯಂತ ಸುಸಜ್ಜಿತವಾದ ಆಟೋಮೆಟಿಕ್ ಬಂದೂಕುಗಳನ್ನು ಬಳಸಿ ನಡೆಸಿದ ಸೇಂಟ್ ವ್ಯಾಲೆಂಟೈನ್ಸ್ ಡೇ ಕಗ್ಗೊಲೆಯು ಇಡೀ ಅಮೆರಿಕವನ್ನು ಬೆಚ್ಚಿ ಬೀಳಿಸಿತು. ಈ ಹಿನ್ನೆಲೆಯಲ್ಲಿ 1934ರ ನ್ಯಾಷನಲ್ ಫೈರ್ ಆರ್ಮ್ಸ್ ಆಕ್ಟ್ ಜಾರಿಗೆ ಬಂದಿತು. ನಂತರ ಸಂಪೂರ್ಣ ಆಟೋಮೆಟಿಕ್ ಆಯುಧಗಳನ್ನು ನಿಯಂತ್ರಿಸಲು ಎ.ಟಿ.ಎಫ್ ಎಂಬ ಸಂಸ್ಥೆ ಅಧಿಕಾರವನ್ನು ಪಡೆಯಿತು. ಆದರೆ ರಂಗೋಲಿಯ ಕೆಳಗೆ ನುಸುಳಿದಂತೆ 1986ರ ಮೇ ಹತ್ತೊಂಭತ್ತಕ್ಕಿಂತ ಮುಂಚಿತವಾಗಿ ತಯಾರಾದ ಆಯುಧಗಳಿಗೆ ಈ ನಿರ್ಬಂಧ ಅನ್ವಯವಾಗುವುದಿಲ್ಲ ಮತ್ತು ಇಂತಹ ಆಯುಧಗಳು ಅಮೆರಿಕಾದ ಎಲ್ಲೆಡೆ ಸುಲಭವಾಗಿ ಸಿಗುವಂತಹದ್ದಾಗಿದೆ. ಬಂದೂಕು ವಿರೋಧಿ ಕಾನೂನುಗಳು ಜಾರಿಯಾಗಬೇಕೆಂಬ ವಾದವು ತೀವ್ರವಾದಾಗ ನ್ಯಾ… ರೈಫಲ್ ಅಸೋಸಿಯೇಷನ್ ಮತ್ತು ಗನ್ ಓನರ್… ಅಮೆರಿಕ ಮೊದಲಾದ ಸಂಸ್ಥೆಗಳು ಬಂದೂಕು ಸ… ತಿಯ ಪರವಾಗಿ ಗಟ್ಟಿಯಾಗಿ ನಿಂತವು. ಹೀಗಾಗಿ … ಆರ್ಮ್ಸ್ ರಿಜಿಸ್ಟ್ರೇಷನ್ ಅಂಡ್ ಲೈಸೆನ್ಸಿಂಗ್ … ರೂವಾರಿಯಾಗಿದ್ದ ಸೆನೆಟರ್ ಜೋಸೆಫ್ ಟೈ… 1970ರಲ್ಲಿ ಮರು ಚುನಾವಣೆಯಲ್ಲಿ ಸ್ಪರ್ಧಿ… ದಯನೀಯವಾಗಿ ಸೋಲನ್ನಪ್ಪಿದ. ಬಂದ… ಹೊಂದುವುದು ಅಮೆರಿಕನ್ ಸಂವಿಧಾನವು … ಮಾಡಿರುವ ತಮ್ಮ ಆಜನ್ಮ ಸಿದ್ಧ ಹಕ್ಕು … ಅಮೆರಿಕನ್ನರು ಭಾವಿಸಿದ್ದಾರೆ.

ಕೇವಲ ಗನ್ ಹೊಂದುವುದು ಮಾತ್ರವಲ್ಲ, … ಜವಾಬ್ದಾರಿಯುತವಾಗಿ ತಮ್ಮ ಆತ್ಮರಕ್ಷಣೆಗಾಗಿ … ಬಳಸತಕ್ಕದ್ದು ಎಂಬ ನೈತಿಕ, ಮಾನವೀಯ ಮತ್ತು ಕಾ… ಬಾಧ್ಯತೆಯನ್ನು ಅಲ್ಲಿನ ಜನರು ಮರೆತಿದ್ದಾರೆ. ಬಂದ… ಕೈಯಲ್ಲಿ ಹಿಡಿದು ಅಮಾಯಕರಾದ ಜನತೆ… ಯದ್ವಾತದ್ವಾ ಗುಂಡು ಹಾರಿಸಿ ಒಟ್ಟೊಟ್ಟಿಗೆ … ಹೆಣಗಳನ್ನು ಉರುಳಿಸುವುದು ಗನ್ ಹೊಂದಿದ ಹಲ… ಅಮೆರಿಕನ್ ಪ್ರಜೆಗಳ ಪ್ರೀತಿಯ ಹವ್ಯಾಸವಾಗಿ ಮಾ… ಅಮೆರಿಕ ಬಂದೂಕು ಸಂಸ್ಕೃತಿಯ ಮೇಲೆ ನಿಯಂತ್ರ… ಹೇರುವ ಮತ್ತು ಪ್ರತಿಬಂಧಿಸುವ ಪ್ರಯತ್ನವನ್ನು ಮಾಡಿ… ಈ ನಿಟ್ಟಿನಲ್ಲಿ ವಿಫಲವಾಗುತ್ತಿದೆ.

ಯಾವುದೇ ಪ್ರಚೋದನೆ ಇಲ್ಲದಿದ್ದರೂ ಹತರಾಗು… ಜನತೆಯ ಸಂಕಷ್ಟಗಳು ದಿನೇದಿನೇ ವರದಿಯಾಗು… ನಾಗರಿಕರ ಕೈಯಲ್ಲಿ ಅನಿರ್ಬಂಧಿತವಾದ ಬಂ… ಎಂಬುದೇ ಅಮೆರಿಕದ ಘೋಷಣಾ ವಾಕ್ಯವಾ… ಶತಮಾನಗಳಷ್ಟು ಹಳೆಯದಾದ ಬಂದೂಕು ಹೊ… ಹಕ್ಕು ಇಂದಿನ ನಾಗರಿಕ ಸಮಾಜದಲ್ಲಿ ಎಷ್ಟು … ಎಂಬ ವಿಚಾರವನ್ನು ಅಮೆರಿಕ ಗಂಭೀರವಾಗಿ ಚರ್ಚಿ… ಮಾಡುತ್ತಿಲ್ಲ. ಸಿಖ್ ಸಮುದಾಯದವರ ಸಾಮ… ಕಗ್ಗೊಲೆಯಾದ ನಂತರವೂ ಅಮೆರಿಕ ಸಹಾನು… ಪರವಾದ ಕೆಲವೊಂದು ಶಬ್ದಗಳನ್ನು ಹೇ… ಸಮರ್ಥವಾಗಿದೆ ಹೊರತು ಈ ನಿಟ್ಟಿನಲ್ಲಿ ಯ… ಸಕಾರಾತ್ಮಕವಾದ ಕಾನೂನು ಸಂರಕ್ಷಣೆಗೆ ಮುಂ… ಪ್ರತಿದಿನ ವಿನಾಕಾರಣ ಅಮೆರಿಕದಲ್ಲಿ 32 … ಕೊಲೆಯಾಗುತ್ತಿದ್ದರೂ, ಸಿಖ್ ಸಮುದಾಯದ ಕಗ್ಗೊಲ… ಸಾಮೂಹಿಕ ಕೊಲೆಗಳೂ ನಡೆಯುತ್ತಿದ್ದರೂ ಅಮೆ… ಎರಡು ಪ್ರಬಲ ರಾಜಕೀಯ ಪಕ್ಷಗಳೂ ಬಂ… ನಿಯಂತ್ರಣದ ಬಗ್ಗೆ ಚಕಾರವೆತ್ತಿಲ್ಲ.

ಸಿಖ್ಖರ ಮೇಲಿನ ಹತ್ಯಾಕಾಂಡ ನಡೆದ ಎರಡು … ನಂತರ ಅಮೆರಿಕದ ಜಾಪ್ಲಿನ್‌ನಲ್ಲಿ ಇದ್ದ ಮಸೀದಿ… ಸುಟ್ಟು ಸಂಪೂರ್ಣವಾಗಿ ನಾಶ ಮಾಡಲಾಗಿದೆ. … ಸಿಖ್ಖರ ಹತ್ಯಾಕಾಂಡದಷ್ಟು ಗಂಭೀರ, ಹೀನ, ಅಮಾನ… ಪ್ರಸಂಗ ಅಲ್ಲ ಎಂದು ಪರಿಗಣಿಸಬಹುದಾದರೂ ಅ… ಜನಾಂಗ ದ್ವೇಷ ಯಾವ ಮಟ್ಟಿಗೆ ಹರಡುತ್ತಿದೆ ಎಂ… ದೃಷ್ಟಾಂತವಾಗಿದೆ. ಮಸೀದಿಯನ್ನು ಮತ್ತೆ ಕಟ್ಟಬ… ಜೀವಗಳನ್ನು ಮರಳಿ ತರಲು ಸಾಧ್ಯವಿಲ್ಲ. ಆದರೆ ಜ… ದ್ವೇಷದ ಒಂದು ಘಟನೆಯು ಸ್ಥಳೀಯ ಅಮೆ… ಜನತೆಯಲ್ಲಿ ವಿಷಾದದ ಭಾವವನ್ನು ಹುಟ್ಟು … ಜಾಪ್ಲಿನ್‌ನ ಚರ್ಚ್‌ನಲ್ಲಿ ಎಲ್ಲಾ ಮುಸ್ಲಿಮ್ ಕುಟುಂಬದ… ಇಫ್ತಾರ್ ಕೂಟಕ್ಕೆ ಆಹ್ವಾನಿಸಿ ತಮ್ಮ ಬಾಂಧ… ಗಟ್ಟಿಗೊಳಿಸುವ ಪ್ರಯತ್ನವನ್ನು ಅಲ್ಲಿನವರು ಮಾಡಿ… ಈ ಇಫ್ತಾರ್ ಕೂಟದಲ್ಲಿ ಸ್ಥಳೀಯ ಯಹೂದಿ… ಭಾಗವಹಿಸಿದ್ದು ವಿಶೇಷವಾಗಿದ್ದು ಭಾವನಾತ್ಮಕವಾಗಿ … ನಿಮ್ಮೊಂದಿಗೆ ಇದ್ದೇವೆ' ಎಂಬ ಸಂದೇಶವನ್ನು ನೀ… ಅಷ್ಟೇ ಅಲ್ಲದೆ, ಆಗಸ್ಟ್ 25 ರಂದು ಇಡೀ ಜ… ನಗರ ಒಂದಾಗಿ ಇಸ್ಲಾಮಿಕ್ ಸೊಸೈಟಿಗೆ ಬೆಂಬ… ಸೂಚಿಸುವ ಸಲುವಾಗಿ ರ್ಯಾಲಿ… ಹೊರಡಿಸುವ ಬೃಹತ್ ಕಾರ್ಯಕ್ರಮ… ಹಮ್ಮಿಕೊಂಡಿದ್ದಾರೆ.



ಒಟ್ಟಿನಲ್ಲಿ ಅಮೆರಿಕ ಮಾಡಿದ… ಮಹರಾಯ ಎಂಬಂತೆ ಬಿತ್ತಿದ ಬೆಳೆ… ಕೊಯ್ಲು ಮಾಡುವ ಸ್ಥಿತಿಗೆ ತಲುಪಿದೆ. … ಸ್ಥಿತಿಯಂತೂ ಮೊದಲೇ ನಾಶವಾಗಿದೆ. … ಯಂತೂ ದೇವರಿಗೇ ಪ್ರೀತಿ. ಇನ್ನೂ ಜ… ದ್ವೇಷ ಮತ್ತು ಬಂದೂಕು ಸಂಸ್ಕೃತಿ… ಅಮೆರಿಕವನ್ನು ಯಾರು ಕಾಪಾಡಬೇಕು…

● ಬಾನು ಮುಷ…

ಡೂರಪ್ಪ ಬಂದನಂತೆ ಹೆದರಬ್ಯಾಡ ಕಣಮಾವ!

ಡೂರಪ್ಪ ಬತ್ತಾ ಅವುನೆ. ನೀನೇನು ...ದ ಕಣಮಾವ. ಸರ್ಕಾರದಿಂದ ಹುಲ್ಲು ನೀರು ...ನಂತೆ" ಎಂದ ಸೀರ.

...ವುನೆಲ್ಲಿಗೆ ಬಂದನ್ನ?"

...ರೂರು ಮ್ಯಾಲೆ ಹ್ವಂಟುಬುಟ್ಟವುನೆ ಜನಗಳ ...ಕಂಡು."

...ಸಿ, ಕಷ್ಟ ಕೇಳಕ್ಕೆ ಅಂತ ಮುಖ್ಯಮಂತ್ರಿ ...ಮಂತ್ರಿಗಳವುರೆ. ಇವುನ ಕೈಲೇನಾಯ್ತದೇ?"

...ಗದೀಶ್ ಶೆಟ್ರಿಗೆ ಸಿಫಾರಸ್ ಲಟ್ರು ...ತೆ."

...ಪ, ಮುಖ್ಯಮಂತ್ರಿಯಾಗಿದ್ದೊನು, ಈಗ ...ಅಧಿಕಾರಾನೂ ಇಲ್ಲ. ವತ್ತರೆ ಎದ್ದು ಏನು ... ಅನ್ನಂಗಾಗಿರಬೇಕು. ಅದ್ಕೆ ಊರು ಮ್ಯಾಲೆ ...ಬೇಕು ಕಂಡ್ಯ."

...ವಾಗಿಲ್ಲ ಕಣ ಮಾವ, ನಿನಿಗೂ ಎಡೂರಪ್ಪನ ...ಅರ್ಥಾಗ್ಯದೆ."

...ರ್ಥಾಗದೇನು, ನೋಡಿದ್ರೆ ಗೊತ್ತಾಗದಿಲವೇನ್ನ. ...ಜೊತೆ ಇರೊ ಮಂತ್ರಿಗಳಿಗೆ ಏನಾರ ಕ್ಯಲಸ ...ರತದೆ. ಇವುನಿಗೇನಿದ್ದತೂ."

...ದರ ಜೊತಿಗೆ ಇನ್ನೊಂದು ಪ್ಲಾನು ಕಣಮಾವ. ...ು ಇನ್ನ ಐದಾರು ತಿಂಗಳಿಗೆ ಯಲಕ್ಷನ್ ...ಅಷ್ಟರಲ್ಲಿ ಕರ್ನಾಟಕ ತಿರಗಿ ಹೋಗಿರೊ ... ತಿರಗ ಗಳಿಸಿಗಳನ ಅಂತ ಪ್ಲಾನು."

...ಹೋಗಿರೊ ಮಾನ ಯಾವುದ್ನ?" ಎಂದಳು

...ದೇನೆ ಹಿಂಗಂತೀ? ಇಪ್ಪತ್ತೊಂದು ದಿನ ...ಇದ್ದು ಬಂದವುನೆ. ಕರ್ನಾಟಕದಲ್ಲಿ ...ಗೂ ಯಾವ ಮುಖ್ಯಮಂತ್ರಿನೂ ...ಗಿರಲಿಲ್ಲ. ಈ ಎಡೂರಪ್ಪ ...ಂದ. ಆದ್ರಿಂದ ಜನಗಳು ಏನು ...ವುರೆ, ನನ್ನ ಮದ್ಲಿನಂಗೆ ನೋಡ್ತರೊ ... ಅನ್ನದ ಚೆಕ್ ಮಾಡಕ್ಕೆ ವಂಟವುನೆ."

...ದು ಯಲಕ್ಷನ್ ಬಂದಾಗ ...ಮ್ತದಲವೇನ್ನ?"

...ಲಕ್ಷನ್ ಬರಗಂಟ ಸುಮ್ಮನಿರಕ್ಕಾದತೆ. ...ಲ್ಲ ಎಡೂರಪ್ಪನಂಥೋನು ಸುಮ್ಮನಿರಕ್ಕೆ ... ಇಲ್ಲ, ಅದ್ಕೆ ಜನಗಳತ್ರಕೆ ...ನೆ. ಅಂತೂ ನಮ್ಮ ಕಡಿಕೂ ಬಂದ್ರೆ ...ನಕ್ಕೆ ಹುಲ್ಲು ನೀರು ಕೇಳಬವುದು."

...ಳದೂ ಬ್ಯಾಡ, ಅವುನ್ನ ಹೋಗಿ ...ಮೊ ಬ್ಯಾಡ. ಅವುನು ಕಡುದು ಕಟ್ಟೆ ...ನಾನ್ನೊಡಿಲ್ಲವೆ. ಅವುನಿಗೋಲಿಸಿದ್ರೆ ಆ ...ದ ಗೌಡನೆ ಪರವಾಗಿಲ್ಲ ಕಂಡ್ಯ" ಎಂದ ...ವ.

...ವುನೇನು ಸುಮ್ಮನಾದನಲ್ಲಾ."

...ಮ್ಮನಾಗದೆ ಇನ್ನೇನು ಮಾಡ್ತನೆ. ಅವುನು ...ಪ್ಪನಂಗೆ ತಿರಗಬೇಕಾಗಿತ್ತೆ, ಆದ್ರು ...ಂಡಿನೋರು ಐಡಿಯ ಮಾಡಿ, ಎಡೂರಪ್ಪ ...ತಿರಗದು ಬ್ಯಾಡ, ಅವುನ ಜೊತೆ ಸದಾನಂದ ...ಅನಂತಕುಮಾರನ್ನೂ ಇರಲಿ ಅಂದವುರಂತೆ."

"ಅದೂ ಸರಿಬುಡು. ಪಾರ್ಟಿ ಅಂದ್ರೆ ಇವುನೊಬ್ಬನೆಯಾ?"


"ಅವುನು ನನ್ನಿಂದ್ಲೆ ಪಾರ್ಟಿ. ನಾನಿದ್ರೆ ಪಾರ್ಟಿ ಅನ್ನದ ಹೈಕಮಾಂಡಿಗೆ ತೋರಿಸಿಕೊಟ್ಟವುನೆ ದೊಡಪ್ಪ" ಎನ್ನುತ್ತಾ ವಾಟಿಸ್ಸೆ ಹಾಜರಾದ.

"ಅದೇನ್ನ ಬೆಂಗಳೂರು ಗಲಾಟೆ? ಜನಗಳ್ಯಲ್ಲ ಊರುಬುಟ್ಟು ಹೋಯ್ತಾ ಇದ್ದರಂತಲ್ಲ ಯಾಕ್ಲ?" ಎಂದಳು ಜುಮ್ಮಿ.

"ಬೆಂಗಳೂರು ಬುಟ್ಟು ಯಾರೂ ಹೋಗದಿಲ್ಲ ಕಣಕ್ಕ. ಹೋದ್ರು ಮೂರು ದಿನ ಬುಟಗಂಡು ಮತ್ತೆ ಬತ್ತರೆ. ನೋಡೀಗಾಗ್ಲೆ ಅಸ್ಸಾಂ ಜನ ತಿರಗ ಬತ್ತಾ ಅವುರೆ."

"ಅದೆ ಕಂಡ್ಯ ಹೋಗದ್ಯಾಕೆ ಅಂತ ಕೇಳಿದೆ."

"ನೋಡಕ್ಕ, ನಮ್ಮ ದೇಶದಗಡಿ ಈ ಉಗ್ರಿ ಹುಲ್ಲುಕೊಪ್ಪಲ ಬೇಲಿ ಇದ್ದಂಗೆ. ಯಾವ ದಿಕ್ಕಿನಿಂದ್ಲಾರ ಬಂದು ಹುಲ್ಲು, ಉಬ್ಬಲು, ತರಗು ತುಂಬಿಕಂಡು ಹೋಗಬವುದು. ಅಂಗೆ ಅಸ್ಸಾಂಗಡಿ ಭದ್ರ ಇಲ್ದೆಯಿರಕ್ಕೆ ಬಾಂಗ್ಲಾ ದೇಶದ ಜನ ಹೋಗಿ ಅಲ್ಲಿ ದಾನ್ನಿ ಮಾಡಿದರಂತೆ."



"ಅದ್ಯಾಕ್ ದಾನ್ನಿ ಮಾಡಿದ್ರು?"

"ಸಾಬರು ಇರದೆ ಅಂಗಲವೆ. ಅವುರೆಲ್ಲಿ ಹೊಂದಿಕಂಡಿದ್ದರೂ? ಎಲ್ಲೇ ಹೋದ್ರೂ ಮಸೀದಿಗೊಂದು ಜಾಗ ಹುಡುಕ್ತರೆ. ಆಮ್ಯಾಲೆ ಈದ್ಗಾ ಮೈದಾನಕ್ಕೆ ಒಂದು ಜಾಗ ನೋಡ್ತರೆ. ಹ್ವಟ್ಟೆಗೆ ಹಿಟ್ಟು ಬಟ್ಟೆ ಇಲ್ದೆಯಿದ್ರೂ ಅವ್ರದು ಕೆಲಸ ಮಾತ್ರ ಆಗ್ಲೆಬೇಕು. ಅಂಗೆ ಅಸ್ಸಾಮಲ್ಲೂ ಸುರು ಮಾಡಿದರಂತೆ. ಮದ್ಲೆ ಅಸ್ಸಾಮು ಬಡಸ್ಥನದ ರಾಜ್ಯ. ಅದರೊಳಗೆ ಇವರು ಬ್ಯಾರೆಯಾ. ಇನ್ನ ಕಿರುಸ್ತಾನರು ಬ್ಯಾರೆ ಮತಾಂತರ ಮಾಡ್ತ ಕುಂತವುರಂತೆ. ಇವುರ ನಡುವೆ ಸೀಮೆಯಣ್ಣೆ ಬೆಂಕಿ ಕಡ್ಡಿತರ ಚಿಡ್ಡಿಗಳು ಬ್ಯಾರೆ ಇದ್ದರಂತೆ. ಅಸ್ಸಾಂ ಹತ್ತಿಗಂಡು ಉರಿಯಕ್ಕೆ ಇನ್ನೇನಾಗಬೇಕು?"

"ಅಲ್ಲಿ ಹತ್ತಿಗಂಡು ಉರುದ್ರೆ ಬೆಂಗಳೂರಿಂದ ಜನ್ಯಾಕೆ ವಂಟ್ರುಲಾ?"

"ಬೆಂಗಳೂರಲ್ಲಿ ಅಸ್ಸಾಂ ಜನ ಯರಡೂವರೆ ಲಕ್ಷ ಇದ್ದರಂತೆ ಕಣಕ್ಕ. ಸೇತುವೆ, ರಸ್ತೆ ಮಾಡೊ ಕಾಮಗಾರಿ ಕ್ಯಲಸದಿಂದ ಹಿಡುದು ಇಂಜಿನಿಯರು, ಡಾಕ್ಟರು, ಹೋಟ್ಲು ನ್ಯಡಸೋರ್ಯಲ್ಲ ಅವುರೆ. ಯಾವಾಗ ಅಸ್ಸಾಂ ಜನ ಅವುರ ದೇಶದಲ್ಲಿರೊ ಬಾಂಗ್ಲಾದೇಸದ ಸಾಬರಮ್ಯಾಲೆ ಬಿದ್ದರೊ ಆಗ ಪಾಕಿಸ್ತಾನದ ಸಾಬರು, ಬೆಂಗಳೂರಲ್ಲಿರೊ ಅಸ್ಸಾಂ ಜನಗಳ ಮ್ಯಾಲೆ ನಾವು ಬೀಳ್ತಿವಿ, ಅಥವಾ ನಮ್ಮೊರು ಬೀಳ್ತರೆ ಅಂತ ಮೆಸೇಜ್ ಕಳಿಸಿದರಂತೆ. ಪಾಪ ಅದ್ಕೆ ಬೆಂಗಳೂರಲ್ಲಿರೊ ಅಸ್ಸಾಮಿಗಳ್ಯಲ್ಲ ರೈಲತ್ತಿಗಂಡು ವಂಟೋದ್ರು."

"ಅಂಗರೀಗ ವಬ್ರೂ ಇಲ್ಲ ಅನ್ನು."

"ತಿರಗ ವಾಪಸ್ಸು ಬತ್ತಾ ಅವುರೆ ಕಣಕ್ಕ. ಇನ್ನೊಂದು ವಾರದಲ್ಲಿ ಹೋಗಿರೊ ಜನಗಳ ಜೊತಿಗೆ ಇನ್ನು ವಸಿ ಜನ ಬತ್ತರೆ."

"ಅಶೋಕ, ಶೆಟ್ರು ಯಾರು ತಡುದ್ರೂ ನಿಲ್ಲಲೇಯಿಲ್ಲ, ಹೋಗೇಬುಟ್ರು ಕಣೊ ವಾಟಿಸ್ಸೆ. ಸರ್ಕಾರದೋರ ಮಾತ ನಂಬಲೇಯಿಲ್ಲ" ಎಂದ ಉಗ್ರಿ.

"ಅಶೋಕನ ಮಕ ನೋಡಿದ್ರೆ ನಂಬಿಕೆ ಬಂದತೇನೊ ಉಗ್ರಿ? ಹೋಗ್ಲಿ ಆ ಶೆಟ್ರು ಮುಖ ನೋಡಿದ್ರೆ ಬೆಂಗಳೂರಲ್ಲಿ ಇರೊ ಭರವಸೆ ಬಂದತೆ? ಅದ್ಕೆ ಪಾಪ ಯಾರಿಡುದ್ರೂ ದಕ್ಕದಂಗೆ ಹೋಗೇಬುಟ್ರು."

"ಅದಕ್ಕಿಂತ್ಲೂ ಇನ್ನೊಂದು ವಿಷಯ ಏನಪ್ಪಾ ಅಂದ್ರೆ, ನಾವೇ ಆಗ್ಲಿ ಯಾರೇ ಆಗ್ಲಿ ಹೋಗಬೇಕು ಅಂತ ವಂಟಾಗ ಹೋಗಿ ನೋಡಿಕಂಡೇ ಬತ್ತಿವಲವೆ. ಅಂಗೆ ಅಸ್ಸಾಮಿಗಳು ನಮ್ಮೂರಲ್ಲಿ ಏನೊ ಗಲಾಟಿಯಂತೆ, ನಮ್ಮೊರು ಏನೇನಾಗ್ಯವುರೆ ಅಂತ ನೋಡಿಕಂಡೇ ಬರನ ಅಂತ ಹೋಗೇಬುಟ್ರು, ಇವುರು ಯಾರಿಡುದ್ರೂ ದಕ್ಕಲಿಲ್ಲ ಅಲವೆ" ಎಂದ ಉಗ್ರಿ.

"ಆ ಪಾಕಿಸ್ತಾನದವ್ರು ಯಾವತ್ತಿಗೂ ವಳ್ಳೆ ಬುದ್ಧಿನೆ ಕಲೀಲಿಲ್ಲ ಕಂಡ್ಯ" ಎಂದು ಕಾಳಮಾವ ದಾಯಾದಿಗಳ ವಿಷಯ ಹೇಳಿದಂತೆ ದೂರಿದ.

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಅದ್ಯಂಗೆ ಕಲಿತರೆ ದೊಡಪ್ಪ? ಆ ದೇಶ ಇರದೆ ಅಂಗೆ. ಆ ದೇಶದ ಮಾನಮರಿಯಾದಿ ಬಗ್ಗೆ ಯಾವನೂ ಯೋಚನೆ ಮಾಡದಿಲ್ಲ, ಸುತ್ತಮುತ್ತಲ ದೇಸಕೆ ಕೇಡೆ ಹಾಕದೆ ಅವುರ ಕ್ಯಲಸ. ಇಡೀ ದೇಸನೆ ಅಂಗಿಲ್ಲ, ಅಲ್ಲೂ ಕೂಡ ನಿನ್ನಂಥೋರು, ಸೀರ ಚಿಗಪ್ಪನಂಥೋರು, ಜುಮ್ಮಕ್ಕನಂಥೋರ ಜೊತೆಗೆ ಮುಥಾಲಿಕ, ತೊಗಾಡಿಯಾ ತರದ ತಿಗಣೆಗಳೂ ಅವೆ. ಕಂಡಗಾಲಿಗೆ ಒಂದು ತೊಟ್ಟು ವಿಷ ಅನ್ನಂಗೆ ಅಂಥೋರ ಮಾಡೊ ಕಿಡಿಗೇಡಿ ಕ್ಯಲಸ ಒಂದೊಂದಲ್ಲ."

"ಹಾಲಿಗೆ ಇಸ ಹಾಕ್ಯರೆ ಅಂತ ಸುದ್ದಿನು ಹಬ್ಬಿಸಿದರಲ್ಲ ಹೇಳು."

"ಹಾಲಿನ ವಿಷದ ಬಗ್ಗೆ ನನಿಗ್ಯಾಕೊ ಈ ಗಣಪತಿ ಹಾಲು ಕುಡದ ಅಂತ ಸುದ್ದಿ ಮಾಡಿದರಲ್ಲಕ್ಕ ಅವುರ ಮ್ಯಾಲೇ ಡವುಟು. ಯಾಕೆ ಅಂದ್ರೆ, ಸಾಬರು ರಂಜಾನ್ ಮಾಡುವಾಗ ಹೆಣಮಕ್ಕಳು ಮೇಂದಿ ಹಚಗತ್ತರೆ. ಅದ ಹಚ್ಗಗಂಡ್ರೆ ಕೈಕಾಲು ಊತಬಂದು ರಣಗಾಯ ಆಯ್ತದೆ ಅನ್ನೊ ಸುಳ್ಳು ಸುದ್ದಿ ಜೊತೆಗೆ ಹಾಲಿಗೆ ವಿಷ ಹಾಕ್ಯವುರೆ ಅನ್ನೊ ಸುದ್ದಿ ಒಂದೇ ಮೂಲದಿಂದ ಬಂದಿರಂಗೆ ಕಾಣತ ಅದೆ. ಒಟ್ಟಿನಲ್ಲಿ ಈ ಮೊಬೈಲು ಬಂದು ಅನುಕೂಲ ಆಗದರ ಜೊತಿಗೆ ಅನಾನುಕೂಲನೂ ಜಾಸ್ತಿಯಾಯ್ತಾ ಅದೆ ಕಣಕ್ಕ."

"ಮೊಬೈಲು ಬುಡ್ಡ, ಅವು ಬಂದಮ್ಯಾಲೆ ಹೆಣ್ಣುಮಕ್ಕಳು ಹಾಳಾದೊ."


"ನಿಜ ಕಣಕ್ಕ, ಯಾವುದೇ ಹುಡುಗಿ ರಸ್ತೆಲಿ ಹೋಯಾಯಿದ್ರೆ ಸುಮ್ಮನೋಗದಿಲ್ಲ, ಮೊಬೈಲಲ್ಲಿ ಮಾತಾಡ್ತ ಹೋಯ್ತಳೆ. ಅಂದ್ರೆ ಆ ತುದಿಲಿ ಒಂದು ಮಿಕ ಅದೆ ಅಂತ ಅರ್ಥ. ಅಂತೂ ಯಲ್ಲಾ ಅನಾಹುತಗಳು ಸಾಲುಗಟ್ಟವೆ."

"ಇದನ್ಯಲ್ಲ ನೋಡಿ ದ್ಯಾವೇಗೌಡ್ರು ಅತ್ತರಂತೆ. ನಿಜವೇನ್ಲ?"

"ದ್ಯಾವೇಗೌಡ್ರು ಅತ್ತಿರೊ ಕಾರಣನೆ ಬ್ಯಾರೆ ಕಣಕ್ಕ. ಅವುರಿಗೆ ಹೆಲ್ತ ಪ್ರಾಬ್ಲಮ್ಮು. ಅದ್ಕೆ ಆಂಜನೇಯನ್ನ ನೋಡನ ಅಂತ ಊರಿಗೋಗಿದ್ರಂತೆ. ನಾನು ತಿರುಗಾಡಿ ರಾಜಕಾರಣ ಮಾಡಿದ ಜಾಗಕ್ಕೆ ತಿರಗ ಬರಕ್ಯಾಗದಿಲವಲ್ಲಾ ಅನ್ನದ ನ್ಯನಿಸಿಗಂಡು ಅತ್ತರು. ಆ ದುಃಖವ ರೈತರ ಗೋಳಿನ ಮ್ಯಾಲಾಕಿದರಂತೆ. ಇದೇ ನಿಜವಾದ ಮ್ಯಾಟ್ರು ಕಣಕ್ಕ!"


...ು ನಮಗೆ ಏನು ಮಾಡುತ್ತದೆ?

...ಜವಾದ ಸಾಹಿತ್ಯಕ್ಕೆ ತಮ್ಮ ವ್ಯಕ್ತಿತ್ವವನ್ನು ಒಡ್ಡಿಕೊಳ್ಳದಿರುವವರಿಗೆ ...ಹೇಳುವುದು ಕಷ್ಟ. ಸಾಹಿತ್ಯ ಅನ್ನುವುದು ರಂಜನೆಯಲ್ಲ, ಅದು ...ಪುಸ್ತಕಗಳನ್ನು ಬರೆಯುವ ವೃತ್ತಿಯಲ್ಲ, ಅನೇಕರು ...ರಂತೆ ರಸಾಸ್ವಾದನೆಯಲ್ಲ, ಒಮ್ಮೆ ಇದು ...ವಿಧದ ನೀಡುವ ಮೆಶೀನ್ ಎಂದು ದೃಢವಾಗಿ ...ದವರು ನವರಸಗಳನ್ನು ಕೃತಿಯಲ್ಲಿ ...ಹುಕತೊಡಗಿದರು. ಯಾವ ರಸ ಇನ್ನಾವ ...ಂದಿಗೆ ಮಿಳಿತವಾಗಿ ಬಂದಿದೆ ಎಂದು ...ಸತೊಡಗಿದರು. ಒಂದು ಕತೆಯ ವಿನ್ಯಾಸ, ಶೈಲಿ, ...ಗಳು ಎಲ್ಲವೂ ಕೆಲಸ ಮಾಡುವುದು ಈ ರಸವನ್ನು ...ದಿಸುವುದಕ್ಕೆ, ಅದಿಲ್ಲದಿದ್ದರೆ (ಅಥವಾ ...ಜೊತೆಗೆ) ಧರ್ಮವನ್ನು ಬೋಧಿಸುವುದಕ್ಕೆ, ದೇವರ ...ವನ್ನು ಓದುಗರ ಮನಸ್ಸಿನಲ್ಲಿ ಒತ್ತುವುದಕ್ಕೆ. ...ನಲ್ಲಿ ದೇವರಿಲ್ಲದ, ಆತ್ಮವಿಲ್ಲದ, ಧರ್ಮವಿಲ್ಲದ ...ನ ಭೂಮಿಯ ಮೇಲೆ ಒಬ್ಬಂಟಿಯಾಗಿ ನಿಂತು ...ಗೊಂಡಿದ್ದಾಗ, ಇಲ್ಲಿ ಏನು ಮಾಡಿದರೂ ನಮ್ಮ ವಿನಾಶದತ್ತಲೇ ...ಗುತ್ತಿದ್ದಾಗ...ನವ, ರಸದ ಮಾತುಗಳೆಲ್ಲ ಅಸಂಬದ್ಧ ಎನಿಸುತ್ತವೆ.



ಸಾಹಿತ್ಯ ಎನ್ನುವುದು ದೊಡ್ಡ ಸಾಹಿತಿಯ ಕೈಯಲ್ಲಿ ಈ ಶೂನ್ಯಮಯ ಬದುಕನ್ನು ಎದುರಿಸುವುದಕ್ಕೇ ಮೀಸಲಾಗುತ್ತದೆ. ಹತ್ತೊಂಭತ್ತನೆಯ ಶತಮಾನದಲ್ಲಿ ಮಹಾ ಸೂಕ್ಷ್ಮ ಮನಸ್ಸಿನವನಾಗಿ ಬದುಕಿದ ಪ್ರೂಸ್ಟ್ ಎಂಬ ಲೇಖಕ ತನ್ನ ಬದುಕು ಎನ್ನುವ ನಿಷ್ಠುರ ಶೂನ್ಯವನ್ನು ಎದುರಿಸುವ ಶೈಲಿಯಾಗಿ ತನ್ನಲ್ಲಿ ಹಾದುಹೋದ ಪ್ರಜ್ಞಾಪ್ರವಾಹವನ್ನು, ನೆನಪಿನ ಹೊಳೆಯನ್ನು ಅಕ್ಷರದಲ್ಲಿ ಹಿಡಿದಿಟ್ಟ. ಹದಿಮೂರು ಸಂಪುಟದಲ್ಲಿ ಇದನ್ನು ದಾಖಲೆಗೊಳಿಸಿದ. ಈಚೆಗೆ ವಿಮರ್ಶಕನೊಬ್ಬ ಅದನ್ನು ಓದಿ ತನ್ನ ವ್ಯಕ್ತಿತ್ವದಲ್ಲಿ ಹರಿಯುವಂತೆ ಮಾಡಿಕೊಂಡು ಮೊನ್ನೆ ಹೇಳಿದ: 'ಪ್ರೂಸ್ಟ್‌ನನ್ನು ಓದಿದರೆ ನಾವು ಸಂವೇದಿಸುವ ರೀತಿಯೇ ಬದಲಾಗುತ್ತದೆ; ಶ್ರೇಷ್ಠ ಸಾಹಿತ್ಯ ಹೀಗೆ ನಮ್ಮ ಗ್ರಹಿಕೆಯ ಪರಿಧಿಯನ್ನೇ ವಿಸ್ತರಿಸುತ್ತದೆ.'

ಇದೇನು ವಿಚಿತ್ರ ನೋಡಿ. ಜೇಮ್ಸ್ ಜಾಯ್ಸ್ ಎಂಬ ಐರಿಶ್ ಲೇಖಕ ತನ್ನ ಡಬ್ಲಿನ್ ನಗರದ ಅನುಭವಗಳನ್ನು ತನ್ನ ಕಾದಂಬರಿ 'ಯೂಲಿಸ್'ನಲ್ಲಿ ಮಂಡಿಸಿದ. ಪಾತ್ರಗಳು ನಿಲ್ಲುವುದೇ ಇಲ್ಲ; ನಿಂತರೆ, ಕೋಲನ್‌ಗಳಲ್ಲಿ ವಿಶ್ರಮಿಸಿಕೊಂಡರೆ, ಕಾಮಾಗಳಲ್ಲಿ ಎಡವಿದರೆ... ಎಲ್ಲವೂ ಕೃತಕವಾದೀತು ಎಂಬ ನಂಬಿಕೆಯಿಂದ ಜಾಯ್ಸ್ ಬರೆದ. ಅದು ಇಪ್ಪತ್ತನೆಯ ಶತಮಾನದ ಅಲೆದಾಟ, ನೆನಪು, ನೋವು, ನಲಿವನ್ನು ಸೃಷ್ಟಿಸಿತು.... ಆ ಕಾದಂಬರಿ ಓದಲು ತುಂಬ ಕಷ್ಟ ಎಂದು ಜನ ಓದಲಿಲ್ಲ, ಅದು ಪುನರ್ಮುದ್ರಣಗೊಳ್ಳುವುದೇ ಕಷ್ಟವಾಯಿತು.



ಆದರೆ ಜಾಯ್ಸ್ ತನ್ನ ಯೂಲಿಸಿಸ್‌ನಲ್ಲಿ ಸೃಷ್ಟಿಸಿದ ಜಗತ್ತು ಚೈನಾದ ಕಮ್ಯುನಿಸ್ಟ್ ವ್ಯವಸ್ಥೆಯಲ್ಲಿ ವ್ಯಕ್ತವಾಗುತ್ತಿತ್ತು. ಚೈನಾದ ಕೆಲವರು 'ಯೂಲಿಸಿಸ್' ಕಾದಂಬರಿಯನ್ನು ಅನುವಾದಿಸಿದರು. ಅದು ಚೈನಾದಲ್ಲಿ ಅತ್ಯಂತ ಜನಪ್ರಿಯ ಕೃತಿಯಾಗಿ ಮಾರಾಟವಾಯಿತು; ಜನ ಅದನ್ನು ತಮ್ಮ ಅಂತರ್ಯಕ್ಕೆ ಕನ್ನಡಿ ಹಿಡಿದಂತೆ....ಓದಿದರು.

ಸಾಹಿತ್ಯ ಹೀಗೆ ನಮ್ಮ ಸೂಕ್ಷ್ಮಜ್ಞತೆಯನ್ನು ವಿಸ್ತರಿಸಬೇಕು. ನಾವು ನೋಡುವ ರೀತಿಯನ್ನು ಹರಿತಗೊಳಿಸಬೇಕು. ನಮ್ಮನ್ನು ಹೆಚ್ಚು ಹೆಚ್ಚು ಅನುಭವ ಸಂಪನ್ನರಾಗಿ ಮಾಡಬೇಕು.

ಹಾಗೆ ಮಾಡಿದ ಕೃತಿ ನಮ್ಮ ಕೃತಜ್ಞತೆ ಗಳಿಸುತ್ತದೆ.

ಅಕ್ಟೋಬರ್ 1, 1997

ಕಾಸಿದ್ದ ಕೈಲಾಸ ಎನ್ನುತ್ತಾರೆ. ಹಣ ಎಂದರೆ ಹೆಣವೂ ಬಾಯಿಬಿಡುತ್ತೆ ಎಂದೂ ಹೇಳುತ್ತಾರೆ. ಜಾಗತೀಕರಣ ಯುಗದಲ್ಲಂತೂ ಹಣ ಇದ್ದಲ್ಲಿ ಎಲ್ಲ, ಇಲ್ಲದಿದ್ದರೆ ಏನೂ ಇಲ್ಲ, ಎಲ್ಲರ ಗುರಿಯೂ ಹಣ ಸಂಪಾದನೆ. ವಿದ್ಯೆ ಕಲಿಯುತ್ತಾರೆ. ಜ್ಞಾನಸಂಪಾದನೆಗಾಗಿ ಅಲ್ಲ, ಹಣ ಸಂಪಾದನೆಗಾಗಿ. ಅದೇ ಮುಖ್ಯ. ಮಾರ್ಗ ಗೌಣ.

ಪ್ರಪಂಚವೇ ಹಣದ ಹಿಂದೆ ಓಡುತ್ತಿರುವಾಗ ನ್ಯಾಯಾಧೀಶರು ಮಾತ್ರ ಹಾಗೆ ಮಾಡಬಾರದು ಎಂದು ಹೇಳುವುದು ಮೂರ್ಖತನ. ಅವರು ಹಾಗೆ ಮಾಡದೆ ಸನ್ಯಾಸಿ ತರಹ ಬಾಳುವೆ ಮಾಡುತ್ತೀನಿ ಎಂದರೂ ನ್ಯಾಯವಾದಿಗಳು ಬಿಡುವುದಿಲ್ಲ! ಸನ್ಯಾಸಿಯ ಹಾಗೆ ಎಂದು ಮಾತಿಗೆ ಹೇಳಿದೆ ಅಷ್ಟೆ. ಆಧುನಿಕ ಕಾವಿಧಾರಿಗಳಿಗೂ ಆಧ್ಯಾತ್ಮಕ ಹಸಿವಿಗಿಂತ 'ಲಕ್ಷ್ಮೀ ಕೃಪೆ'ಯ ಹಸಿವೇ ಸದಾ ಕಾಡುತ್ತದೆ! ಅದು ಹಾಗಿರಲಿ. ಇಂತಹ ನ್ಯಾಯಾಧೀಶರು ನೀಡಿದ ತೀರ್ಪಿಗೆ ಸೊಗಸಾದ ನುಡಿಗಟ್ಟು ಸಿಕ್ಕಿದೆ. ಅದೇ 'ಕಾಸಿನ ತೀರ್ಪು!'

'ಕಾಸಿಗಾಗಿ ಸುದ್ದಿ' ಬಂದಿತ್ತು, ಇದು ಇತ್ತೀಚಿನ ಸಂಗತಿ.

ಯಾರ ಅಮೂಲ್ಯ ಕೊಡುಗೆ ಇದು?

ಇನ್ನು ಯಾರದ್ದು? ಮಮತಾ ದೀದಿಯದ್ದು!

ಅವರ ಮಾತೇ ಹೀಗೆ... ಕೆಚ್ಚದೆಯ ಬಿಚ್ಚುನುಡಿ.

ಯಾಕೆ ಹೇಳಿದರು ಹೀಗೆ?

'ಕಾರ್ಟೂನ್ ತೀರ್ಪು' ಪ್ರಚೋದನೆ ಏನೇನೂ ಇಲ್ಲವಂತೆ!

ಏನು ಇದು 'ಕಾರ್ಟೂನ್ ತೀರ್ಪು'?

ದೀದಿಗೂ ಕಮ್ಯುನಿಸ್ಟರಿಗೂ ಎಣ್ಣೆ ಸೀಗೆಕಾಯಿ ನಂಟು. ಆಕೆಯನ್ನು ವ್ಯಂಗಿಸುವುದೇ ಕಮ್ಯುನಿಸ್ಟರ ವ್ರತ. ಯಾರೋ ಇಬ್ಬರು ಕಾಲೇಜಿನ ಪ್ರೊಫೆಸರುಗಳಂತೆ. ಅವರೂ ಕಮ್ಯುನಿಸ್ಟರೇ ಇರಬೇಕು. ಅವರ ಕೈಗೆ ದೀದಿಯ ಅವಹೇಳನಕಾರಿ ವ್ಯಂಗ್ಯಚಿತ್ರ ಸಿಕ್ಕಿತಂತೆ. ಸಿಕ್ಕುವುದು ಏನು ಬಂತು. ಎಲ್ಲೋ ಹುಡುಕಿ ತಂದಿರುತ್ತಾರೆ. ಅಂತಹದ್ದೇ ಅವರ ದಿವನಿತ್ಯದ ಕಸುಬು ತಾನೆ. ಅದನ್ನು ಪ್ರಶಂಸನೀಯ ದೃಷ್ಟಿಯಲ್ಲಿ ನೋಡುತ್ತಾ ಸಂತೋಷ ಪಡುತ್ತಿದ್ದರಂತೆ. ಈ ಕಮ್ಯುನಿಸ್ಟರಿಗೆ ದೀದಿ ಅವಹೇಳನಕಾರಿ ಚಿತ್ರವೇ ವಿಕೃತ ತೃಪ್ತಿ ನೀಡುತ್ತದೆ ಎಂಬುದು ಜನಜನಿತವಾಗಿದೆಯಂತೆ. ತಮ್ಮ ನಾಯಕಿಗೆ ಈ ರೀತಿಯ 'ಆರಾಧನಾ ಮಹೋತ್ಸವ' ಮಾಡುತ್ತಿರುವುದು ಅವರ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಕೋಪ ಬರಿಸಿತಂತೆ. ಪಶ್ಚಿಮ ಬಂಗಾಳದಲ್ಲಿ ಅವರು ಹೇಳಿದ್ದೇ ಕಾನೂನು ಅಂತೆ. ಈ ಪ್ರೊಫೆಸರುಗಳು ಕಾನೂನು ಮೀರಿದ್ದಾರೆ ಅನ್ನಿಸಿತಂತೆ. ಸೆರೆಮನೆಯ ಕಂಬಿ ಎಣಿಸುವ ಹಾಗೆ ಮಾಡಿದರಂತೆ. ಕಾರ್ಯಕರ್ತರ ಕಾನೂನು ಅಲ್ಲಿನ ಮಾನವ ಹಕ್ಕು ಆಯೋಗಕ್ಕೆ ಸರಿ ಕಾಣಿಸಲಿಲ್ಲ, ಈ ಕೃತ್ಯ ಮಾನವಹಕ್ಕುಗಳ ಉಲ್ಲಂಘನೆಯಾಗಿ ತೋರಿತಂತೆ. ತಲಾ ಐವತ್ತು ಸಾವಿರ ರೂಪಾಯಿ ಪರಿಹಾರ ನೀಡಲು ಆದೇಶಿಸಿತಂತೆ. ಇದೇ 'ಕಾರ್ಟೂನ್ ತೀರ್ಪು!'

ನ್ಯಾಯಾಂಗ ವ್ಯವಸ್ಥೆಯ ವಿರುದ್ಧ ದೀದಿ ಮುನಿಯಲು ಇದು ಕಾರಣ ಅಲ್ಲವೇ ಅಲ್ಲ! ಪರಂತು ಪಂಚೇಂದ್ರಿಯಗಳನ್ನು ಸದಾ ಜಾಗ್ರತ ಅವಸ್ಥೆಯಲ್ಲಿಟ್ಟುಕೊಂಡು ಪ್ರಪಂಚದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು ಅವರು. ಆಗ ಅವರ ಅರಿವಿಗೆ ಬಂದದ್ದು ಇದು!

ಕಡುಭ್ರಷ್ಟರಿಗೆ ನ್ಯಾಯಾಲಯ ಜಾಮೀನೋ, ನಿರೀಕ್ಷಣಾ ಜಾಮೀನೋ ನೀಡಿದಾಗ ನಮಗೂ ಅನ್ನಿಸುತ್ತೆ ಇದು 'ಕಾಸಿನ ತೀರ್ಪು' ಎಂದು. ಹಾಗೆ ಬಹಿರಂಗವಾಗಿ ಹೇಳಲು 'ನ್ಯಾಯಾಂಗನಿಂದನೆ' ಭೂತ ಅಡ್ಡ ಬರುತ್ತದೆ. ಆದರೆ ದೀದಿಯದ್ದು ನಮ್ಮಂತಹ ಪುಕ್ಕಲು ಜೀವ ಅಲ್ಲ. ಉಕ್ಕಿನ

ಕಾಸಿನ ತೀರ್ಪು



ಮಹಿಳೆ ಅವರು. ಎಂದೇ ಈ ಸತ್ಯದ ಸ್ಫೋಟ!

ದೀದಿಗೆ ಆಗದವರು, ಅವರು 'ನ್ಯಾಯಾಂಗದಲ್ಲಿ ತೀರ್ಪು ಮಾರಾಟದ ವಸ್ತು ಆಗಿದೆ' ಎಂದು ಹೇಳಿದ ಸಂದರ್ಭವನ್ನು ಗಮನಕ್ಕೆ ತರುತ್ತಾರೆ. ವಿಧಾನಸಭೆಯ 75ನೇ ವರ್ಷಾಚರಣೆಯ ಶುಭ ಸಂದರ್ಭ ಅದು ನಿಜ. ವಿಧಾನಸಭೆಯ ಆವರಣದ ಒಳಗೆ ಹೇಳಿದ್ದೂ ನಿಜ. ಆದರೆ ಆಗ ಅಧಿವೇಶನ ನಡೆಯುತ್ತಿರಲಿಲ್ಲ ಎಂಬುದನ್ನು ಮರೆಯುತ್ತಾರೆ!

ತೀರ್ಪು ಮಾರಾಟಕ್ಕಿದೆ ಎಂಬ ದೀದಿ ಮಾತು ಸಿಡಿಲಿನಂತೆ ಬಡಿಯಿತು ನ್ಯಾಯಾಂಗ ಕುಟುಂಬಕ್ಕೆ!

ವಕೀಲರು ಪ್ರತಿಭಟಿಸಿದರು. ನ್ಯಾಯಾಧೀಶರು ಸಿಡಿದೆದ್ದರು!

ಹೂಡಿದರು ನ್ಯಾಯಾಂಗನಿಂದನೆ ದಾವೆ!

ಬೆದರಲಿಲ್ಲ ದೀದಿ. 'ನಾನೂ ವಕೀಲೆ. ಇದನ್ನು ಎದುರಿಸುವುದು ನನಗೆ ತಿಳಿದಿದೆ' ಎಂದರು!

ಇತ್ತೀಚಿನ ಸುದ್ದಿ ಏನು ಅಂದರೆ ನ್ಯಾಯಾಂಗ ಕುಟುಂಬದಲ್ಲೇ ವಿಭಜನೆಯಾಗಿದೆಯಂತೆ. 'ಇದು ನಮ್ಮೆಲ್ಲರಿಗೂ ಆದ ಅವಮಾನ. ನ್ಯಾಯಾಂಗದ ಪವಿತ್ರತೆಯನ್ನೇ ಹಾಳು ಮಾಡುವ ಪ್ರಯತ್ನ. ಇಂತಹ ದುರ್ನಡತೆಗಾಗಿ ಆಕೆಗೆ ಶಿಕ್ಷೆ ಆಗಲೇಬೇಕು' ಎಂದು ಒಂದು ಗುಂಪು ಪ್ರತಿಜ್ಞೆ ಮಾಡಿದರೆ ಇನ್ನೊಂದು ಗುಂಪು 'ಇದನ್ನು ಇಲ್ಲಿಗೇ ಮುಕ್ತಾಯ ಮಾಡುವುದು ಸೂಕ್ತ. ವಾದವಿವಾದ ಮುಂದುವರಿದಿದ್ದೇ ಆದರೆ ನ್ಯಾಯಾಂಗದ ಕಬೋರ್ಡಿನಿಂದ ಇನ್ನೂ ಎಂತೆಂತಹ ಅಸ್ಥಿಪಂಜರಗಳು ಹೊರಬಂದು ಅದರ ಮಾನ ಮೂರು ಕಾಸಿಗೂ ಇಲ್ಲದಂತಾಗಬಹುದು' ಎಂದು ಚಿಂತಿಸುತ್ತಿದೆಯಂತೆ! ಇವರು ಎಷ್ಟೇ ಆಗಲಿ ಅನುಭವಸ್ಥರು ಇರಬೇಕು!

ಹಸಿವು! ಹಸಿವು!

'ಆಧ್ಯಾತ್ಮಿಕ ಹಸಿವು ತಣಿಸಿ!' ಎಂದು ಯಾರೂ ರವಿಶಂಕರ ಗುರೂಜಿ ಅವರ ಕಾಲು ಹಿಡಿದುಕೊಂಡು ಬಿದ್ದಿರಲಿಲ್ಲ ನಿಜ. ಆದರೂ ಗುರೂಜಿ ಅವರ ಅಂತರಾತ್ಮಕ್ಕೆ ತಿಳಿದಿತ್ತು, ಈ ಜನರಿಗೆ ಅದು ಬೇಕು ಎಂದು. ಬೇಡಿಕೆ ಪೂರೈಸುವುದು ತಮ್ಮ ಧರ್ಮ ಎಂದು ಭಾವಿಸಿದರು. ಬೆಂಗಳೂರಿನಲ್ಲಿ ಆಶ್ರಮ ತೆರೆದರು. ಆರ್ಟ್ ಆಫ್ ಲಿವಿಂಗ್ ಪ್ರಾರಂಭ ಆಯಿತು. ಆದರೂ ಗುರೂಜಿ ಅವರ ಮನಸ್ಸಿಗೆ ಸಮಾಧಾನವೇ ಇಲ್ಲ, ಆಧ್ಯಾತ್ಮಿಕ ಹಸಿವು ಬೆಂಗಳೂರಿಗರಿಗೆ ಇರುವಂತೆಯೇ ಇತರರಿಗೂ ಇರುವುದಿಲ್ಲವೆ? ಚಡಪಡಿಸಿತು ಗುರೂಜಿ ಆತ್ಮ -ತಮ್ಮ ಕಾರ್ಯಕ್ಷೇತ್ರ ವಿಸ್ತರಿಸಲು ಯೋಚಿಸಿದರು. ದೊಡ್ಡ ಮನಸ್ಸು ಅವರದು!

ಮೈಸೂರು ನಗರಕ್ಕೆ ಬಂದರು. ಅವರ ಪಾದಸ್ಪರ್ಶದಿಂದ



ಎಚ್.ಎಲ್. ಕೇಶವಮೂರ್ತಿ

ಅಣಕ

ಪುನೀತ ಆಯಿತು ಆ ನಗರ. ಆಶ್ರಮ ಪ್ರಾರ... ಸೂಕ್ತ ಸ್ಥಳಕ್ಕೆ ಅಜಮಾಯಿಷಿ ಮಾಡಿದರು. ಚಾ... ಬೆಟ್ಟದ ತಪ್ಪಲು ಪ್ರಶಸ್ತವಾಗಿತ್ತು, ಆದರೆ... ಆಗಲೇ ಹ... ಗುರುಗಳು ಮೈಸೂರಿಗರ ಆಧ್ಯಾತ್ಮಿಕ ಹಸಿವಿಗೆ ಒ... 'ಆಶ್ರಮ'ಗಳನ್ನು ಆಗಲೇ ತಪ್ಪಲಿನಲ್ಲಿ ತೆರೆದಿದ್ದರು! ಚಾ... ತಾಯಿಯ ದಯೆ. ಆಧ್ಯಾತ್ಮಿಕ ಹಸಿವು ಸಂಪೂರ್ಣ... ಆವರಿಸಿರಲಿಲ್ಲ, ಆರ್ಟ್ ಆಫ್ ಲಿವಿಂಗ್‌ಗಾಗಿಯೆ... ಭಾಗ ಉಳಿಸಿದ್ದಳು ಆ ತಾಯಿ. ತಾಯಿಯ... ಎಂದು ಗುರೂಜಿ ಅವರು ಐದೂ ಚಿಲ್ಲರೆ... ಭದ್ರವಾದ ಬೇಲಿ ಎಳೆಸಿ ಮೈಸೂರಿಗರ ಆಧ್ಯಾತ್ಮಿಕ... ನೀಗಿಸುವ ಆರ್ಟ್ ಆಫ್ ಲಿವಿಂಗ್ ಮೆರೆದರು...

ರವಿಶಂಕರ್ ಗುರೂಜಿ ಅವರ ಸದ್ಭಾವನೆಯನ್ನು... ಮಾಡಿಕೊಳ್ಳಲಾಗದವರಿಗೆ ಇದು 'ಭೂಕಬಳಿಕೆ'... ಗೋಚರಿಸಿತು. ಸರ್ವಸಂಗಪರಿತ್ಯಾಗಿಗಳು ಭೂದೇವಿ... ಆಕ್ರಮಣ ಮಾಡುವುದಿಲ್ಲ, ಒಂದು ವೇಳೆ ಮಾ... ಅದು 'ಲೋಕಕಲ್ಯಾಣಾರ್ಥ' ಎಂಬ ಸರಳ ಸತ್ಯದ... ಅವರಿಗಿರಲಿಲ್ಲ, ಸಂಬಂಧಿಸಿದ ಅಧಿಕಾರಿಗಳಿಗೆ 'ಭೂ... ದೂರು ನೀಡಿದರು! ಅಧಿಕಾರಿಗಳೂ ದೂರ... ಜಾತಕದವರೇ ಇರಬೇಕು. ಆರ್ಟ್ ಆಫ್ ಲಿ... ಧ್ಯೇಯೋದ್ದೇಶ ಅರ್ಥ ಮಾಡಿಕೊಳ್ಳಲಿಲ್ಲ, ಆಧ್ಯಾತ್ಮಿಕ... ನೀಗಿಸಲು ಈ ಪ್ರಯತ್ನ ಎಂದು ತಿಳಿದುಕೊಳ್ಳಲಿಲ್ಲ... ಮುಂದೆ ನೋಡದೆ ಜಾಗ ತೆರವುಗೊಳಿಸಲು ನೋ... ನೀಡಿದರು.

ಆರ್ಟ್ ಆಫ್ ಲಿವಿಂಗ್ ತೆರವುಗೊಳಿಸಲು ಬ...

ಮೈಸೂರಿಗರ ಪುಣ್ಯ, ಆಧ್ಯಾತ್ಮಿಕ ಹಸಿವು ಹಿ... ಇನ್ನೊಂದು ಆಶ್ರಮ ದೊರೆಯುವಂತಾಯಿತು.

ಮುಕ್ಕಿರಿತ ಯಾಕೋ ಕಾಣೆ

ರಾಜಕಾರಣಿಗಳು ಹಣ ಆಸ್ತಿ ಮಾಡಿಕ... ದಿಲ್‌ದಾರರ ಹಾಗೇ ಬದುಕುವುದನ್ನ ಕಂಡು ... ಬೆಂಕಿ ಹಚ್ಚಿಕೊಳ್ಳುವವರನ್ನು ಕಂಡಿದ್ದೀನಿ. ಇದನ್ನು ಕೇ... ತಮಿಳುನಾಡಿನ ಒಬ್ಬರಿಗೆ ರಾಜಕಾರಣಿಗಳು ಮೂರು...


ಸೋನಿ ಸೋರಿಯ ವ್ಯಥೆ ಕಣ್ಣೀರು ತರಿಸಿತು

ಸೋನಿ ಸೋರಿ ಎಂಬ ಆದಿವಾಸಿ ಮಹಿಳೆಗೆ ನಕ್ಸಲ್ ಹಣೆಪಟ್ಟಿ ಕಟ್ಟಿ ಚಿತ್ರವಿಚಿತ್ರ ರೀತಿಯಲ್ಲಿ ಹಿಂಸೆ ನೀಡುತ್ತಿರುವುದು ಆಕೆ ನ್ಯಾಯಮೂರ್ತಿಗಳಿಗೆ ಬರೆದ ಪತ್ರದಿಂದಲೇ ತಿಳಿಯಬಹುದು. ಆಕೆಯ ಪತ್ರವನ್ನು ಓದಿದ ತಕ್ಷಣ ನನಗೆ ನೆನಪಾದದ್ದು ಖ್ಯಾತ ಲೇಖಕಿ ಮಹಾಶ್ವೇತ ದೇವಿ ಅವರ 'ದ್ರೋಪದಿ' ಎಂಬ ಕಥೆ. ಆ ಕಥೆಗೂ, ಸೋನಿ ಸೋರಿ ಇರುವ ಸಂದರ್ಭಕ್ಕೂ ಹೆಚ್ಚು ವ್ಯತ್ಯಾಸಗಳಿಲ್ಲ, ಆ ಕಥೆಯ ಹೆಣ್ಣು ನಿಜಜೀವನದಲ್ಲಿ ನಕ್ಸಲ್ ಆಗಿದ್ದು ಪೊಲೀಸ್ ಎನಕೌಂಟರ್‌ನಲ್ಲಿ ತನ್ನ ಪತಿಯನ್ನು ಕಳೆದುಕೊಳ್ಳುತ್ತಾಳೆ, ಆದರೂ ಎದೆಗುಂದದೆ ತನ್ನ ಹೋರಾಟವನ್ನು ಮುನ್ನಡೆಸುತ್ತಾಳೆ. ಕೊನೆಗೆ ಆಕೆಯೂ ಪೊಲೀಸರಿಗೆ ಸಿಕ್ಕಿಬೀಳುತ್ತಾಳೆ. ಅವಳ ವಿಚಾರಣೆ ನಡೆಸುವ ಪೊಲೀಸರು ಆಕೆಯನ್ನು ವಿವಸ್ತ್ರ ಮಾಡುತ್ತಾರೆ. ಆದರೂ ಆಕೆ ತನ್ನತನವನ್ನು ಕಾಪಾಡಿಕೊಂಡು ಪೊಲೀಸರಿಗೆ ತಲೆ ಬಾಗಿಸದೆ ನಿಲ್ಲುತ್ತಾಳೆ. ಆ ಕೇಸ್‌ನ ನೇತೃತ್ವ ವಹಿಸಿಕೊಂಡಿರುವ ಪೊಲೀಸ್ ಅಧಿಕಾರಿ ಆಕೆಯನ್ನು ಕರೆತರಲು ಹೇಳಿದಾಗ ಆಕೆ ಯಾವ ರೀತಿ ಇರುತ್ತಾಳೆಯೋ ಅದೇ ಸ್ಥಿತಿಯಲ್ಲಿ ಆತನ ಮುಂದೆ ಬಂದು ನಿಲ್ಲುತ್ತಾಳೆ. ಆಗ ಆಕೆ ನೀಡುವ ಕಾರಣ "ನಾನು ನನ್ನ ಸಮಾಜವನ್ನು ಪ್ರತಿನಿಧಿಸುತ್ತೇನೆ, ಹಾಗಾಗಿ ನಾನು ಹೀಗೆ ಇರುವೆ. ನಿಮಗೆ ಆಗುವುದಿಲ್ಲವಾದಲ್ಲಿ ನಿನ್ನ ಸಮಾಜದಲ್ಲಿ ನಾನು ಇರುವುದೇ ತಪ್ಪು."

ಆ ಕಥೆಗೂ ಸೋನಿ ಸೋರಿಯ ಸನ್ನಿವೇಶಕ್ಕೂ ಇರುವ ಸಾಮ್ಯತೆ ಯಾವುದೆಂದರೆ ಎರಡರಲ್ಲೂ ಮಹಿಳೆಯರು ಪುರುಷ ಪ್ರಧಾನ ವ್ಯವಸ್ಥೆಗೆ ಸೆಡ್ಡು ಹೊಡೆಯುವುದು. ಪುರುಷ ಪ್ರಧಾನ ವ್ಯವಸ್ಥೆಯ ಬಹುಮುಖ್ಯ ಭಾಗವಾದ ಪೊಲೀಸರ ವಿರುದ್ಧ ಸೋನಿ ಸೋರಿ ನಿಲ್ಲುವ ಮೂಲಕ ತೋರಿರುವ ಎದೆಗಾರಿಕೆಯನ್ನು ಮೆಚ್ಚಲೇಬೇಕು. ಇವರಿಬ್ಬರೂ ಅನ್ಯಾಯ, ಅನಾಚಾರ, ದೌರ್ಜನ್ಯದ ವಿರುದ್ಧ ಸಿಡಿದು ನಿಂತಿದ್ದಾರೆ.

- ಅಪೂರ್ವ ಪಿ.ಟಿ. ಈ ಮೇಲ್ ಮೂಲಕ

'ಕಂಡಹಾಗೆ' ಅಂಕಣದಲ್ಲಿ ಗೌರಿ ಲಂಕೇಶರು ಸೋನಿ ಸೋರಿಯ ಬಗ್ಗೆ ಬರೆದದ್ದನ್ನು ಓದಿ ಮನಸ್ಸು ಭಾರವಾಯಿತು. ಪ್ರಭುತ್ವವೊಂದು ತನ್ನ ಮಾನವೀಯ ಮೌಲ್ಯವನ್ನು ಮರೆತು



ನಡೆಯುವಾಗೆಲ್ಲ ಇಂತಹ ಹೀನಕೃತ್ಯಗಳು ನಡೆಯುತ್ತಿರುತ್ತವೆ. ಮೇಲುವರ್ಗಗಳ ಬೆಂಬಲದಿಂದ ನಡೆಯುವ ಪ್ರಭುತ್ವದಿಂದ ನಾವು ಮಾನವ ಹಕ್ಕುಗಳ ರಕ್ಷಣೆಯನ್ನು ನಿರೀಕ್ಷಿಸುವುದೇ ಮೂರ್ಖತನವಾಗುತ್ತದೆ.


ಇನ್ನು ಮೀಸಲಾತಿಯ ಬಗ್ಗೆ ಶಿವಸುಂದರ್ ಚೆನ್ನಾಗಿ ಬರೆದಿದ್ದಾರೆ. ದಲಿತರಿಗೆ ಅವಕಾಶಗಳನ್ನು ನಿರಾಕರಿಸುತ್ತಲೇ ಬಂದ ಮೇಲುವರ್ಗದ ಜನಕ್ಕೆ ಇವತ್ತಿಗೂ ಮೀಸಲಾತಿಯ ಬಗ್ಗೆ ಅಪಾರ ಅಸಹನೆಯಿದೆ. ಉದಾರೀಕರಣದ ನಂತರವಂತೂ ಈ ಮೀಸಲಾತಿಯೆನ್ನುವುದು ಕೇವಲ ಸರಕಾರಿ ವಲಯಕ್ಕೆ ಸೀಮಿತವಾಗಿದೆ. ಖಾಸಗಿ ಕ್ಷೇತ್ರದಲ್ಲಿ ದಲಿತರಿಗೆ ಯಾವುದೇ ತೆರನಾದ ಮೀಸಲಾತಿ ದೊರೆಯುತ್ತಿಲ್ಲ, ಹೀಗಾಗಿ ಖಾಸಗಿ ಕ್ಷೇತ್ರದಲ್ಲಿ ದಲಿತರು ಅವಕಾಶ ವಂಚಿತರಾಗೇ ಇರಬೇಕಾಗಿದೆ. ಪ್ರತಿಭೆ ಎಂಬ ಮಹಾನ್ ಆಯುಧವನ್ನು ಝಳಪಿಸುತ್ತ ಈ ದೇಶದ ಜನರನ್ನು ದಿಕ್ಕುತಪ್ಪಿಸುತ್ತಿರುವ ಶಕ್ತಿಗಳಿಗೆ ಪಾಠ ಕಲಿಸಲಾದರೂ ಖಾಸಗಿ ಕ್ಷೇತ್ರದಲ್ಲಿಯೂ ಮೀಸಲಾತಿ ಬೇಕೆಂದು ನಾವೀಗ ಒತ್ತಾಯಿಸಬೇಕಾಗಿದೆ.

ಪತ್ರಿಕೆಯ ಜನಪರ ಕಾಳಜಿ ಹೀಗೇ ಮುಂದುವರೆಯಲಿ. ಜೊತೆಗೆ ನನ್ನದೊಂದು ಬೇಡಿಕೆಯಿದೆ. ಸಮಕಾಲೀನ ಸಾಹಿತ್ಯಕ್ಕೆ ಸ್ವಲ್ಪ ಜಾಗ ಕೊಡಿ.

- ಕು.ಸ.ಮಧುಸೂದನ್, ರಂಗೇನಹಳ್ಳಿ (ತರೀಕೆರೆ ತಾಲ್ಲೂಕು)

ಅಂಬೇಡ್ಕರ್ ಅವರನ್ನು ಆರಿಸಿದ ಎಲ್ಲಾ ಮಾನವತಾವಾದಿಗಳಿಗೆ ಧನ್ಯವಾದಗಳು

ಇಡೀ ದೇಶ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಲ್ಲಿ ಆಚರಿಸಲು ತಯಾರಿ ನಡೆಸುತ್ತಿತ್ತು. ಸಿಎನ್‌ಎನ್ ಐಬಿಎನ್ ಚಾನೆಲ್ ನಡೆಸಿದ 'ಗಾಂಧಿ ನಂತರ ಶ್ರೇಷ್ಠ ಭಾರತೀಯ' ಎಂಬ ಕಾರ್ಯಕ್ರಮದಲ್ಲಿ ಮಹಾ ಮಾನವತಾವಾದಿ ಅಂಬೇಡ್ಕರ್ ಅವರು ಶ್ರೇಷ್ಠ ಭಾರತೀಯರಾಗಿ ಅತೀಹೆಚ್ಚು ಓಟುಗಳನ್ನು ಪಡೆದು ಆಯ್ಕೆಯಾದರು. ಭಾರತೀಯ ಮಾನವತಾವಾದಿಗಳಿಗೆ ದೊರೆತಂತಹ ಜಯ ಇದಾಗಿತ್ತು, ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಅಪಮಾನ ಮಾಡುವವರಿಗೆ ಇದು ಸರಿಯಾದ ಉತ್ತರವಾಗಿತ್ತು. ವಿದ್ಯಾವಂತರು ಅಂಬೇಡ್ಕರ್ ಅವರನ್ನು ಮೆಚ್ಚಿಕೊಳ್ಳುತ್ತಾರೆ ಎಂದು ತಿಳಿದು ನಾವೆಲ್ಲ ಬೀಗಿದ್ದೇ ಬೀಗಿದ್ದು. ಆದರೆ ನನಗೆ ಅದು ತಾತ್ಕಾಲಿಕವಾಯಿತು. ಏಕೆಂದರೆ ಮಾನವೀಯತೆಗೆ ಸೆಡ್ಡು ಹೊಡೆಯುವ ಘಟನೆಗಳು ನನ್ನ ಸುತ್ತ ನಡೆದವು.



ಮೈಸೂರಿನಿಂದ ಬೆಂಗಳೂರಿಗೆ ಬರುವಾಗ ಬಸ್ಸಿನಲ್ಲಿ ಒಬ್ಬ ರೈತ ಪರಿಚಯವಾದರು. ಅವರಿಗೆ ವಯಸ್ಸಾಗಿದ್ದು ಕಣ್ಣಿನ ಸಮಸ್ಯೆಯಿಂದ ವೈದ್ಯರ ಬಳಿ ಬಂದಿದ್ದರಂತೆ. ಆ ವಯಸ್ಸಿಗೆ ಸಹಜವಾಗಿ ಮಾತು ಹೆಚ್ಚು, ಅವರೇ ಮಾತು ಆರಂಭಿಸಿ ಇಂದ್ರನನ್ನು, ಮಳೆರಾಯನನ್ನು ಬೈದರು. ... ಬವಣೆಯನ್ನು ಬಿಚ್ಚಿ ಹೇಳುತ್ತಿದ್ದರು. ಅದು ಸತ್ಯವೂ ... ಮಾತು ಮುಂದುವರೆಸಿ "ಈ ಮೊದಲೆಲ್ಲ ಚೆ... ಆದರೆ ಯಾವಾಗ ಜಾತಿ ಭೇದ ಮಾಡೋದು ... ಆಗ್ತಾ ಇದಿಯೊ ಅವಾಗಿಂದ ಈ ಮಳೆ ಸರಿಯಾ... ಇಲ್ಲ" ಎಂದರು. ಅದನ್ನು ಕೇಳಿ ನನಗೆ ಆಶ್ಚರ್ಯವಾ... "ಹಾಗಾದ್ರೆ ಜಾತಿ ಭೇದ ಇರಬೇಕು ಅಂತೀರ?" ... ಅದಕ್ಕವರು "ಹೂ ಮತ್ತೆ? ಮೊದಲೆಲ್ಲ ಗೌ... ಮನೆ ಮುಂದೆ ಚಪ್ಪಲಿ ಬಿಡೋ ಜಾಗದಲ್ಲಿ ... (ಹೊಲೆಮಾದಿಗರು) ಕುಂತ್ಕತಿದ್ರು. ಆದ್ರೆ ಈಗ ... ಪಕ್ಕಕ್ಕೆ ಬಂದು ಕುಂತ್ಕತಾರೆ. ಕಾಲ ಕೆಟ್ಟೋಯ್ತು ... ಎಂದಾಗ ಅವರ ಚಿಂತನೆಗೆ ನಗಬೇಕೊ, ಅಯ್ಯೋ ... ಎನಬೇಕೊ ಅರ್ಥವಾಗಲಿಲ್ಲ. "ಹಾಗಾದ್ರೆ ಈಗ ... ಡಾಕ್ಟರತ್ರ ಹೋಗಿದ್ರಲ್ಲ ಅವರು ನಿಮ್ಮ ಜಾತಿ... ಪ್ರಶ್ನಿಸಿದೆ. ಅದಕ್ಕವರು "ಗೊತ್ತಿಲ್ಲ ಬುಡಿ" ... ಮತ್ತೆ "ಈಗ ನಿಮ್ಮವರಿಗೇನಾದರೂ ಆಪ... ಮಾಡೋಕೆ ರಕ್ತ ಬೇಕು ಅಂದ್ರೆ, ನೀವು ... ಜಾತಿಯವರನ್ನೇ ಹುಡುಕ್ಕೊಂಡು ರಕ್ತ ಕೊಡು... ಎಂದೆ. ಅಷ್ಟೊತ್ತಿಗಾಗಲೇ ನನ್ನ ಮಾತಿನ ಮ... ಅರ್ಥಮಾಡಿಕೊಂಡ ಅವರು "ಅದಕ್ಕೆಲ್ಲ ... ನೋಡಕ್ಕಾಗಕ್ಕಿಲ್ಲ ಅನ್ನಿ. ಅದೂ ಹಿಂದಿನಿಂದ ಬಂದ ... ಬುಡಕ್ಕಾಯ್ತದಾ?" ಎಂದರು. ಆಗ ನಾನು "ತಾತಾ... ಒಕ್ಕಲಿಗರು ಮತ್ತು ಲಿಂಗಾ... ಬ್ರಾಹ್ಮಣರ ಮನೆ ಚಾಕರಿ ಮಾ... ಆದರೆ ಮುಂದೆ ಎಚ್ಚೆತ್ತುಕೊಂಡು ... ಒಂದು ಶಕ್ತಿ ಆದ್ರು. ನೀವು ಹೇ... ಕೇಸು ಗೌಡರು ಚಪ್ಪಲಿ ... ಜಾಗದಲ್ಲಿ ಇರಬೇಕಂದ್ರೆ ಬ್ರಾ... ಚಪ್ಪಲಿ ಬಿಡೋ ಜಾ... ಯಾರಿರಬೇಕಿತ್ತು ಹೇಳಿ?" ಎಂದೆ. ಅದ... ಮಾತಾಡಲಿಲ್ಲ, ನೆಶ್ಯೆಯನ್ನು-ಮೂಗಿಗೆ ಹಾಕುತ್ತ ... ಛಟಗಳ ಕಡೆ ತಿರುಗಿಸಿದರು.

ಇನ್ನೊಂದು ಘಟನೆ. ನನ್ನ ಪತ್ನಿ ಅವಳ ಸ್ನೇ... ಮನೆಗೆ ಹೋಗಿದ್ದಾಗ ಆ ಸ್ನೇಹಿತೆ ತನ್ನ ಅತ್ತೆಯ... ಮಾತನಾಡುತ್ತಾ "ಎಸ್‌ಸಿಗಳನ್ನು ನಮ್ಮ ಮನೆಯಲ್ಲಿ...

...ಗಳ ಜೊತೆ ಮಜವಾಗಿರೋದೆ ಕಣ್ಣು ಬೇನೆ ...ತೆಯಂತೆ. ಅವರು 'ಈ ರಾಜಕಾರಣಿಗಳು ಮಾತಿಗೆ ... ತಿರುಕ್ಕುರುಳ್‌ನಿಂದ ಉದ್ಧರಿಸುತ್ತಾರೆ. ನೈತಿಕ ಜೀವನ ... ಪುರಾಣ ಒದರುತ್ತಾರೆ. ಆದರೆ ಅವನ್ನ ಪಾಲಿಸಲ್ಲ. ...ರು ಒಂದಕ್ಕಿಂತ ಹೆಚ್ಚು ಹೆಂಗಸರನ್ನು ಕಟ್ಟಿಕೊಂಡು ...ತ್ತಾರೆ, ಇಲ್ಲ ಇಟ್ಟುಕೊಂಡು ಇರುತ್ತಾರೆ. ಸರಕಾರಿ ...ರಾದ ನಮಗೆ ಆ ಭಾಗ್ಯ ಇಲ್ಲ. ಕೆಲಸಕ್ಕೆ ಸೇರುವಾಗಲೇ ...ವಯಾಗಿದೆಯಾ? ಆಗಿದ್ದರೆ ಹೆಂಡತಿಯರೆಷ್ಟು ಅಂತ ...ತ್ತಾರೆ. ಒಂದಕ್ಕಿಂತ ಹೆಚ್ಚು ಅಂದರೆ ಕೆಲಸಾನೇ ಸಿಗಲ್ಲ. ...ಗ ಸೇರಿದ ಮೇಲೂ ದ್ವಿಪತ್ನಿ, ತ್ರಿಪತ್ನಿ ಪಡೆಯುವ ... ಇಲ್ಲ. ಹಾಗೆ ಮಾಡಿದ ಅಂತ ತಿಳಿದರೆ ಚಾಕರೀನೆ ...ಗುತ್ತದೆ. ಆದರೆ ಇಂತಹ ನಿರ್ಬಂಧ ಯಾವುದೂ ...ರಣಿಗಳಿಗೆ ಇಲ್ಲ. ಅವರು ಒದುರ್‍ತಾರಲ್ಲ ನೀತಿಸಂಹಿತೆ ... ನಮ್ಮಂತಹ ಪಾಮರರಿಗೆ ಮಾತ್ರ' ಎಂದೆಲ್ಲ ...ತ್ತುಕೊಂಡಿದ್ದಾರೆ.

... ತಮಿಳುನಾಡಿನ ಮಿತ್ರರೆ ಹೀಗೆಲ್ಲ ಹೇಳ್ತಿದೀರಲ್ಲ ... ಕಷ್ಟಾನೂ ಸ್ವಲ್ಪ ಅರ್ಥಮಾಡಿಕೊಳ್ಳಿ. ಪಾಪ ...ಕಾರಣಿ ಅಂದಮೇಲೆ ನೂರೆಂಟು ತರಲೆ ತಾಪತ್ರಯ ... ಮನೆ ಒಳಗೆ ಇರುವುದಕ್ಕಿಂತ ಹೆಚ್ಚಾಗಿ ಹೊರಗೇ ... ಇರಬೇಕಾಗುತ್ತೆ. ಅವರದ್ದೂ ಉಪ್ಪು ಹುಳಿ ತಿಂದ ... ಎಲ್ಲಾದರೂ ಹೊರಗೆ ಹೋಗಿ ಹೀಟು ಕಳ್ಕಂಬರಾನ ...ಹಾಳಾದ ಚಾನೆಲ್‌ನೋವು ಇದ್ನೇ ಕಾಯ್ತಾ ಕುಂತಿರ್‍ತವೆ. ಶ್ರೀರಾಮಚಂದ್ರನ ತರಹ ಇರ್‍ತೀನಿ ಅಂತ ...ತೀನಾ ಮೂರೂ ಹೊತ್ತು ಹೊತ್ಕಂಡು ...ಗಾಗುತ್ತೇನ್ರೀ. ಆದಕ್ಕೇನು ಮಾಡ್ತಾರೆ? 'ಚಿನ್ನವೀಡು' ...ಂತಾರೆ. ತಾಳಿ ಬಿಗಿಸಿಕೊಂಡವರೇ ಹೆಂಗೋ ...ರಿಸಿಕೊಂಡು ಹೋಗುತ್ತಿರುವಾಗ ನಿಮಗೇನು ...ಡಿತ ಅಂತೀನಿ.

...ಲ್ಲಿ ಇದಕ್ಕೂ ಕಾನೂನು ತಂದು ನಿಷೇಧ ಹೇರಬೇಕು ...ದೀರಲ್ಲ. ಇಬ್ಬರು ಮೂವರು ಹೆಂಡಿರನ್ನು ...ಕುಸೋದು ಅಂದ್ರೆ ಹುಡುಗಾಟ ಅಲ್ಲ ಕಣ್ರಿ. ...ಗೂ ಸಮಾಧಾನ ಆಗೋ ರೀತಿ ನಡೀಬೇಕಾಗುತ್ತೆ. ...ಕೀಯದಲ್ಲಿ ಬೇಳೆಬೇಯಿಸಿಕೊಳ್ಳೋಕೆ ಇದು ಒಂದು ... ಟ್ರೈನಿಂಗ್ ಇದ್ದಂಗೆ ಕಣ್ರೀ. ಮನೆಗೆದ್ದು ಮಾರು ... ಅಂತಾರಲ್ಲ ಅದು ಇಂತಹವರನ್ನ ನೋಡೇ ಕಣ್ರೀ ...ಳೋದು. ಇನ್ನು ಒಂದು ವಿಷಯ ತಿಳ್ಕಳಿ. ಈಗಿನ ...ಲ್ಲಿ ಒಂದು ಸಂಸಾರ ನೀಸೋಕೆ ನಿಗರಿ ಬೀಳ್ತೀವಿ. ...ಹದ್ದರಲ್ಲಿ ಮೂರು ನಾಲ್ಕು ಸಂಸಾರಾನ ಅವರು ... ಇದಾರೆ. ಅದಕ್ಕೆ ಬೇಕಾದ ಹಣ ದುಡಿಯೋ ...ನೂ ತಿಳ್ಕಂಡವ್ರೆ. ದುಡೀತಾರೆ ಮಜ ಮಾಡ್ತಾರೆ. ...ಕೆ ಮುಕ್ಕರೀತಿದೀರಿ ಅಂತ ತಿಳೀವಲ್ದಪಾ...

'ಶಿವ'ನಿಗೆ 'ಚಾಲೆಂಜ್' ಇಲ್ಲ



ಸಂತೋಷ್ ಥಿಯೇಟರ್‌ನಲ್ಲಿ ಕಳೆದ ವಾರ ಹರೀಶ್‌ರಾಜು ನಟಿಸಿರುವ 'ಚಾಲೆಂಜ್' ಚಿತ್ರ ಬಿಡುಗಡೆಯಾಗಿತ್ತು. ಈ ಚಿತ್ರ ಹೇಗಿದೆ ಎಂಬುದು ಗೊತ್ತಿಲ್ಲ. ಆದರೆ ಈ ವಾರ 'ಚಾಲೆಂಜ್' ತನ್ನ ಸ್ಥಾನವನ್ನು ಶಿವರಾಜ್‌ಕುಮಾರ್ ಅಭಿನಯದ 'ಶಿವ' ಚಿತ್ರಕ್ಕಾಗಿ ಬಿಟ್ಟುಕೊಡುತ್ತಿದೆ. ಅಂದರೆ, ಈ ಚಿತ್ರದ ನಿರ್ಮಾಪಕರು ಮೊದಲೇ ಒಂದು ವಾರಕ್ಕೆ ಸಾಕು ಎಂದು ಥಿಯೇಟರ್ ಮಾಲೀಕರಲ್ಲಿ ಒಪ್ಪಿಕೊಂಡಿದ್ದರಂತೆ. ಆದರೆ ಅದಕ್ಕಿಂತ ಮುಖ್ಯವಾದ ಇನ್ನೊಂದು ವಿಷಯ ಇದೆ. ಅದೇನೆಂದರೆ, ಕೆಲವು ಸಮಯದ ಹಿಂದೆ ಇದೇ ಹರೀಶ್‌ರಾಜ್ ನಟಿಸಿದ್ದ 'ಗನ್' ಚಿತ್ರವನ್ನು ಥಿಯೇಟರ್ ಮಾಲೀಕರು ಹೇಳದೇಕೇಳದೇ ಎತ್ತಂಗಡಿ ಮಾಡಿದಾಗ ಅದನ್ನು ವಿರೋಧಿಸಿ ಹರೀಶ್‌ರಾಜ್ ಸಂತೋಷ್ ಚಿತ್ರಮಂದಿರದ ಮೇಲಿನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದರು. ಆ ಸಂದರ್ಭದಲ್ಲಿ ಉಪ್ಪಾರಪೇಟೆ ಪೊಲೀಸರು ಬಂದು ಆತನನ್ನು ರಕ್ಷಿಸಿದರು ಮಾತ್ರವಲ್ಲ, ಆತ್ಮಹತ್ಯೆಗೆ ಪ್ರಯತ್ನಿಸಿದ ಆತನ ಮೇಲೆ ಕೇಸು ಜಡಿದರು.

ಈಗ 'ಚಾಲೆಂಜ್' ಚಿತ್ರವನ್ನು ಒಂದೇ ವಾರಕ್ಕೆ ಥಿಯೇಟರ್‌ನವರು ಮತ್ತೆ ಎತ್ತಂಗಡಿ ಮಾಡುತ್ತಿರುವಾಗ ಈ ಹಳೆಯ ವಿಷಯವು ನೆನಪಾಗುತ್ತಿದೆ. ಅಷ್ಟೇ ಅಲ್ಲ, ಅದೇ ಹರೀಶ್‌ರಾಜ್, ಅದೇ ಸಂತೋಷ್ ಥಿಯೇಟರ್ ಮೇಲಿಂದ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವ ನಾಟಕ ರಿಪೀಟ್ ಆಗುತ್ತದೆಯೇ ಎಂಬ ಆತಂಕವೂ ಗಾಂಧಿನಗರದಲ್ಲಿದೆ. ಅಂತಹ ಘಟನೆಗಳೇನೂ ಈ ಬಾರಿ ಮರುಕಳಿಸದಿರಲಿ ಎಂಬುದು ನಮ್ಮ ಆಶಯ.

ಹರ್ಷ ಜೊತೆಗೆ ಬೇಸರ

ನೃತ್ಯ ನಿರ್ದೇಶಕ ಹರ್ಷ ಅವರಿಗೆ ಈಗ ನೃತ್ಯ ನಿರ್ದೇಶನಕ್ಕಿಂತ ಸಿನಿಮಾ ನಿರ್ದೇಶಿಸಲು ಹುಚ್ಚು ಡಿಮ್ಯಾಂಡ್ ಬರುತ್ತಿದೆ.


ಮೊನ್ನೆ ಶಿವರಾಜ್‌ಕುಮಾರ್ ಜೊತೆ ಮಾತನಾಡುತ್ತಿದ್ದಾಗ ಹರ್ಷ ಶಿವಣ್ಣನಿಗೆ ಒಂದು ಕಥೆ ಹೇಳಿದರಂತೆ. ಆ ಕಥೆ ಕೇಳಿ ಶಿವಣ್ಣ ಅದೆಷ್ಟು ಇಂಪ್ರೆಸ್ ಆದರೆಂದರೆ, ಕೂಡಲೇ ಆ ಚಿತ್ರದಲ್ಲಿ ನಟಿಸಲು ಒಪ್ಪಿಗೆ ನೀಡಿದರಂತೆ. ಹೀಗಂತ ಸ್ವತಃ ಶಿವಣ್ಣ ಮೊನ್ನೆ ಹರ್ಷ ಅವರನ್ನು ಕೊಂಡಾಡುತ್ತ ಹೇಳಿದರು.

ಈಗಾಗಲೇ ಕುಮಾರ್ ನಿರ್ಮಾಣದಲ್ಲಿ ಸುದೀಪ್‌ಗಾಗಿ ಹರ್ಷ ಒಂದು ಕಥೆಯನ್ನು ಹೆಣೆದು ಕುಳಿತುಕೊಂಡಿದ್ದಾರೆ. ಬಹುಶಃ ಹಿಂದಿ, ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಏಕಕಾಲದಲ್ಲಿ ಈ ಚಿತ್ರ ನಿರ್ಮಾಣವಾಗುವ ಮಾತುಗಳು ಕೇಳುಬರುತ್ತಿವೆ. ಇದರ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯ ಜವಾಬ್ದಾರಿಯನ್ನು ಈಗಾಗಲೇ ಮುಗಿಸುವ ಹರ್ಷ ಸದ್ಯದಲ್ಲಿಯೇ ಅದನ್ನು ಆರಂಭಿಸಲಿದ್ದಾರೆ. ಇತ್ತೀಚೆಗೆ ದರ್ಶನ್ ಅಭಿನಯದ, ಹರ್ಷ ನಿರ್ದೇಶನದ 'ಚಿಂಗಾರಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಭಾರಿಸಿತ್ತು.

ಹೀಗೆ ಕನ್ನಡದ ದೊಡ್ಡ ದೊಡ್ಡ ನಾಯಕ ನಟರುಗಳ ಚಿತ್ರವನ್ನು ನಿರ್ದೇಶಿಸುವ ಹಂತಕ್ಕೆ ಬೆಳೆದಿರುವ ಹರ್ಷ ಮೂಲತಃ ನೃತ್ಯ ನಿರ್ದೇಶಕರು ಎಂಬುದೇ ಇಲ್ಲಿ ಗಮನಾರ್ಹವಾದ ವಿಷಯ. ಹರ್ಷಗೆ ಸದ್ಯಕ್ಕೆ ಇರುವ ಬೇಡಿಕೆಯನ್ನು ಗಮನಿಸಿದರೆ ಬಹುಶಃ ಮುಂಬರುವ ದಿನಗಳಲ್ಲಿ ಆತನ ನಿರ್ದೇಶನದ ಚಿತ್ರವನ್ನು ಹೊರತುಪಡಿಸಿ ಬೇರೆ ಚಿತ್ರಗಳಲ್ಲಿ ನೃತ್ಯ ನಿರ್ದೇಶನ ಮಾಡಲು ಸಾಧ್ಯವಾಗಲಾರದು.

ಅಂದರೆ, ಕನ್ನಡ ಚಿತ್ರರಂಗಕ್ಕೆ ಒಬ್ಬ ಒಳ್ಳೆಯ ನಿರ್ದೇಶಕ ದೊರಕಿದ್ದಾನೆಂದು ಸಂತೋಷಪಡುವಾಗಲೇ ಒಬ್ಬ ಅತ್ಯುತ್ತಮ ನೃತ್ಯ ನಿರ್ದೇಶಕನನ್ನು ನಾವು ಕಳೆದುಕೊಳ್ಳಬೇಕಾಯಿತಲ್ಲ ಎಂಬ ದುಃಖವೂ ಆಗುತ್ತಿದೆ.

ನಾಣಿಯ ಹೊಸ 'ಕ್ಷೇತ್ರ'



ಎಸ್.ನಾರಾಯಣ್ ಕಳೆದ ವಾರ ಜನತಾದಳ ಪಕ್ಷ ಸೇರಿದ್ದು ನಿಮಗೆಲ್ಲ ಗೊತ್ತೇ ಇದೆ. ನಾರಾಯಣ್ ಈಗ ರಾಜಕೀಯಕ್ಕೆ ಧುಮುಕಿರುವುದಕ್ಕೂ ಕೆಲವೇ ವಾರಗಳ ಹಿಂದೆ ಅವರು ಚಿತ್ರರಂಗಕ್ಕೆ ಗುಡ್‌ಬೈ ಹೇಳಿದ್ದಕ್ಕೂ ಯಾವುದೇ ಸಂಬಂಧವಿಲ್ಲ ಎಂಬುದು ಗಮನಾರ್ಹ. ರಾಜಕೀಯ ಸೇರಲೆಂದೇ ಅವರು ಸಿನಿಮಾರಂಗದಿಂದ ನಿವೃತ್ತಿ ಘೋಷಿಸಿದರು ಎಂದು ಹೇಳಿದರೆ ಯಾರೂ ನಂಬುವುದಿಲ್ಲ.

'ನಾರಾಯಣ್ ಜನತಾದಳ ಸೇರಿದ್ದರಲ್ಲಿ ಏನೂ ಅಚ್ಚರಿ ಇಲ್ಲ' ಎನ್ನುವವರು ಇದ್ದಾರೆ. 'ಅವರು ನಿಜವಾಗಲೂ ರಾಜಕೀಯ ಸೇರಿದರಾ?' ಎಂದು ಅಚ್ಚರಿ ವ್ಯಕ್ತಪಡಿಸುವವರೂ ಇದ್ದಾರೆ. ಇದಕ್ಕೆ ಕಾರಣಗಳಿವೆ. ಜೆಡಿಎಸ್ ನಾಯಕ ಕುಮಾರಸ್ವಾಮಿ ಮುಖ್ಯಮಂತ್ರಿಯಾಗುವ ಮುಂಚಿನಿಂದಲೇ ನಾರಾಯಣ್‌ಗೆ ಆಪ್ತರಾಗಿದ್ದವರು. ಕುಮಾರಸ್ವಾಮಿ ನಿರ್ಮಿಸಿರುವ ಮೂರು ಸಿನಿಮಾಗಳನ್ನು ನಿರ್ದೇಶನ ಮಾಡಿದ್ದೇ ನಾರಾಯಣ್. 'ಹೀಗಾಗಿ ಕುಮಾರಸ್ವಾಮಿ ಒತ್ತಾಯಕ್ಕೆ ಮಣಿದು ನಾರಾಯಣ್ ಜನತಾದಳ ಸೇರಿರಬಹುದು' ಎಂಬುದು ಕೆಲವರ ಅಂಬೋಣ.

'ಆದರೆ ನಾರಾಯಣ್ ಈ ಹಿಂದೆ ಯಾವತ್ತೂ ಯಾರ ಬಳಿಯೂ ರಾಜಕೀಯದ ಬಗ್ಗೆ ಮಾತನಾಡಿದವರೇ ಅಲ್ಲ. ಅವರಲ್ಲಿ ರಾಜಕೀಯದ ಮಹತ್ವಾಕಾಂಕ್ಷೆ ಕೂಡ ಯಾವತ್ತೂ ಕಾಣಿಸಿರಲಿಲ್ಲ. ಅವರಲ್ಲಿ ರಾಜಕೀಯ ಆಕಾಂಕ್ಷೆ ಇದ್ದಿದ್ದರೆ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಎಂ.ಎಲ್.ಸಿ. ಆಗಬಹುದಿತ್ತು' ಎಂದು ನಾರಾಯಣ್ ರಾಜಕೀಯಕ್ಕೆ ಸೇರಿದ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಸಿನಿಮಾ ರಂಗದಲ್ಲಂತೂ ಶಿಸ್ತಿನ ಸಿಪಾಯಿಯೆಂದೇ ಹೆಸರಾಗಿರುವ ನಾರಾಯಣ್ ರಾಜಕೀಯದಲ್ಲಿ ಜನತಾದಳದಂತಹ ಪಕ್ಷದ ರಾಜಕೀಯಕ್ಕೆ ಯಾವ ರೀತಿ ಸ್ಪಂದಿಸುತ್ತಾರೋ ನೋಡಬೇಕು. ಒಂದು ಮಾತಂತೂ ನಿಜ. ನಾರಾಯಣ್‌ಗೆ ತಮ್ಮದೇ ಆದ ಅಭಿಮಾನಿಗಳು ಇದ್ದಾರೆ. ಹೀಗಾಗಿ ನಾರಾಯಣ್ ಅವರನ್ನು ಮುಂದಿನ ಚುನಾವಣೆಯಲ್ಲಿ ಕುಮಾರಸ್ವಾಮಿ ಯಾವುದಾದರೊಂದು ಕ್ಷೇತ್ರದಿಂದ ನಿಲ್ಲಿಸುವುದಂತೂ ಗ್ಯಾರಂಟಿ. ನಾರಾಯಣ್ ಅವರ ಆಪ್ತರು ಹೇಳುವ ಪ್ರಕಾರ ಅವರು ಭದ್ರಾವತಿ ಅಥವಾ ಪದ್ಮನಾಭನಗರ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆ ಇದೆಯಂತೆ.

ಇಲ್ಲಿ ಬಿಚ್ಚಮ್ಮ, ಅಲ್ಲಿ ರಾಗಮ್ಮ





ಇತ್ತೀಚೆಗೆ ಕನ್ನಡ ಚಿತ್ರರಂಗದ ನಾಯಕಿಯರು ಸುದ್ದಿ ಮಾಡುವುದರಲ್ಲಿ ನಿಸ್ಸೀಮರಾಗಿದ್ದಾರೆ. ಉದಾಹರಣೆಗೆ ಇದೇ ಶುಕ್ರವಾರ ರಾಗಿಣಿ ಮತ್ತು ಶಿವರಾಜ್‌ಕುಮಾರ್ ಜೋಡಿಯಾಗಿ ಕಾಣಿಸಿಕೊಂಡಿರುವ 'ಶಿವ' ಚಿತ್ರ ಬಿಡುಗಡೆಯಾಗುತ್ತಿದೆ. "ಆದರೆ ಇಷ್ಟು ಅದ್ದೂರಿಯಾದ ಈ ಚಿತ್ರ ಬಿಡುಗಡೆಯಾಗುವ ಸಂದರ್ಭದಲ್ಲಿ ಪ್ರೇಕ್ಷಕರ ಜೊತೆ ಕುಳಿತುಕೊಂಡು ಅದನ್ನು ನೋಡುವ ಸೌಭಾಗ್ಯ ನನಗಿಲ್ಲವಲ್ಲ" ಎಂದು ರಾಗಿಣಿ ಒಂದೇ ಕಣ್ಣಿನಲ್ಲಿ ಕಣ್ಣೀರಿಡುತ್ತಿದ್ದಾಳೆ.

ಇದಕ್ಕೆ ಕಾರಣವೇನು ಗೊತ್ತೇ? ಆಕೆ ಮಲಯಾಳಂನಲ್ಲಿ ನಟಿಸುತ್ತಿರುವ 'ಫೇಸ್ ಟು ಫೇಸ್' ಎಂಬ ಹೊಸ ಚಿತ್ರ 'ಶಿವ' ಚಿತ್ರದ ಬಿಡುಗಡೆಯ ಮುನ್ನಾದಿನ ಸೆಟ್ಟೇರುತ್ತಿದೆಯಂತೆ. ಅಂದಹಾಗೆ, ಈ ಮಲಯಾಳಂ ಚಿತ್ರದಲ್ಲಿ ರಾಗಿಣಿ ಕೇರಳದ ಸೂಪರ್‌ಸ್ಟಾರ್ ಮಮ್ಮುಟಿ ಜೊತೆಗೆ ನಟಿಸುತ್ತಿದ್ದಾಳೆ. ಮಲಯಾಳಂ ಚಿತ್ರರಂಗ ಆಕೆಗೆ ಹೊಸದೇನೂ ಅಲ್ಲ. ಈ ಹಿಂದೆ ಮೋಹನ್‌ಲಾಲ್ ಮತ್ತು ಅಮಿತಾಬ್ ಬಚ್ಚನ್ ನಟಿಸಿದ್ದ ಕಂದಹಾರ್ ವಿಮಾನ ಅಪಹರಣದ ಚಿತ್ರದಲ್ಲಿ ರಾಗಿಣಿ ನಟಿಸಿದ್ದಳು.

ಇಲ್ಲಿ ಕನ್ನಡದಲ್ಲಿ ಬಿಂದಾಸಾಗಿ ನಟಿಸುತ್ತ, ಐಟಂಸಾಂಗ್‌ಗಳಲ್ಲೂ ಕುಣಿದು ಕುಪ್ಪಳಿಸುವ ರಾಗಿಣಿ ಮಲಯಾಳಂ ಚಿತ್ರರಂಗದಲ್ಲಿ ಕಾಟನ್ ಸೀರೆ ಉಟ್ಟುಕೊಂಡು ಸಿಂಪಲ್ ಆಗಿ ಮಮ್ಮುಟಿಯ ಮಡದಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ. "ಗ್ಲಾಮರ್ ಪಾತ್ರಗಳಲ್ಲಿ ಕಾಣಿಸಿಕೊಂಡು ಸುಸ್ತಾಗಿದೆ. ಒಂದು ಚೇಂಜ್ ಇರಲಿ ಎಂಬ ಕಾರಣಕ್ಕೆ ಈ ಪಾತ್ರದಲ್ಲಿ ನಟಿಸುತ್ತಿದ್ದೇನೆ" ಎಂಬ ಸಬೂಬು ನೀಡಲು ಆಕೆ ಮರೆಯುವುದಿಲ್ಲ.

ಅದೇನೇ ಇರಲಿ, ಇತ್ತೀಚೆಗೆ ರಾಗಿಣಿ ಕನ್ನಡ, ತಮಿಳು, ಮಲಯಾಳಂ ಹೀಗೆ ವಿವಿಧ ಭಾಷೆಯ ಚಿತ್ರಗಳಲ್ಲಿ ನಟಿಸುತ್ತ ರಮ್ಯಾಳ ತರಹ ದಕ್ಷಿಣ ಭಾರತದ ತಾರೆಯಾಗಿ ಮೆರೆಯುವತ್ತ ಒಂದೊಂದೇ ಹೆಜ್ಜೆ ಇಡುತ್ತಿದ್ದಾಳೆ.

...ಕೊಂಡರೆ ನಮ್ಮ ಮನೆ ದೇವರಿಗೆ ಆಗುವುದಿಲ್ಲವಂತೆ" ...ತೆ. ಈ ಮಾತನ್ನ ಹೇಳಿದ್ದ ಆ ಅತ್ತೆ ಸರ್ಕಾರಿ ...ಯಲ್ಲಿದ್ದಾರೆ. ಕೇಳಿಸಿಕೊಂಡ ಸೊಸೆ ಉಪನ್ಯಾಸಕಿಯಾಗಿ ... ಅದೇನೇ ಇರಲಿ, ನಮ್ಮ ದೇಶದ ಶಿಕ್ಷಣ ವ್ಯವಸ್ಥೆ ...ವಂತರನ್ನು ತಯಾರು ಮಾಡಿದೆ ಎನ್ನಬಹುದು. ...ಮ್ಮ ಮನೆ ಕೆಲಸದಿಂದಲೂ ದೂರವಿಡಲು ಹುನ್ನಾರ ...ಯಲ್ಲವೇ? ಮತ್ತೊಂದು ಘಟನೆ. ನನ್ನ ಪತ್ನಿಯ ...ಯೊಬ್ಬರ ತಾಯಿ ತನ್ನ ಮಗಳಿಗೆ ಹೇಳಿದ ಮಾತು: ...ಮ್ಮ, ನೀನು ಲವ್ ಮ್ಯಾರೇಜ್ ಬೇಕಾದರೆ ಆಗು. ... ಎಸ್ಸಿ, ಎಸ್ಟಿಗಳನ್ನ ಬಿಟ್ಟು ಬೇರೆ ಯಾರನ್ನಾದರೂ ...ಡೆ ಆಗು" ಎಂದು.

... ಮೂರು ಘಟನೆಗಳಿಂದ ತಿಳಿಯುವುದೇನು? ...ವ್ಯವಸ್ಥೆ ಮುಂದೆ ವಿದ್ಯಾವಂತರು, ಅವಿದ್ಯಾವಂತರು ... ಒಂದೇ ಅಲ್ಲವೇ? ಇದು ನಮ್ಮ ದೇಶದ ದುರಂತ. ...ದೇಶದ 35 ಕೋಟಿ ದಲಿತರ ಪಾಡು ಇದು. ...ಮುಕ್ತ ಮನಸ್ಸಿಗೆ ಜಾತಿ ಹೆಚ್ಚೇ ಹೊರತು ...ನೀಯತೆಯಲ್ಲ, ಆದ್ದರಿಂದ ಅಂಬೇಡ್ಕರ್ ಅವರಿಗೆ ... ಮಾಡಿದ ಪ್ರತಿಯೊಬ್ಬ ಮಾನವನಿಗೂ ನನ್ನ ...ನಗಳು.

- ವಿಕಾಸ ಆರ್. ಮೌರ್ಯ, ಬೆಂಗಳೂರು

...ದ ಹಬ್ಬ - ದಸರಾ

...ದ ಶಾಪ - ಬಿಜೆಪಿ ಸರ್ಕಾರ

...ದ ವಿಕೃತಿ - ಎಸ್.ಎಲ್.ಭೈರಪ್ಪ

- ರವಿ, ಹಾಸನ

...ಸ್ಸಾಂನಲ್ಲಿ ನೂರಾರು ಜನರ ಮಾರಣಹೋಮ ... ನಾಲ್ಕೈದು ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ...ಬಗ್ಗೆ ಯಾರೂ ಕಾಳಜಿ ವಹಿಸುತ್ತಿಲ್ಲ, ಯಾಕೆಂದರೆ ... ಬಾಂಗ್ಲಾ ದೇಶದವರು, ಭಾರತದವರಲ್ಲ'. ...ದರೆ ಬೆಂಗಳೂರಿನಲ್ಲಿ ಸುಳ್ಳು ವದಂತಿ, ಸುಳ್ಳು ... [illegible] ...ಸುವುದರಿಂದ ನಮ್ಮ ಸರ್ಕಾರ, ಆರೆಸ್ಸೆಸ್ಸಿನವರು ... ಈಶಾನ್ಯ ರಾಜ್ಯಗಳ ... ಬೀಗಾಡಿಸಿ ...ಂತಿದ್ದಾರೆ. ಏಕೆಂದರೆ ಇವರೆಲ್ಲ ...'? ಸತ್ಯಮೇವ ಜಯತೆ!

- ಅಶ್ಫಾಕ್, ಗುಲ್ಬರ್ಗಾ

... ಸುದ್ದಿಗಳ ಹಿಂದೆ ಚಿಡ್ಡಿಗಳ ಹಿಕಮತ್ತು

ಯಾಕಿರಬಾರದು? ಉಚ್ಚೆಯಲ್ಲಿ ಮೀನು ಹಿಡಿಯುವ ಸಂಘಟಿತ ಕಲೆ ಅವರಿಗಷ್ಟೇ ಕರಗತವಾಗಿದೆ. ಹೇಗಿದ್ದರೂ ಅವರದ್ದೇ ಸರ್ಕಾರ. ಗಲಭೆ ಎಬ್ಬಿಸದೆ ಓಟು ಗಿಟ್ಟಲ್ಲ ಅಂತ ಅವರಿಗೆ ಗೊತ್ತು.

- ರವಿಕುಮಾರ್, ಹಾಸನ

ಆಗಸ್ಟ್ 22ರ ಸಂಚಿಕೆಯಲ್ಲಿ 'ಚಾರ್ವಾಕ' ಅಂಕಣದಲ್ಲಿ ಶಿವಸುಂದರ್ ಅವರು ದಲಿತರ ಬಗ್ಗೆ ವ್ಯಕ್ತಪಡಿಸಿರುವ ನಿಲುವು ನಿಮ್ಮ ತಂಡಕ್ಕೆ ದಲಿತರ ಬಗ್ಗೆ ಇರುವ ಕಾಳಜಿಯನ್ನು ಬಿಂಬಿಸುವಂತಿತ್ತು. ದಲಿತರಿಗೆ, ಹಿಂದುಳಿದ ವರ್ಗದವರಿಗೆ ಆಗುವಂತಹ ಅನ್ಯಾಯಗಳ ಬಗ್ಗೆ ಶಿವಸುಂದರ್ ತುಂಬಾ ಚೆನ್ನಾಗಿ ಬರೆದಿದ್ದಾರೆ.

ಇದೇರೀತಿ ಇನ್ನಷ್ಟು ವಿಷಯಗಳನ್ನು ಕಲೆ ಹಾಕಿ ಪ್ರಕಟಿಸಿದರೆ ನಮಗೆಲ್ಲ ನಿಮ್ಮಿಂದ ತುಂಬಾ ದೊರಕುತ್ತದೆ. ಅಂತಹ ಲೇಖನಗಳನ್ನು ಓದಿ ಸರ್ಕಾರ ದಲಿತ ಮತ್ತು ಹಿಂದುಳಿದ ವರ್ಗದವರಿಗೆ ಸರಿಯಾದ ಸೌಲಭ್ಯ ಕಲ್ಪಿಸಲಿ. ಧನ್ಯವಾದಗಳೊಂದಿಗೆ ನಿಮ್ಮ ಓದುಗ ಅಭಿಮಾನಿ.

- ಫಕೀರಪ್ಪ, ಯಾರಡಳ, ಬೈಲಹೊಂಗಲ್

ಮೇರಾ ಭಾರತ್ ಮಹಾನ್



ಭಾರತದ ಹತ್ತು ಅತಿ ಶ್ರೀಮಂತರ ಪಟ್ಟಿ ಹೀಗಿದೆ:

1. ಮುಖೇಶ್ ಅಂಬಾನಿ - 22.3 ಬಿಲಿಯನ್ ಡಾಲರ್
2. ಲಕ್ಷ್ಮಿ ಮಿಟ್ಟಲ್ - 20.7 ಬಿಲಿಯನ್ ಡಾಲರ್
3. ಅಜೀಮ್ ಪ್ರೇಮ್‌ಜಿ - 15.9 ಬಿಲಿಯನ್ ಡಾಲರ್
4. ಸಾವಿತ್ರಿ ಜಿಂದಾಲ್ - 10.9 ಬಿಲಿಯನ್ ಡಾಲರ್
5. ಸುನೀಲ್ ಮಿಟ್ಟಲ್ - 8.1 ಬಿಲಿಯನ್ ಡಾಲರ್
6. ಕುಮಾರ್ ಬಿರ್ಲಾ - 8 ಬಿಲಿಯನ್ ಡಾಲರ್
7. ಅನಿಲ್ ಅಂಬಾನಿ - 7.8 ಬಿಲಿಯನ್ ಡಾಲರ್
8. ದಿಲೀಪ್ ಸಾಂಘ್ವಿ - 7.4 ಬಿಲಿಯನ್ ಡಾಲರ್
9. ಶಶಿ ರುಯ್ಯ - 7 ಬಿಲಿಯನ್ ಡಾಲರ್
10. ಕುಶಾಲ್ ಸಿಂಗ್ - 6.4 ಬಿಲಿಯನ್ ಡಾಲರ್

ನಮ್ಮ ಭಾರತ ಸರ್ಕಾರ ನಗರಗಳಲ್ಲಿ ದಿನಕ್ಕೆ 32 ರೂಪಾಯಿ ದುಡಿಯುವವರು ಮತ್ತು ಗ್ರಾಮ ಪ್ರದೇಶಗಳಲ್ಲಿ ದಿನಕ್ಕೆ 22 ರೂಪಾಯಿ ದುಡಿಯುವವರನ್ನು ಬಡವರು ಎನ್ನಲಾಗುವುದಿಲ್ಲ ಎಂದಿದೆ. ಆದರೆ ಇದೇ ಭಾರತ ಸರ್ಕಾರ ಶ್ರೀಮಂತ ಬ್ಯುಸಿನೆಸ್‌ಮೆನ್‌ಗಳಿಗೆ 25.7 ಲಕ್ಷ ಕೋಟಿ ತೆರಿಗೆ ವಿನಾಯಿತಿಯನ್ನು ನೀಡಿದೆ. ಈ ಮೊತ್ತ 2ಜಿ ಹಗರಣಕ್ಕಿಂತ 15 ಪಟ್ಟು ಹೆಚ್ಚು. ಇದೇ ಭಾರತ ಸರ್ಕಾರದ ಪ್ರಧಾನಿ ಮನಮೋಹನ್ ಸಿಂಗ್ ಅವರು ಯೂರೋಪಿನ ದೇಶಗಳ ಆರ್ಥಿಕ ಕಷ್ಟವನ್ನು ನಿವಾರಿಸಲು 56,000 ಕೋಟಿ ರೂಪಾಯಿಗಳನ್ನು ಯುರೋಪಿಯನ್ ಯೂನಿಯನ್‌ಗೆ ನೀಡಿದರು.

ಭಾರತದಲ್ಲಿ 40 ಕೋಟಿ ಬಡವರು ಇದ್ದಾರೆ. ಆದರೂ ಸರ್ಕಾರಿ ಗೋದಾಮುಗಳಲ್ಲಿ ಕೊಳೆಯುತ್ತಿರುವ ಆಹಾರ ಧಾನ್ಯಗಳನ್ನು ಕಡಿಮೆ ದರದಲ್ಲಿ ನೀಡಲು ಸರ್ಕಾರ ನಿರಾಕರಿಸುತ್ತದೆ. ಅದಕ್ಕೆ ಸರ್ಕಾರ ಕೊಡುವ ಕಾರಣ ಆಹಾರ ಧಾನ್ಯಗಳನ್ನು ವಿತರಿಸಲು 5000 ಕೋಟಿ ರೂಪಾಯಿಗಳನ್ನು ವ್ಯಯಿಸಬೇಕಾಗುತ್ತದೆ ಮತ್ತು ಅಷ್ಟು ಹಣ ತನ್ನಲಿಲ್ಲ ಎಂದು.

ಅಂದಹಾಗೆ, ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಶುಭಾಶಯಗಳು!

- ಓದುಗ, ಎಸ್ ಎಂ ಎಸ್ ಮೂಲಕ

ಅನಿಷ್ಟ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹೋಮ್ ಸ್ಟೇ ತರಹದ ದಾಳಿಗಳು ಕಾಮನ್ ಆಗಿವೆ. ಯಾಕೆಂದರೆ ಒಂದು ಕೋಮುವಾದಿ ಪಕ್ಷ ಅಧಿಕಾರದಲ್ಲಿದೆ. ಹೀಗಿರುವಾಗ ನಾಡಿನಲ್ಲಿ ಕೋಮುವಾದ ನಡೆಯದೆ ಇನ್ನೇನು ಪ್ರೀತಿವಾದ ನಡೆಯುತ್ತದೆಯೇ?

- ಶಾಹಿದ್, ಬಂಸಾಲೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 05-09-2012

ದನಿ ಇಲ್ಲದ 'ಅಟ್ಟಹಾಸ'

ಎಂ.ಆರ್.ರಮೇಶ್ ನಿರ್ದೇಶನದ 'ಅಟ್ಟಹಾಸ' ಚಿತ್ರ ಆರಂಭದಿಂದಲೂ ಒಂದಲ್ಲ ಒಂದು ವಿವಾದದಲ್ಲಿ ಸಿಲುಕಿಹಾಕಿಕೊಂಡಿದೆ. ಈ ಚಿತ್ರ ಡಾ. ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಕಿಡ್ನಾಪ್ ಮಾಡಿದ್ದ ಪ್ರಕರಣಕ್ಕೆ ಸಂಬಂಧಪಟ್ಟದ್ದು. ಇದರ ಬಗ್ಗೆ ಆರಂಭದಲ್ಲೇ ವೀರಪ್ಪನ್ ಪತ್ನಿ ಮುತ್ತುಲಕ್ಷ್ಮಿ ಅಪಸ್ವರ ಎತ್ತಿದ್ದರು. ಅದಾದನಂತರ ಕೆಲವರು "ಈ ಚಿತ್ರದ ಕತೆ ನನ್ನದು" ಎಂದು ತಗಾದೆ ತೆಗೆದಿದ್ದರು. ಇದೆಲ್ಲದ ಮಧ್ಯೆ ಈ ಚಿತ್ರದ ನಿರ್ಮಾಣದ ಪಾಲುದಾರರೊಬ್ಬರು ನಿಧನ ಹೊಂದಿದ್ದೂ ಸುದ್ದಿಯಾಯಿತು.

ಈಗ ಇವೆಲ್ಲ ಸುದ್ದಿ ಮತ್ತು ವಿವಾದಕ್ಕಿಂತಲೂ ದೊಡ್ಡದಾದ ಮತ್ತೊಂದು ಸುಳಿಯಲ್ಲಿ 'ಅಟ್ಟಹಾಸ' ಚಿತ್ರ ಸಿಕ್ಕಿಹಾಕಿಕೊಂಡಿದೆ. ನಿಮಗೆ ಗೊತ್ತಿರುವಂತೆ ಈ ಚಿತ್ರದಲ್ಲಿ ರಾಜ್‌ಕುಮಾರ್ ಅವರ ಪಾತ್ರವನ್ನು ಹಿಂದಿಯ ಜನಪ್ರಿಯ ನಟ ಸುರೇಶ್ ಒಬೆರಾಯ್ ನಿರ್ವಹಿಸಿದ್ದಾರೆ. ಈಗ ಆ ಪಾತ್ರಕ್ಕೆ ಯಾರ ಕೈಯಲ್ಲಿ ಡಬ್ಬಿಂಗ್ ಮಾಡಿಸುವುದು ಎಂಬುದೇ ನಿರ್ದೇಶಕ ಎಂ.ಆರ್.ರಮೇಶ್ ಅವರಿಗೆ ದೊಡ್ಡ ಸಮಸ್ಯೆಯಾಗಿದೆ. ಆರಂಭದಲ್ಲಿ ರಮೇಶ್ ಸಿನಿಮಾ ರಂಗದ ಕಾರ್ಮಿಕ ನಾಯಕ ಅಶೋಕ್ ಅವರಲ್ಲಿ ಒಬೆರಾಯ್ ಮಾಡಿರುವ ಪಾತ್ರಕ್ಕೆ ಕಂಠದಾನ ಮಾಡುವಂತೆ ಕೇಳಿಕೊಂಡಿದ್ದರು. ಅದಕ್ಕೆ ಅಶೋಕ್ ಒಪ್ಪಿಗೆಯನ್ನೂ ನೀಡಿದ್ದರು. ಆದರೆ ಇತ್ತೀಚೆಗೆ ಅಶೋಕ್ "ನಾನು ಯಾವುದೇ ಕಾರಣಕ್ಕೂ ಆ ಪಾತ್ರಕ್ಕೆ ಕಂಠದಾನ ಮಾಡುವುದಿಲ್ಲ" ಎಂದು ಅಶೋಕ್ ಘೋಷಿಸಿದ್ದಾರೆ. ಇದರಿಂದ ವಿಚಲಿತರಾದ ರಮೇಶ್ ಮತ್ತೊಬ್ಬ ಜನಪ್ರಿಯ ನಟರಾದ ರಮೇಶ್ ಭಟ್ ಅವರನ್ನು ಸಂಪರ್ಕಿಸಿದ್ದಾರೆ. ಅವರೂ ಕೂಡ ರಮೇಶ್ ಅವರ ಮನವಿಗೆ ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಕೊನೆಗೆ ಬೇರೆ ಉಪಾಯವಿಲ್ಲದೇ ಮತ್ತೊಬ್ಬ ಜನಪ್ರಿಯ ನಟ ಶ್ರೀನಿವಾಸ ಮೂರ್ತಿ ಅವರ ಮನೆಗೆ ತೆರಳಿ ಈ ಪಾತ್ರಕ್ಕೆ ಕಂಠದಾನ ಮಾಡುವಂತೆ ಕೇಳಲು ರಮೇಶ್ ಹೋಗಿದ್ದಾರೆ. ಆಗ ಶ್ರೀನಿವಾಸ ಮೂರ್ತಿ ಅವರು "ಈ ಪಾತ್ರಕ್ಕೆ ಸುರೇಶ್ ಒಬೆರಾಯ್ ಅವರನ್ನು ಹಾಕುವ ಬದಲು ನಮ್ಮವರೇ ಆದ ನಟ ಅಶೋಕ್ ಅವರನ್ನು ಹಾಕಿದ್ದಾದರೆ ನಿಮಗೆ ಏನು ನಷ್ಟವಾಗುತಿತ್ತು? ಒಬೆರಾಯ್‌ಗಿಂತ ಅಶೋಕ್ ರಾಜ್‌ಕುಮಾರ್‌ರಂತೆ ಕಾಣಿಸುವುದಿಲ್ಲವೇ? ನಿಮಗೆಲ್ಲ ಪರಭಾಷಾ ಕಲಾವಿದರ ಬಗ್ಗೆ ವ್ಯಾಮೋಹ. ಈಗ ಅವರು ಮಾಡಿದ ಪಾತ್ರಕ್ಕೆ ನಾವು ಧ್ವನಿ ನೀಡಬೇಕೇ?" ಎಂದು ನೇರವಾಗಿಯೇ ರಮೇಶ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅಷ್ಟೇ ಅಲ್ಲ, "ಯಾವುದೇ ಕಾರಣಕ್ಕೂ, ಎಷ್ಟೇ ಹಣ ಕೊಟ್ಟರೂ ನಾನು ಕೂಡ ಈ ಪಾತ್ರಕ್ಕೆ ಕಂಠದಾನ ಮಾಡುವುದಿಲ್ಲ" ಎಂದು ಹೇಳಿ ರಮೇಶ್ ಅವರನ್ನು ಬರಿಗೈಯಲ್ಲಿ ವಾಪಸ್ ಕಳಿಸಿದ್ದಾರೆ ಶ್ರೀನಿವಾಸಮೂರ್ತಿ.



ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು. ಮೊದಲನೆಯದಾಗಿ ಈ ಚಿತ್ರದಲ್ಲಿ ರಾಜ್‌ಕುಮಾರ್ ಅವರ ಪಾತ್ರ ಹೇಗೆ ಮೂಡಿಬಂದಿದೆ ಎಂಬುದು ಯಾರಿಗೂ ಗೊತ್ತಿಲ್ಲ, ಎರಡನೆಯದಾಗಿ, ಈ ಪಾತ್ರಕ್ಕೆ ಕಂಠದಾನ ಮಾಡುವಾಗ ಹೆಚ್ಚುಕಡಿಮೆಯಾದರೆ ರಾಜ್ ಅಭಿಮಾನಿಗಳು ಸಿಟ್ಟಿಗೇಳಬಹುದು ಎಂಬ ಆತಂಕವೂ ಈ ಕಲಾವಿದರಿಗೆ ಇದ್ದೇ ಇದೆ. ಈ ಕಾರಣಗಳಿಗಾಗಿ ಈಗ ಯಾರೂ ಮುಂದೆ ಬಂದು ರಾಜ್‌ಕುಮಾರ್ ಪಾತ್ರಕ್ಕೆ ಕಂಠದಾನ ನೀಡಲು ಉತ್ಸಾಹ ತೋರಿಸುತ್ತಿಲ್ಲ. ಈ ಒಂದು ಕಾರಣಕ್ಕಾಗಿ ಈಗ 'ಅಟ್ಟಹಾಸ' ಚಿತ್ರದ ಬಿಡುಗಡೆ ವಿಳಂಬವಾಗುತ್ತಿದೆ. ಸದ್ಯಕ್ಕೆ ಈ ಚಿತ್ರದ ಎಲ್ಲಾ ಕೆಲಸ ಮುಗಿಸಿರುವ ನಿರ್ದೇಶಕ ರಮೇಶ್ ಯಾರ ಕೈಯಲ್ಲಿ ಅಣ್ಣಾವ್ರ ಪಾತ್ರಕ್ಕೆ ಕಂಠದಾನ ಮಾಡಿಸಬೇಕೆಂದು ತಲೆ ಕೆಡಿಸಿಕೊಂಡು ಕುಳಿತುಕೊಂಡಿದ್ದಾರೆ.



'ಈಗ' ಬೈಕ್ ಸಂಚಾರ



ಸುದೀಪ್ ಖಳನಾಯಕನಾಗಿ ನಟಿಸಿರುವ 'ಈಗ' ಎಂಬ ತೆಲುಗು ಚಿತ್ರ ವಿಶ್ವಾದ್ಯಂತ ಜನಪ್ರಿಯವಾಗಿದ್ದು ನಿಮಗೆ ಗೊತ್ತಿರುವ ವಿಷಯ. ಈ ಒಂದೇ ಒಂದು ಚಿತ್ರದಿಂದ ಲೋಕಲ್ ಹುಡುಗ ಸುದೀಪ್ ಈಗ ಗ್ಲೋಬಲ್ ಆಗಿದ್ದಾನೆ. ಇಂತಹ ಚಿತ್ರದ ವಿಜಯೋತ್ಸವವನ್ನು ಸುದೀಪ್ ಹೇಗೆ ಆಚರಿಸುತ್ತಾರೆ ಎಂಬ ಕುತೂಹಲ ಉದ್ಯಮದವರಿಗೆ ಇದ್ದೇ ಇದೆ. ಸಾಧಾರಣವಾಗಿ ಒಂದು ಪಂಚತಾರಾ ಹೊಟೆಲ್‌ನಲ್ಲಿ ಸೇರಿ ಬೆಳಗಿನಜಾವದವರೆಗೆ ಕುಡಿದು ಎಂಜಾಯ್ ಮಾಡುವುದು ಸಿನಿಮಾರಂಗದಲ್ಲಿ ಸಂಪ್ರದಾಯ. ಆದರೆ ಸುದೀಪ್ ಎಲ್ಲ ವಿಷಯದಲ್ಲೂ ವಿಭಿನ್ನ ತಾನೆ?



ಪತ್ರಿಕೆಗೆ ತಿಳಿದುಬಂದಿರುವ ಮಾಹಿತಿ ಪ್ರಕಾರ ಸುದೀಪ್ 'ಈಗ' ಚಿತ್ರದ ವಿಜಯೋತ್ಸವವನ್ನು ಗೋವಾದಲ್ಲಿ ಆಚರಿಸಲು ನಿರ್ಧರಿಸಿದ್ದಾರಂತೆ. ಆದರೆ ನಾವು ಅಂದುಕೊಂಡ ಹಾಗೆ ಅವರು ಗೋವಾಕ್ಕೆ ವಿಮಾನದಲ್ಲಿ ಹೋಗ ಬದಲಾಗಿ ದರ್ಶನ್ ಮತ್ತು ಇತರೆ ಸ್ನೇಹಿತರ ಜೊತೆ ಸುದೀಪ್ ಬೆಂಗಳೂರಿನಿಂದ ಗೋವಾಕ್ಕೆ ಬೈ ಹೋಗಲು ನಿರ್ಧರಿಸಿದ್ದಾರೆ.


ಬೆಂಗಳೂರಿನಿಂದ ಹಲವಾರು ಬೈಕ್‌ಗಳ ಮೇಲೆ ಹೊರಡುವ ಸುದೀಪ್ ತಂಡ ಮೊದಲ ಶಿವಮೊಗ್ಗದಲ್ಲಿ ತಂಗಲಿದೆ. ಶಿವಮೊಗ್ಗದಲ್ಲಿರುವ ಸುದೀಪ್ ಅವರ ಎಸ್ಟೇಟ್ ಈ ತಂಡದ ಬರುವಿ ಕಾಯುತ್ತಿದೆ. ಅಲ್ಲಿಂದ ಹೊರಟ ಸುದೀಪ್ ತಂಡದ ಮುಂದಿನ ಸ್ಟಾಪ್ ಕಾ ಒಂದು ರಾತ್ರಿಯನ್ನು ಕಾರವಾರದಲ್ಲಿ ಕಳೆದ ನಂತರ ಇಡೀ ತಂಡ ಗೋ ತೆರಳುತ್ತದೆ. ಗೋವಾದ ರೆಸಾರ್ಟ್‌ವೊಂ ಮೂರ್ನಾಲ್ಕು ದಿನ ಇವರೆಲ್ಲರೂ ಆರಾವ ಕಾಲ ಕಳೆಯಲು ನಿರ್ಧರಿಸಿ ಅದಾದನಂತರ ಮತ್ತೆ ಬಂದ ದಾರಿ ಬೆಂಗಳೂರಿಗೆ ವಾಪಸ್ಸಾಗುತ್ತಾರೆ.

ಇತ್ತೀಚೆಗೆ ಸುದೀಪ್ ಮತ್ತು ಗೆಳೆ ಹೀಗೇ ಬೆಂಗಳೂರಿನಿಂದ ಮಡಿಕೆ ಬೈಕ್‌ಗಳಲ್ಲಿ ಹೋಗಿ ಸುದ್ದಿ ಮಾಡಿದ್ದ ಟ್ರಿಪ್‌ನಿಂದ ಉತ್ತೇಜಿತರಾಗಿ ಇಡೀ ಗೋವಾಕ್ಕೆ ಹೊರಟುನಿಂತಿದೆ. ಅಂದ ಸುದೀಪ್ ಬೈಕ್‌ನಲ್ಲಿ ಹೋಗು ಎಲ್ಲರಿಗಿಂತ ಮುಂದೆ ಹೋಗುತ್ತ ಫಾಲೋ ಮಿ. ನೋ ಓವರ್‌ಟೇಕಿ ಎಂದು ಹೇಳುತ್ತಾರಂತೆ. ಚಿತ್ರರಂಗದ ಕ್ರಿಕೆ ಹೇಗೆ ಸುದೀಪ್ ಮುನ್ನುಗ್ಗುತ್ತಾರೋ ಹಾ ಬೈಕ್ ಓಡಿಸುವಾಗಲೂ ಎಲ್ಲರಿಗಿಂತ ಮು ಸಾಗುತ್ತಾರೆ.

ಏನೇ ಮಾಡಿದರೂ ಅದರಲ್ಲಿ ತನ್ನದೇ ಆದ ವೈಶಿಷ್ಟತೆ ತೋರುವ ಸುದೀಪ್ ತನ್ನ ಚಿತ್ರದ ವಿಜಯೋತ್ಸವದ ನೆಪ ಗೆಳೆಯರ ಜೊತೆಗೆ ಗೋವಾಕ್ಕೆ ಬೈಕ್‌ನಲ್ಲಿ ಹೋಗುತ್ತಿರುವ ವಿಶೇಷವಾಗಿಯೇ ಕಾಣಿಸುತ್ತಿದೆ.

ಕುಳ್ಳನ ಕರಾಮತ್ತು


ಮೊನ್ನೆ ದ್ವಾರಕೀಶ್ ಅವರ 70ನೇ ಹುಟ್ಟುಹಬ್ಬ ಏಟ್ರಿಯಾ ಹೊಟೇಲ್‌ನಲ್ಲಿ ವಿಜೃಂಭಣೆಯಿಂದ ಜರುಗಿತು. ಅದರ ಜೊತೆಜೊತೆಗೆ ಅವರ 49ನೇ ನಿರ್ಮಾಣದ ಚಿತ್ರವಾದ 'ಚಾರುಲತಾ' ಬಗ್ಗೆಯೂ ಒಂದಿಷ್ಟು ಪ್ರಚಾರ ಕಾರ್ಯಕ್ರಮವೂ ನಡೆಯಿತು.



ಈ ಕಾರ್ಯಕ್ರಮದ ಒಂದು ವೈಶಿಷ್ಟ್ಯವೆಂದರೆ ಇದೇ ಮೊದಲ ಬಾರಿಗೆ ಕನ್ನಡ ಚಿತ್ರರಂಗದ ಬಹುತೇಕ ಎಲ್ಲ ನಟ-ನಟಿಯರು, ನಿರ್ದೇಶಕರು, ನಿರ್ಮಾಪಕರು ಈ ಸಂತೋಷಕೂಟಕ್ಕೆ ಬಂದು ಚಿತ್ರರಂಗದ ಕುಳ್ಳನಿಗೆ ಅಭಿನಂದನೆಯನ್ನು ಸಲ್ಲಿಸಿದರು. ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗದ ಜನರು ಹೀಗೆ ಒಂದೇ ಕಡೆ ಜಮಾಯಿಸಿದ್ದೇ ಇಲ್ಲ. ಇದು ಕನ್ನಡ ಚಿತ್ರರಂಗ ಬದಲಾಗುತ್ತಿರುವುದನ್ನು ತೋರಿಸುತ್ತದೆಯೋ? ಅಥವಾ ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದ ದ್ವಾರಕೀಶ್ ಅವರ ಜನಪ್ರಿಯತೆಯನ್ನು ತೋರಿಸುತ್ತದೋ? ಎಂದು ಹೇಳುವುದು ಕಷ್ಟ. ಈ ಸಮಾರಂಭದಲ್ಲಿ ಮಾಜಿ ನಾಯಕಿಯರು - ಅಂದರೆ ದ್ವಾರಕೀಶ್ ಜಮಾನದ ನಾಯಕಿಯರು - ಮತ್ತು ಈಗಿನ ನಾಯಕರು ಕುಳ್ಳನಿಗೆ ಮುತ್ತಿನ ಸುರಿಮಳೆಯನ್ನು ನೀಡಿ ವಿಶೇಷವಾಗಿ ಅಭಿನಂದನೆ ಸಲ್ಲಿಸಿದ್ದು ಮೆಚ್ಚುವಂತಿತ್ತು, ಬಂದ ಅತಿಥಿಗಳೆಲ್ಲ ಚಿತ್ರರಂಗಕ್ಕೆ ದ್ವಾರಕೀಶ್ ಅವರ ಕೊಡುಗೆಯನ್ನು, ಅವರ ಸಾಹಸವನ್ನು, ಅವರ ರಸಿಕತೆಯನ್ನು ಅವರವರ ಭಾವಕ್ಕನುಗುಣವಾಗಿ ಹೇಳಿದ್ದು ಕೂಡ ವಿಶೇಷವಾಗಿತ್ತು, ದ್ವಾರಕೀಶ್ ಅವರ ಇಬ್ಬರು ಹೆಂಡತಿಯರು ಮತ್ತು ಅವರ ಕುಟುಂಬದ ಎಲ್ಲಾ ಸದಸ್ಯರು ಈ ಸಮಾರಂಭದಲ್ಲಿ ಭಾಗವಹಿಸಿ ಅದಕ್ಕೊಂದು ಹೊಸ ಕಳೆ ನೀಡಿದ್ದರು. ಈ ಸಮಾರಂಭಕ್ಕೆ ರಾತ್ರಿ 11.30 ನಂತರ ತಡವಾಗಿ ಬಂದು ತಮ್ಮದೇ ಆದ ಶೈಲಿಯಲ್ಲಿ ಅಭಿನಂದನೆ ಸಲ್ಲಿಸಿದವರೆಂದರೆ ಅಂಬರೀಷ್ ದಂಪತಿಗಳು. ಆದರೆ ಈ ಸಮಾರಂಭದಿಂದ ಗೈರುಹಾಜರಾದವರೆಂದರೆ ಭಾರತಿ ವಿಷ್ಣುವರ್ಧನ್ ಮತ್ತವರ ಕುಟುಂಬದವರು ಮಾತ್ರ. "ಈ ದ್ವಾರಕೀಶ್ ಎಂದೆಂದಿಗೂ 'ಹಾಲು ಕುಡಿಯುವ ಮಗುವಿನಂತೆ ಇರಲಿ'" ಎಂದು ವಿಶೇಷ ರೀತಿಯಲ್ಲಿ ಶುಭ ಹಾರೈಸಿದವರು ನಟ ಶಿವರಾಜ್‌ಕುಮಾರ್. ಚೇಂಬರ್ ಅಧ್ಯಕ್ಷರು ಮತ್ತು ಸಮಸ್ತ ಪದಾಧಿಕಾರಿಗಳು ವೇದಿಕೆಗೆ ಬಂದು ದ್ವಾರಕೀಶ್ ಅವರನ್ನು ಅಭಿನಂದಿಸಿದ್ದು ಕೂಡ ಇದೇ ಮೊದಲ ಬಾರಿಯಂತಿತ್ತು.

ಅವಳಿ ಕತೆಯೂ, ದುಪ್ಪಟ್ಟು ಲಾಭವ

'ಚಾರುಲತಾ' ದ್ವಾರಕೀಶ್ ಅವರ ನಿರ್ಮಾಣದ ಚಿತ್ರ ಎಂದು ಎಲ್ಲರಿಗೂ ಇದೆ. ಈ ಚಿತ್ರದಲ್ಲಿ ನಾಯಕಿ ಪ್ರಿಯಾಮಣಿ ಸಯಾಮಿ ಅವಳಿಗಳ (ಕೂಡು ಅವಳಿಗಳು) ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರಿಯಾಮಣಿ ಹೊರತುಪಡಿಸಿದರೆ ಜನಪ್ರಿಯ ಕಲಾವಿದರೂ ಈ ಚಿತ್ರದಲ್ಲಿಲ್ಲ, 'ವಿಷ್ಣುವರ್ಧನ' ಚಿತ್ರವನ್ನು ನಿರ್ದೇಶಿಸಿದ್ದ ಎನ್.ಕುಮಾರ್ ಈ ಚಿತ್ರವನ್ನೂ ನಿರ್ದೇಶಿಸಿದ್ದಾರೆ. ಆಫ್‌ಕೋರ್ಸ್ ಇದು ವಿದೇಶಿ ಚಿತ್ರವೊಂದರ ಜೆರಾಕ್ಸ್ ಕಾಪಿ ಎಂಬುದು ಎಲ್ಲರಿಗೂ ಗೊತ್ತೇ ಇದೆ. ಇಂತಹ ಚಿತ್ರವನ್ನು ಕಮರ್ಷಿಯಲ್ ಆಗಿ ದ್ವಾರಕೀಶ್ ಹೇಗೆ ಯಶಸ್ವಿ ಮಾಡುತ್ತಾರೆ ಎಂಬುದು ಎಲ್ಲರ ಪ್ರಶ್ನೆಯಾಗಿತ್ತು. ಆದರೆ ಈ ಪ್ರಚಂಡ ಕುಳ್ಳ ಈ ಚಿತ್ರವನ್ನು ಬಿಡುಗಡೆ ಮಾಡುವ ಮೊದಲೇ ಲಾಭ ಗಳಿಸಿದ್ದಾರೆ. ಅದು ಹೇಗೆ ಗೊತ್ತೇ? ಈಗಾಗಲೇ ಈ ಚಿತ್ರದ ಟಿ.ವಿ. ಹಕ್ಕನ್ನು ಸುಮಾರು ಒಂದುಕಾಲು ಕೋ ಮಾರಾಟ ಮಾಡಿದ್ದಾರೆ. ಹಾಗೆಯೇ ಈ ಚಿತ್ರದ ತಮಿಳು ಮತ್ತು ತೆಲುಗು ಅವತರಣಿಕೆ ಸುಮಾರು 75 ಲಕ್ಷಕ್ಕೆ ಮಾರಾಟ ಮಾಡಿದ್ದಾರಂತೆ. ವಾಸ್ತವವಾಗಿ ಈ ಚಿತ್ರಕ್ಕೆ ಖರ್ಚು ಮಾಡಿರುವುದು ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com